# ಮಕ್ಕಳ ಮನೋಸಾಮಾಜಿಕ ವಿಕಾಸ:
# ಎರಿಕ್ ಎರಿಕ್ಸನ್ ಸಂದರ್ಭದಲ್ಲಿ ಶೈಕ್ಷಣಿಕ ಮತ್ತು ಸಾಮಾಜಿಕ ನಿಹಿತಾರ್ಥಗಳು

ಸುನಿಲ್ ಬಾತ್ರಾ
ಸುನೀಲ್ ಬಾತ್ರಾ ಶಿಕ್ಷಾಂತರ ಶಾಲೆ, ಗುರುಗ್ರಾಮದ ಸಂಸ್ಥಾಪಕ ನಿರ್ದೇಶಕರು. 'ಶಿಕ್ಷಾರ್ಥ'ದ ಸಂಸ್ಥಾಪಕರೂ ಆಗಿರುವ ಇವರು ವಿವಿಧ ಪಾಲುದಾರರೊಡನೆ ಒಂದುಗೂಡಿ ಶಿಕ್ಷಣದ ಔಣತ್ಯಕ್ಕಾಗಿ ಸಂವಾದ ಹಾಗೂ ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಇವರ ಸಂಶೋಧನೆಯ ಕಾರ್ಯಕ್ಷೇತ್ರ ಪ್ರಗತಿಪರ ಶಿಕ್ಷಣ, ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ, ಹಾಗೂ ಶಿಕ್ಷಕರ ಔದ್ಯೋಗಿಕ ಬೆಳವಣಿಗೆ ಮತ್ತು ನಾವೀನ್ಯತೆಗಾಗಿ ಸೌಕರ್ಯಗಳು - ಇವುಗಳನ್ನು ಒಳಗೊಂಡಿದೆ.

---

ಆಧುನಿಕ ಸಮಾಜವು ಶಾಲಾ ಶಿಕ್ಷಣ, ಯಶಸ್ಸು, ಉದ್ಯೋಗ, ಮತ್ತು ಸಾಧನೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದು 'ಬೆಳೆಯುವಿಕೆ'ಯನ್ನು ಅತಿ ಕ್ಲಿಷ್ಟವಾಗಿಸಿದೆ. ತಮ್ಮ ಪಾತ್ರದ ಬಗ್ಗೆಯೇ ಗೊಂದಲಕ್ಕೀಡಾಗಿರುವ ಪೋಷಕರು, ಶಿಕ್ಷಕರು, ಶಾಲಾ ಮುಖ್ಯಸ್ಥರು, ಮತ್ತು ಸಾಮಾಜಿಕ ಚಿಂತಕರು ಮಕ್ಕಳು, ಹರೆಯದವರು, ಮತ್ತು ಕಿರಿಯ ವಯಸ್ಕರ ಜೀವನದ ಮೇಲಿನ ಹಲವಾರು ಪ್ರಭಾವಗಳಿಂದ ದಿಕ್ಕುಕಾಣದಂತಾಗಿದ್ದಾರೆ.

ಶಾಲಾ ಅವಧಿ ಗ್ರಾಮೀಣ ಮತ್ತು ನಗರದ ಸನ್ನಿವೇಶಗಳಲ್ಲಿ ಮಕ್ಕಳ ಜೀವನದ ಮೇಲೆ ಯಾವ ರೀತಿಯ ಪ್ರಭಾವ ಬೀರುತ್ತದೆ?[1] ಕೆಲವು ಮಕ್ಕಳ ಆತ್ಮಾಭಿಮಾನ ಇತರರಿಗಿಂತ ಕಡಿಮೆ ಮಟ್ಟದಲ್ಲಿರುವುದು ಏಕೆ? ಹರೆಯದವರು ಅಸಮಿತೆ ಹುಡುಕಾಟದಲ್ಲಿ ಯಾವ ರೀತಿಯ ಸಂಘರ್ಷಗಳನ್ನು ಅನುಭವಿಸುತ್ತಾರೆ? ಕೆಲವು ಶಿಕ್ಷಕರು ಮಾತ್ರ ಮಕ್ಕಳ ಅಭ್ಯುದಯಕ್ಕಾಗಿ ಶ್ರಮಿಸುವುದರ ಪ್ರಾಮುಖ್ಯತೆಯನ್ನು ಅರಿತುಕೊಂಡಂತೆ ಉಳಿದವರು ಏಕೆ ಅರ್ಥೈಸಿಕೊಂಡಿಲ್ಲ? ಮಕ್ಕಳ ಭಾವನಾತ್ಮಕ ಸ್ವಾಸ್ಥ್ಯ ತರಗತಿಯಲ್ಲಿ ಭಾಗವಹಿಸುವಿಕೆಯ ಮೇಲೆ ಪರಿಣಾಮ ಬೀರುತ್ತದೆಯೇ? ನವೀನ ತಂತ್ರಜ್ಞಾನಗಳು ಯುವ ಜನರ ನಡುವಿನ ವೈಯಕ್ತಿಕ ಸಂಬಂಧಗಳ ಮೇಲೆ ಯಾವ ರೀತಿಯ ಪ್ರಭಾವ ಬೀರುತ್ತಿವೆ?

ವಿಕಾಸ ಮನಃಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು, ವೈದ್ಯಕೀಯ ತಜ್ಞರು, ಆಪ್ತ ಸಮಾಲೋಚಕರು, ಮತ್ತು ಪ್ರಶಿಕ್ಷಕರ ಅನುಭವಗಳಿಂದ ಈ ಪ್ರಶ್ನೆಗಳ ಒಳನೋಟ ಸ್ಪಷ್ಟವಾಗುತ್ತಿದೆ. ಹೆಚ್ಚಿನ ಸಿದ್ಧಾಂತಿಗಳ ಸಂಶೋಧನೆಯ ಪ್ರಮುಖ ಉದ್ದೇಶ ಸಾಮಾಜಿಕ ಸಾಮರಸ್ಯದ ಹುಡುಕಾಟ (ಎಮಿಲಿ ಡರ್ಖೆಮ್, ಆಗಸ್ಟ್ ಕಾಂಟೆ, ಮಾರ್ಗರೆಟ್ ಮೀಡ್) ಮತ್ತು ಸಂತಸ, ಸಂತೃಪ್ತ ಆತ್ಮವಿಕಾಸವಾಗಿದೆ (ಕಾರ್ಲ್ ರೋಜರ್ಸ್, ಅಬ್ರಹಾಮ್ ಮ್ಯಾಸ್ಲೋವ್, ಹೋವರ್ಡ್ ಗಾರ್ಡನರ್).

ಚಿಂತಕ, ಚಿಕಿತ್ಸಕ, ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರಜ್ಞನಾದ ಎರಿಕ್ ಹೆಚ್. ಎರಿಕ್ಸನ್[2] ಮನುಷ್ಯನ ಬೆಳವಣಿಗೆಯ ವಿವಿಧ ಹಂತಗಳ ನಡುವೆ ಜೋಡಣೆಯನ್ನು ರೂಪಿಸಲು, ವಯಸ್ಕನೊಬ್ಬನಲ್ಲಿ ಪ್ರಬುದ್ಧತೆಯ ಬೆಳವಣಿಗೆ, ಹಾಗೂ ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧಗಳ ನಡುವೆ ಜೋಡಣೆಯನ್ನು ರೂಪಿಸಲು ಒಂದು ವಿಶಿಷ್ಟ ಸೈದ್ಧಾಂತಿಕ ಚೌಕಟ್ಟನ್ನು ಪ್ರಸ್ತಾಪಿಸಿದ. ಎರಿಕ್ಸನ್ ಸಿಗ್ಮಂಡ್ ಫ್ರಾಯ್ಡನ ಮನೋಲೈಂಗಿಕ ವಿಕಾಸ ಸಿದ್ಧಾಂತ ಮತ್ತು ಮಕ್ಕಳು ಹಾಗೂ ಕುಟುಂಬಗಳ ಜೊತೆಗೆ ಕೆಲಸ ಮಾಡಿದ ಅನುಭವದಿಂದ ತನ್ನ ಸಿದ್ಧಾಂತವನ್ನು ರೂಪಿಸಿದ. ಎರಿಕ್ಸನ್ ಮಾನವ ವ್ಯಕ್ತಿತ್ವದ ತನ್ನತನವನ್ನು ರೂಪಿಸುವಲ್ಲಿ ಮಾನವನ ವಿಕಾಸವನ್ನು ಪ್ರಭಾವಿಸುವ ಸಾಮಾಜಿಕ ಅಂಶಗಳು ಹೆಚ್ಚು ಮಹತ್ವಪೂರ್ಣವಾದವು ಎಂದು ನಂಬಿದ್ದ. ಮೂಲತಃ ಎರಿಕ್ಸನ್ ಸೈದ್ಧಾಂತಿಕ ಚೌಕಟ್ಟು

ಮನೋವಿಶ್ಲೇಷಕ ಮಾದರಿ[3] ಮತ್ತು ಚಿಕಿತ್ಸೆಯ ಅನುಭವಗಳಿಂದ ರೂಪಿತಗೊಂಡಿದ್ದರೂ ಸಹ ಶಿಕ್ಷಕರು, ಪೋಷಕರು, ವ್ಯಾಸಂಗ ಪಠ್ಯಕ್ರಮ ರೂಪಕರು, ವಿಶೇಷ ಶಿಕ್ಷಣಶಾಸ್ತ್ರಜ್ಞರು, ಶಾಲಾ ಆಪ್ತ ಸಮಾಲೋಚಕರು, ಶಾಲಾ ಮುಖ್ಯಸ್ಥರು, ಮತ್ತು ನೀತಿ ಆಯೋಜಕರಿಗೆ ಪ್ರಮುಖ ನಿಹಿತಾರ್ಥವನ್ನು ಹೊಂದಿದೆ.

ಪ್ರತಿಯೊಂದು ಮಗು ತನ್ನ ಹುಟ್ಟಿನಿಂದ ವೃದ್ಧಾಪ್ಯದವರೆಗೆ ಹಲವಾರು ವಿಕಾಸದ ಹಂತಗಳನ್ನು ದಾಟುತ್ತದೆ ಎಂದು ಎರಿಕ್ಸನ್ ನಂಬುತ್ತಾನೆ. ಪ್ರತಿಯೊಬ್ಬ ಮನುಷ್ಯ ತನ್ನೊಳಗಿನ ಮಗುವಿನ ಒಳಧ್ವನಿ, ವೈಯಕ್ತಿಕ ಮಾನಸಿಕ ಹಾಗೂ ಭಾವನಾತ್ಮಕ ತುಡಿತಗಳು, ಮತ್ತು ಸಾಮಾಜಿಕ ಪ್ರಭಾವಗಳ ರೀತಿಗಳ ನಡುವಿನ ತಾಕಲಾಟವನ್ನು ತನ್ನದೇ ಆದ ನಿಯಂತ್ರಣ ಪ್ರಜ್ಞೆಯ ಮೂಲಕ ಹುಡುಕಬೇಕು. ಪ್ರತಿಯೊಂದು ಹಂತದಲ್ಲೂ ಮಗು ಹೊಸ ಸ್ವಭಾವಗಳು ಮತ್ತು ತನ್ನ ಹಾಗೂ ಇತರರನ್ನು ಗ್ರಹಿಸುವ ರೀತಿಯನ್ನು ಕಲಿಯುತ್ತ ಸಮತೂಕದ ನಿಯಂತ್ರಣದ ಅರಿವನ್ನು ಪಡೆಯುತ್ತದೆ. ಈ ಎಲ್ಲಾ ಅನುಭವಗಳು ಒಟ್ಟಾಗಿ ಮಾನವನ ವಿಶಿಷ್ಟ ವ್ಯಕ್ತಿತ್ವದ ವಿಕಾಸಕ್ಕೆ ದಾರಿ ಮಾಡಿಕೊಡುತ್ತವೆ.

ಪ್ರತಿದಿನದ ಅನುಭವಗಳು ಆಟ, ಓದು, ಮತ್ತು ಬರಹ (ಅಥವಾ ಇವುಗಳ ಕೊರತೆ)ಗಳನ್ನೂ ಒಳಗೊಂಡಂತೆ ಕುಟುಂಬದ ಸದಸ್ಯರು ಹಾಗೂ ಸಮಗ್ರ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿನಿಮಯಗಳೊಂದಿಗೆ ತೊಡಗಿಸಿಕೊಳ್ಳುವಿಕೆ (ಅಥವಾ ಇವುಗಳ ಕೊರತೆ), ತಂತ್ರಜ್ಞಾನ ಮತ್ತು ಮಾಧ್ಯಮಗಳಿಗೆ ತೆರೆದುಕೊಳ್ಳುವಿಕೆ, ಮುಂತಾದವುಗಳನ್ನು ಒಳಗೊಂಡಿರುತ್ತವೆ. ಉದಾಹರಣೆಗೆ, ಮಕ್ಕಳ ಆಟವನ್ನು ಸಾಮಾಜಿಕ ವಿನಿಮಯದಂತಹ ಮಹತ್ವಪೂರ್ಣ ವಿಕಾಸದ ಅಗತ್ಯತೆಯ ಈಡೇರಿಕೆ ಹಾಗೂ ತಮ್ಮ ವಯಸ್ಸಿಗೆ ಅನುಗುಣವಾಗಿ ಸಮಸ್ಯೆಗಳ ಪರಿಹಾರವನ್ನು ಗುರಿಯಾಗಿರಿಸಿಕೊಂಡ ಮಕ್ಕಳ ತೊಡಗಿಸಿಕೊಳ್ಳುವಿಕೆ ಎಂದು ವ್ಯಾಖ್ಯಾನಿಸಲಾಗುತ್ತದೆ. ಮಕ್ಕಳಿಗೆ ಈ ರೀತಿಯ ತೊಡಗಿಸಿಕೊಳ್ಳುವಿಕೆಯನ್ನು ಅನುಭವಿಸಲು ಅಗತ್ಯವಿರುವ ಮಾನಸಿಕ ಮತ್ತು ಸಾಮಾಜಿಕ ಅವಕಾಶವನ್ನು ನಿರಾಕರಿಸಿದಾಗ ಅವರು ಆತ್ಮಸಂಶಯ ಹಾಗೂ ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತಾರೆ. ದೀರ್ಘಕಾಲದ ಆತ್ಮಸಂಶಯ ಬೆಳೆಯುತ್ತಿರುವ ಮಗುವಿನ ಆತ್ಮಾಭಿಮಾನದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಬಹುದು. ಇಂತಹ ಮಾದರಿಗಳು ದಿನನಿತ್ಯದ, ಆದರೆ ಬಹಳಷ್ಟು ಪರಿಣಾಮ ಬೀರಬಲ್ಲ ಸಂಧರ್ಭಗಳಿಂದ ದೊರೆಯಬಹುದು - ವಯಸ್ಕರು ಸಂಘರ್ಷಗಳನ್ನು ಸ್ವತಃ ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಮಕ್ಕಳಿಗೆ ತಡೆಯೊಡ್ಡಿ ತಾವೇ ಅವರಿಗೆ ಪರಿಹಾರವನ್ನು ಸೂಚಿಸುವುದು; ಸಮಸ್ಯೆಯೊಂದನ್ನು ತಾನೇ ಪರಿಹರಿಸಿಕೊಳ್ಳುವ ಮಗುವೊಂದರ ರೀತಿ ಶಿಕ್ಷಕರ ನಿರೀಕ್ಷೆಗೆ ಭಿನ್ನವಾಗಿರುವುದು; ಅಥವಾ ಮಗುವೊಂದು ತರಗತಿಯಲ್ಲಿ ತನ್ನ ಗ್ರಹಿಕೆಯನ್ನು ವ್ಯಕ್ತಪಡಿಸಿದಾಗ ಶಿಕ್ಷಕರು ಅದನ್ನು ಇತರರ ಪಠ್ಯಾಧಾರಿತ ಬೋಧನೆ ಮತ್ತು ಕಲಿಕೆಗೆ ಅಡ್ಡಿ ಎಂದು ಪರಿಗಣಿಸುವುದು.

ಪ್ರತಿಯೊಂದು ಶಾಲಾಧಾರಿತ ಸಂಬಂಧದ ಆಂತರ್ಯದಲ್ಲಿಯೂ ಸಹ - ಅದು ಸಮವಯಸ್ಕರು, ಶಿಕ್ಷಕರು, ಪುಸ್ತಕಗಳು, ಅಥವಾ ವಿಧ್ಯಾರ್ಥಿಗಳು ಆವರಿಸಿಕೊಂಡಿರುವ ಭೌತಿಕ ಸ್ಥಳವಾಗಿರಬಹುದು - ಎಲ್ಲಾ ಮಕ್ಕಳ ಸಾಮಾಜಿಕ ಹಾಗೂ ಭಾವನಾತ್ಮಕ ವಿಕಾಸಗಳು ನೆಲೆಗೊಂಡಿರುತ್ತವೆ. ಇದು ಬಹುತೇಕ ಗುರುತಿಸಲ್ಪಡದ, ಶ್ಲಾಘನೆಗೆ ಒಳಪಡದ ಮಾನವ ವಿಕಾಸದ ಅಂಶಗಳಾಗಿವೆ. ಕೌಶಲ್ಯ ಮತ್ತು ನಡವಳಿಕೆಗಳ ಬೋಧನೆಗೆ ಒತ್ತು ನೀಡುತ್ತಿರುವ ಪೂರ್ವಾಗ್ರಹ ಪೀಡಿತವಾದ ಈಗಿನ ಬೋಧನಾ ಕ್ರಮದಲ್ಲಿ 'ಬೆಳೆಯುವಿಕೆ'ಯ ಮೂಲಭೂತ ಅಂಶಗಳು ಕಡೆಗಣಿಸಲ್ಪಪಡುತ್ತಿವೆ. ಉದಾಹರಣೆಗೆ, ಎರಡನೆಯ ತರಗತಿ ಮೇಲ್ಪಟ್ಟ ಮಗುವಿಗೆ ರಟ್ಟು, ಮರಳು, ಮರ, ಹಾಗೂ ಕಾಗದಗಳಿಂದ ಕಾರ್ಯಮಾದರಿಗಳನ್ನು ರಚಿಸುವ ಬಯಕೆ ತನ್ನ ವೀಕ್ಷಿತ ಮತ್ತು ಕಾಲ್ಪನಿಕ ಆಲೋಚನೆಗಳಿಗೆ ರೂಪ ನೀಡುವ ಆಂತರಿಕ ಅಗತ್ಯತೆಯಾಗಿರುತ್ತದೆ. ಯೋಜನೆ, ರಚನೆ, ಮತ್ತು ಮರುಯೋಜನೆಗೆ ಮಕ್ಕಳನ್ನು ಪ್ರೋತ್ಸಾಹಿಸುವ ಅನುಭವಾತ್ಮಕ ಶಿಕ್ಷಣ 'ಉದ್ಯಮಶೀಲತೆ ಮತ್ತು ಗುರಿ'ಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಅವಕಾಶ ನೀಡುತ್ತದೆ. ಎಲ್ಲಿ ವ್ಯಾಸಂಗ ಕ್ರಮ ವ್ಯಕ್ತಿತ್ವದ ಪ್ರಭುದ್ಧತೆಗೆ ಅವಕಾಶ

ನೀಡುತ್ತದೆಯೋ, ಅಲ್ಲಿ ಮಕ್ಕಳು ಬೆಳಯುವಿಕೆಯ ಅತ್ಯಗತ್ಯ ಅಂಶಗಳನ್ನು ಅನುಭವಿಸುವ ಸಾಮರ್ಥ್ಯದಿಂದ ಆತ್ಮವಿಶ್ವಾಸವನ್ನು ಗಳಿಸುತ್ತಾರೆ. ಆದ್ದರಿಂದ, ಆಲೋಚನಾಶೀಲ ಬೋಧನಶಾಸ್ತ್ರದ ಅಗತ್ಯತೆ ಬುದ್ಧಿ ಪ್ರಚೋದನೆಯ ಉದ್ದೇಶಕ್ಕಷ್ಟೇ ಅಲ್ಲದೆ ಮನಸ್ಸು, ಹೃದಯ, ಮತ್ತು ಆತ್ಮ ಅನಿರ್ಭಂದಿತವಾಗಿ ಬೆಳೆಯಲು ಬೇಕಾದ ಸಾಮಾಜಿಕ ಹಾಗೂ ಭಾವನಾತ್ಮಕ ಕೊಂಡಿಗಳ ರಚನೆಯನ್ನು ಸಾಧ್ಯವಾಗಿಸುವುದಕ್ಕಾಗಿ ಕೂಡ ಇದೆ. ಜೊತೆಜೊತೆಯಾಗಿ, ಶಿಕ್ಷಕರನ್ನು ಸೂಕ್ಷ್ಮ, ಚಿಂತನಾಶೀಲ ಸಹಾಯಕರನ್ನಾಗಿಸಿ ಮಕ್ಕಳ ಸಾಮಾಜಿಕ ಮತ್ತು ಭಾವನಾತ್ಮಕ ಅನುಭವಗಳ ಆರೋಗ್ಯಕರ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ನೀಡಬಲ್ಲವರನ್ನಾಗಿಸಲು ತಯಾರಿ ಮತ್ತು ತರಬೇತಿ ಅತ್ಯಂತ ಪ್ರಮುಖವಾಗುತ್ತವೆ.

ಎರಿಕ್ಸನ್ನನ ಒಳನೋಟಗಳು, ದುರದೃಷ್ಟವಶಾತ್, ಪ್ರಪಂಚದ ಬಹಳಷ್ಟು ಭಾಗಗಳಲ್ಲಿ ಮತ್ತು ಭಾರತದಲ್ಲೂ ಸಹ, ಶೈಕ್ಷಣಿಕ ತರಬೇತಿಯಲ್ಲಿ (ಸೇವಾ ಪೂರ್ವ ಮತ್ತು ಸೇವಾ ನಿರತಗಳೆರಡರಲ್ಲೂ) ತಮ್ಮ ಅರ್ಹತೆಗೆ ತಕ್ಕ ಮಾನ್ಯತೆಯನ್ನು ಪಡೆದಿಲ್ಲವಾದ್ದರಿಂದ ನಿರ್ಲಕ್ಷತೆ ಹಾಗೂ ಅಪ್ರಾಮುಖ್ಯತೆಗೆ ಒಳಗಾಗಿವೆ. ಎರಿಕ್ಸನ್ನನ ಓದು ಕ್ಲಿಷ್ಟವಾದ್ದರಿಂದ, ಅದರಲ್ಲೂ ಮನೋವಿಶ್ಲೇಷಕ ಆಲೋಚನೆಯ ಪರಿಚಯ ಇಲ್ಲದವರಿಗೆ, ಶೈಕ್ಷಣಿಕ ರಚನೆ ಹಾಗೂ ಬಳಕೆಯಲ್ಲಿ ಆತನ ತತ್ವಗಳ ಸಮನ್ವಯತೆ ವಿರಳವಾಗಿದೆ.

ಎರಿಕ್ಸನ್ನನ ಚೌಕಟ್ಟು, ಕಲಿಕಾ ಬಿಕ್ಕಟ್ಟು ಹೊಂದಿದ ಮಕ್ಕಳ ಅಗತ್ಯತೆಯನ್ನೂ ಒಳಗೊಂಡಂತೆ, ಮಕ್ಕಳ ವಿಕಸನದ ಅಗತ್ಯತೆಗಳು ಹಾಗೂ ಅವರ ವಿದ್ಯಾಭ್ಯಾಸದ ನಡುವಿನ ಅತ್ಯವಶ್ಯಕ ಕೊಂಡಿಯನ್ನು ಒದಗಿಸುತ್ತದೆ. ಎರಿಕ್ಸನ್ನನ ಒಳನೋಟಗಳ ಸೂಕ್ತ ಸಮನ್ವಯತೆಯ ಮೂಲಕ ಕಲಿಕೆಯನ್ನು ಸಹನೀಯ, ವಿಶ್ವಾಸಾರ್ಹ, ಸೃಜನಾತ್ಮಕ, ಹಾಗೂ ವಿಕಸನಶೀಲವಾಗುವಂತೆ[4] ವರ್ತನಾವಾದಿ ಬೋಧನೆಯಿಂದ ಅನುಭವಾತ್ಮಕ ಮತ್ತು ಒಳಗೊಳ್ಳುವಿಕೆಯ ಕಲಿಕೆಯತ್ತ ಬದಲಾವಣೆಯನ್ನು ಸುಗಮಗೊಳಿಸಬಹುದು. ಎರಿಕ್ಸನ್ ಚೌಕಟ್ಟು ಆಧಾರಿತ ಶೈಕ್ಷಣಿಕ ರಚನೆಯ ಒಳನೋಟ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ (NCF 2005) ನಿರೂಪಿಸಿರುವ ಯೋಜನೆಗಳು ಮತ್ತು ಯಶಪಾಲ್ ಸಮಿತಿ ವರದಿಯಂತಹ (1993) ಇತರ ಪ್ರಮುಖ ಶೈಕ್ಷಣಿಕ ಆಯೋಗಗಳ ವರದಿಗಳೊಂದಿಗೆ ಸಹ ಸ್ಪಷ್ಟ ಸಹಮತವನ್ನು ಹೊಂದಿದೆ.

ಎರಿಕ್ಸನ್ ಪರ್ಯಾಲೋಚನೆ ಮತ್ತು ನಿರ್ದೇಶಿತ ಚಿಕಿತ್ಸೆಯ[5] ಮೂಲಕ ವಯಸ್ಕರ ಶಮನಕ್ರಿಯೆ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಸಹ ಅವಕಾಶವನ್ನು ನೀಡುತ್ತಾನೆ. ಎರಿಕ್ಸನ್ ಚೌಕಟ್ಟಿನ ಮೂಲಕ ಗಳಿಸಿದ ಪ್ರಜ್ಞೆಯು ವಯಸ್ಕರನ್ನು ಭಾವನಾತ್ಮಕ ತೊಡರುಗಳು ಮತ್ತು ಮಕ್ಕಳು, ಸಮಾಜ, ಹಾಗೂ ತಮ್ಮ ಪಾತ್ರವನ್ನು ಅಂತರ್ಗತಗೊಂಡ ಗ್ರಹಿಸುವಿಕೆಯ ರೀತಿಯಿಂದ ಬಿಡುಗಡೆಗೊಳಿಸಲು ಸಹಾಯ ಮಾಡಬಲ್ಲದು. ಇದು ವಯಸ್ಕರಿಗೆ ಮಕ್ಕಳ ಬೆಳವಣಿಗೆಯ ಹಂಬಲಗಳನ್ನು ಪೂರೈಸುವುದು, ಅವರ ಸಾಮಾಜಿಕ ತಲ್ಲಣಗಳನ್ನು ನಿಭಾಯಿಸುವುದು, ಮತ್ತು ಅವರು ಸ್ವನಿಯಂತ್ರಣದ ರೀತಿಗಳನ್ನು ಹುಡುಕಿ ಅವನ್ನು ಅಳವಡಿಸಿಕೊಳ್ಳಲು ಸಹಾಯ ಮಾಡುವ ಮೂಲಕ ಮಕ್ಕಳೊಡನೆ ತೊಡಗಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

ಎರಿಕ್ಸನ್ ಮತಾಚರಣೆ, ಬದಲಾವಣೆ, ಸಮುದಾಯ ವಿನಿಮಯಗಳ ಸಂಕೀರ್ಣ ವಿಶ್ಲೇಷಣೆಯ ಮೂಲಕ ಸಾಮಾಜಿಕ ಶ್ರೇಣಿಗಳ ವಿಕಾಸ ಮತ್ತು ಮಾನವನ ಸಾಮೂಹಿಕ ಹಾಗೂ ವೈಯಕ್ತಿಕ ವ್ಯಕ್ತಿತ್ವದ ಪ್ರಭುದ್ಧತೆಯನ್ನು ಸಹ ತನ್ನ ಸೈದ್ಧಾಂತಿಕ ಅಭಿಪ್ರಾಯಗಳ ಮೂಲಕ ವಿವರಿಸುತ್ತಾನೆ. ಈತನ ಬರಹಗಳು ಸಂಕೀರ್ಣವಾಗಿದ್ದು ಅನೇಕ ಬೋಧನಾ ಶಾಖೆಗಳ (ಜೀವಶಾಸ್, ಮಾನವಶಾಸ್ತ್ರ, ಮನಶಾಸ್ತ್ರ, ತತ್ವವಿಜ್ಞಾನ, ಮತ್ತು ಧರ್ಮಶಾಸ್ತ್ರ) ಪದಗಳ ಉಗಮ ಪ್ರಕ್ರಿಯೆಗೆ ಕಾರಣವಾಗಿವೆ, ಮತ್ತು ವ್ಯಕ್ತಿ ಹಾಗೂ ಸಾಮಾಜಿಕ ವಿಕಾಸಗಳ ನಡುವೆ ವ್ಯಕ್ತ ಕೊಂಡಿಗಳನ್ನು ಬೆಸೆದಿವೆ. ಮಾನವನ ಜೀವನಚಕ್ರ ವಿಕಾಸದ ಕುರಿತು ಎರಿಕ್ಸನ್ನನ ಪ್ರಮುಖ ಆಲೋಚನೆಗಳನ್ನು ಪ್ರಸ್ತುತ ಪಡಿಸಲು ಆತನ ಮೂಲ ಬರಹಗಳಿಂದ ಆರಿಸಿದ ಭಾಗವನ್ನು ಈ ಕೆಳಗೆ ನೀಡಲಾಗಿದೆ.

*ಪ್ರತಿಯೊಬ್ಬ ವ್ಯಕ್ತಿಯೂ ಹುಟ್ಟಿದಾಕ್ಷಣ ನಗ್ನ ಅಸಹಾಯಕತೆ ಅನುಭವಿಸುತ್ತಾನೆ; ಇದು ದೀರ್ಘಕಾಲದ ಶೈಶವಾವಸ್ಥೆಯ ಅವಲಂಬನೆಯಾಗಿ ಮುಂದುವರೆದರೂ ಸಹ ತನ್ನದೇ ಆದ ಪರಿಸರವನ್ನು ಸೃಷ್ಟಿಸಿಕೊಳ್ಳಬಲ್ಲ ಸಂಚಿತ ಶಕ್ತಿ ಮನುಷ್ಯ ಜೀವನದ ವಿರೋಧಾಭಾಸ ಎಂದು ಕಾಣುತ್ತದೆ. ಆದಾಗ್ಯೂ, ನವಜಾತ ಶಿಶುವಿನ ಅಶಕ್ತತೆ ನಿಜಕ್ಕೂ ಅವಲಂಬಿತವಾದುದು. ಈ ಭೌತಿಕ ಪ್ರಪಂಚದ ಮೇಲೆ ಯಾವುದೇ ರೀತಿಯ ಪ್ರಭುತ್ವವನ್ನು ಹೊಂದಲು ಅಸಾಧ್ಯವಾದರೂ ಸಹ, ನವಜಾತ ಶಿಶುವಿಗೆ ನೀಡಲ್ಪಟ್ಟ ರೂಪ ಮತ್ತು ಪ್ರತಿಕ್ರಿಯೆಗಳು ಕೋಮಲ ಪ್ರವೃತ್ತಿ ಹೊಂದಿದ ವಯಸ್ಕರನ್ನು ಆಕರ್ಷಿಸಿ ಅದರ ಅಗತ್ಯತೆಗಳನ್ನು ಪೂರೈಸುವಂತೆ ಮಾಡುತ್ತವೆ; ಅದರ ಏಳ್ಗೆಯ ಬಗ್ಗೆ ಕಳಕಳಿ ಇರುವವರಲ್ಲಿ ಆಸ್ಥೆಯನ್ನು ಹುಟ್ಟಿಸುತ್ತವೆ; ವಯಸ್ಕರ ಪಾಲನೆ ವಹಿಸುವ ಗುಣವನ್ನು ಪ್ರಚೋದಿಸುತ್ತ ಅವರು ಕಾಳಜಿ ತೋರುವಂತೆ ಮಾಡುತ್ತವೆ. ನಾನು ಶುಶ್ರೂಷೆ, ಕಾಳಜಿ, ಪಾಲನೆ ಎನ್ನುವ ಶಬ್ದಗಳನ್ನು ಪುನರಾವರ್ತಿಸುತ್ತಿರುವುದು ಕಾವ್ಯಾತ್ಮಕ ಪರಿಣಾಮಕ್ಕಾಗಿ ಅಲ್ಲ, ಬದಲಾಗಿ ಸಾಮಾನ್ಯವಾಗಿ ಜೀವನದಲ್ಲಿ ಮತ್ತು ಅದರಲ್ಲೂ ನಿರ್ದಿಷ್ಟವಾಗಿ ಮನುಷ್ಯ ಜೀವನದಲ್ಲಿ, ಹಸಿಗೂಸಿನ ಅಸಹಾಯಕತೆ ಮತ್ತು ಮುಗ್ಧ ಅಗತ್ಯತೆಗಳ ಸಾಧು ಸ್ವಭಾವ ತಮ್ಮದೇ ಆದ ಶಕ್ತಿಯನ್ನು ಹೊಂದಿವೆ ಎನ್ನುವ ಮೂಲಭೂತ ಸಂಗತಿಯನ್ನು ಎತ್ತಿ ತೋರಿಸಲು. ಅರಕ್ಷಿತ ಸ್ಥಿತಿ ಹೊಂದಿದ ಶಿಶುಗಳು ತಮ್ಮ ವಶದಲ್ಲಿ ತಾಯಂದಿರನ್ನು ರಕ್ಷಿಸಲು ಕುಟುಂಬ, ಕುಟುಂಬ ವ್ಯವಸ್ಥೆಯನ್ನು ಬೆಂಬಲಿಸಲು ಸಮಾಜ, ಶುಶ್ರೂಷೆ ಮತ್ತು ತರಬೇತಿಯ ವ್ಯವಸ್ಥೆಗಾಗಿ ಸಾಂಸ್ಕೃತಿಕ ನಿರಂತರತೆಯನ್ನು ಒದಗಿಸುವ ಸಂಪ್ರದಾಯಗಳನ್ನು ಹೊಂದಿವೆ. ಆದಾಗ್ಯೂ, ಶಿಶುವು ಮಾನವನಾಗಿ ವಿಕಾಸ ಹೊಂದಲು ಇವೆಲ್ಲವುದರ ಅಗತ್ಯತೆ ಇದೆ. ಏಕೆಂದರೆ ಆತನ ಪರಿಸರವು ಮನುಷ್ಯನಿಗೆ ಬಾಹ್ಯ ಸಮಗ್ರತೆ ಮತ್ತು ನಿರಂತರತೆಯನ್ನು ಖಚಿತವಾಗಿ ಒದಗಿಸಿಕೊಡಬೇಕಾಗುತ್ತದೆ. ಹಾಗೂ, ದ್ವಿತೀಯ ಗರ್ಭದ ರೀತಿಯಲ್ಲಿ, ಆತನಿಗೆ ತನ್ನ ವಿಶಿಷ್ಟ ಹೆಜ್ಜೆಗಳ ಮೂಲಕ ವಿಭಿನ್ನ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಮತ್ತು ಅವುಗಳನ್ನು ಮಾನಸಿಕ ಚಿತ್ತಕ್ಷೋಭೆಗಳ ಸರಣಿಯ ಮೂಲಕ ಒಂದುಗೂಡಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.*

*ಮನೋವೈದ್ಯಶಾಸ್ತ್ರವು ಇತ್ತೀಚಿನ ವರ್ಷಗಳಲ್ಲಿ ತಾಯಿ-ಮಗು ಸಂಬಂಧದ ಬಗ್ಗೆ ಕಳಕಳಿ ತೋರುತ್ತಿದೆ ಮತ್ತು ಮನುಷ್ಯನ ಚಿತ್ತಸ್ವಾಸ್ಥ್ಯ ಹಾಗೂ ಪ್ರಬುದ್ಧತೆಯ ಹೊಣೆ ಹೊತ್ತುಕೊಂಡಿದೆ. ಎಳೆಯರ ವಿಕಾಸದ ಬಗೆಗಿನ ಈ ಕೇಂದ್ರೀಕರಣ ಇತ್ತೀಚಿನ ವರ್ತನಾಶಾಸ್ತ್ರದ ಪ್ರಬಲ ಬೆಂಬಲವನ್ನು ಪಡೆದಂತಿದೆ. ಈ ಶಾಸ್ತ್ರವು ಸ್ವಾಭಾವಿಕ ಕೌಶಲ್ಯಗಳ ಮೂಲಕ ಸಂತತಿಯ ಉಳಿವಿಗಾಗಿ ತಾಯಿ ಪ್ರಾಣಿ ಮತ್ತು ಎಳೆಯ ಪ್ರಾಣಿ ಒಬ್ಬರಿಗೊಬ್ಬರು ತೋರ್ಪಡಿಸುವ ನಡವಳಿಕೆಗಳ ವಿಶ್ಲೇಷಣೆ ಮಾಡುತ್ತದೆ. ಆದಾಗ್ಯೂ, ವರ್ತನಾಶಾಸ್ತ್ರವು ಪ್ರಾಣಿ ಜೀವನದ ಮೊದಲಾರ್ಧವನ್ನು (ಉದಾಹರಣೆಗೆ ಗೂಡನ್ನು ಆಶ್ರಯಿಸುವ ಕೆಲ ಹಕ್ಕಿಗಳು) ಹರೆಯವನ್ನೂ ಒಳಗೊಂಡ ಮನುಷ್ಯನ ಸಂಪೂರ್ಣ ವಯಸ್ಕ-ಪೂರ್ವ ಜೀವನದೊಂದಿಗೆ ತುಲನೆ ಮಾಡಬೇಕು. ಏಕೆಂದರೆ ವ್ಯವಸ್ಥಿತ ಸನ್ನಿವೇಶಗಳಲ್ಲಿ ಅನುಕ್ರಮವಾಗಿ ಮತ್ತು ಒಬ್ಬರನ್ನೊಬ್ಬರು ವ್ಯಾಪಿಸಿಕೊಂಡು ಜೊತೆಗೂಡಿ ಬಾಳುತ್ತಿರುವ ಪೀಳಿಗೆಗಳಲ್ಲಿ ಹುಟ್ಟುವ ಜೀವನಾಧಾರವಾದ ಸದ್ಗುಣವು ಮಾತ್ರ ಮನುಷ್ಯನ ಮಾನಸಿಕ ಉಳಿವಿನ ಸಂರಕ್ಷಣೆಯಾಗಿದೆ. ಇಲ್ಲಿ, ಜೊತೆಗೂಡಿ ಬಾಳುವಿಕೆ ಎಂದರೆ ಪ್ರಾಸಂಗಿಕ ನಂಟಿಗಿಂತಲೂ ಹೆಚ್ಚಿನದು. ಇದರ ಅರ್ಥವೇನೆಂದರೆ, ಜೀವನಚಕ್ರದ ಹಂತಗಳೊಂದಿಗೆ ಇತರರನ್ನು ಮುಂದೂಡುತ್ತ ತಾನೂ ಸಾಗುವ ರೀತಿಯಲ್ಲಿ ವ್ಯಕ್ತಿಯೊಬ್ಬನ ಜೀವನ ಹಂತಗಳು 'ಅಂತರ್ ಜೀವಿಕೆ'ಯಾಗಿವೆ. ಆದ್ದರಿಂದ ಇತ್ತೀಚಿನ ವರ್ಷಗಳಲ್ಲಿ ನಾನು 'ಉಗಮಶಾಸ್ತ್ರ'ವೆಂದು ಕರೆಸಿಕೊಳ್ಳುವ (ಮೂಲಸಂಕಲ್ಪ ಸಿದ್ಧಾಂತಕ್ಕೆ ಹೋಲಿಸಿದಾಗ) ಮಾರ್ಗವನ್ನು ಅನುಸರಿಸುವ ಬದಲು ಸಂಪೂರ್ಣ ಜೀವನಚಕ್ರವನ್ನು ಒಂದು ಸಮಗ್ರ ಮನೋಸಾಮಾಜಿಕ ಸಂಗತಿ ಎಂದು ಚಿತ್ರಿಸುವ ಪ್ರಯತ್ನ ಮಾಡಿದ್ದೇನೆ. ಉಗಮಶಾಸ್ತ್ರ ಮಾರ್ಗವು ವಿಕಾಸದ ಅರ್ಥವನ್ನು ಮೂಲಭೂತವಾಗಿ ಶಿಶುವಿನ ಆರಂಭಗಳ ಮರುಜೋಡಣೆಯಿಂದ ಪಡೆಯುವ ಪ್ರಯತ್ನವಾಗಿದೆ.*

*ಆದ್ದರಿಂದ ನಾನು ಭರವಸೆ, ಇಚ್ಛೆ, ಕಾರಣ, ಹಾಗೂ ಸಾಮರ್ಥ್ಯಗಳನ್ನು ಬಾಲ್ಯದಲ್ಲಿ ಬೆಳೆಸಿಕೊಂಡ ಸದ್ಗುಣಗಳು; ತತ್ವನಿಷ್ಠೆ ಹರೆಯದ ಸದ್ಗುಣ; ಮತ್ತು ಪ್ರೀತಿ, ಕಾಳಜಿ, ಹಾಗೂ ಬುದ್ಧಿಮತ್ತೆಗಳು ಪ್ರೌಢವಯಸ್ಸಿನ ಪ್ರಮುಖ ಸದ್ಗುಣಗಳ ಮೂಲಸತ್ವಗಳು ಎಂದು ಹೇಳುತ್ತೇನೆ. ಈ ಗುಣಗಳು ಒಂದರ ಮೇಲೆ ಇನ್ನೊಂದು ನಿರ್ಭರವಾಗಿರುತ್ತವೆ: ಭರವಸೆ ಗಳಿಸುವ ತನಕ ಇಚ್ಛಾಶಕ್ತಿಯನ್ನು ತರಬೇತಿಗೊಳಿಸಲು ಸಾಧ್ಯವಿಲ್ಲ, ಹಾಗೆಯೇ*

*ತತ್ವನಿಷ್ಠೆಯು ನಂಬಲಾರ್ಹ ಎಂದು ಸಾಬೀತಾಗುವವರೆಗೆ ಪ್ರೀತಿಯಲ್ಲಿ ಅನ್ಯೋನ್ಯತೆ ಸಾಧ್ಯವಿಲ್ಲ. ಹಾಗೂ, ಪ್ರತಿಯೊಂದು ಸದ್ಗುಣ ಮತ್ತು ಎಲ್ಲಾ ಸದ್ಗುಣಗಳ ಪಟ್ಟಿಯಲ್ಲಿ ಅದರ ಸ್ಥಾನ ಮಾನವ ವಿಕಾಸದ ಇತರ ಅಂಶಗಳಾದ, ಸಂಪೂರ್ಣ ಮನೋವಿಶ್ಲೇಷಕ ಬರಹಗಳಲ್ಲಿ ವಿಸ್ತೃತವಾಗಿ ಪರಿಶೋಧಿಸಲ್ಪಟ್ಟ, ಮನೋಲೈಂಗಿಕ ಹಂತಗಳು, ಮನೋಸಾಮಾಜಿಕ ಉನ್ಮಾದಗಳು, ಮತ್ತು ಬೌದ್ಧಿಕ ಪ್ರಬುದ್ಧತೆಯ ಹಂತಗಳ ಜೊತೆ ಅತ್ಯಗತ್ಯವಾದ ಅಂತರಸಂಬಂಧವನ್ನು ಹೊಂದಿದೆ.* (ಎರಿಕ್ಸನ್, 1964, ಪುಟ 113-115)

ಎರಿಕ್ಸನ್ ಭಾವಿಸುವಂತೆ ಸದ್ಗುಣಗಳ ವಿಕಾಸ ಎರಡು ರೀತಿಯ ಸಂಬಂಧಗಳಿಂದ ಆಗುತ್ತದೆ - ವ್ಯಕ್ತಿಗಳು ಸಮಾಜದಿಂದ ಪ್ರಭಾವಿತರಾಗುವ ರೀತಿಯಿಂದ ಮತ್ತು ಇದಕ್ಕೆ ವ್ಯತಿರಿಕ್ತವಾಗಿ ವ್ಯಕ್ತಿಗಳು ಸಾಮಾಜಿಕ ಪರಿಪಾಠಗಳನ್ನು ಪ್ರಭಾವಿಸುವ ರೀತಿಯಿಂದ. ಮನೋವಿಶ್ಲೇಷಕನ ಪಾತ್ರ ಈ ಪರಸ್ಪರತೆಯನ್ನು ಅರಿಯುವುದು ಮತ್ತು ವ್ಯಕ್ತಿ ಹಾಗೂ ಸಾಮಾಜಿಕ ಪ್ರಬುದ್ಧತೆಯನ್ನು ಧನಾತ್ಮಕವಾಗಿ ಪ್ರಭಾವಿಸುವ ರೀತಿಯಲ್ಲಿ ಸಂಕೀರ್ಣ ಒಡನಾಟ ಹಾಗೂ ಶಕ್ತಿಗಳನ್ನು ಬಿಡುಗಡೆ ಮಾಡುವುದಾಗಿದೆ. ಎರಿಕ್ಸನ್ ಈ ರೀತಿ ಪ್ರಭಾವಿಸುವ ಸಾಮರ್ಥ್ಯವನ್ನು ತಮ್ಮ ಮಾನವ ಸ್ವಭಾವದ[6] ಅಂತರ್ಬೋಧೆಯ ಗ್ರಹಿಸುವಿಕೆಯಿಂದ ಸಮುದಾಯಗಳನ್ನು ಪ್ರಭಾವಿಸಬಲ್ಲ ನಾಯಕರಲ್ಲಿ ಕಾಣಬಹುದು ಎಂದು ನಂಬಿದ್ದ.

*ಮನೋವಿಶ್ಲೇಷಕನಿಗೆ ಗತಕಾಲದ ಅವಶೇಷಗಳು ರೋಗಿಯೊಬ್ಬನ ಸಂಘಟನಾತ್ಮಕ ಶಕ್ತಿಗಳನ್ನು ಯಾವ ರೀತಿಯಲ್ಲಿ ನಿಷ್ಕ್ರಿಯಗೊಳಿಸುತ್ತವೆ ಎಂಬ ಅನುಭವಗಳು ಒಂದಾದ ಮೇಲೆ ಮತ್ತೊಂದು ರೋಗಸ್ಥಿತಿಗಳನ್ನು ಅಭ್ಯಸಿಸುವುದರ ಮೂಲಕ ದೊರೆಯುತ್ತದೆ. ಜೀರ್ಣಗೊಳ್ಳದ ನೆನಪುಗಳು, ಅಸಂತೃಪ್ತ ಪ್ರವೃತ್ತಿಗಳು, ನಿವಾರಿಸಲ್ಪಡದ ಆತಂಕಗಳು, ಬಳಸಲಾಗದ ಸಂಬಂಧಗಳು, ತಣಿಸಲಾಗದ ಮನಸ್ಸಾಕ್ಷಿಯ ಬೇಡಿಕೆಗಳು, ಉಪಯೋಗಿಸಲ್ಪಡದ ಸಾಮರ್ಥ್ಯಗಳು, ವ್ಯಕ್ತಿತ್ವದ ಅಸಂಪೂರ್ಣ ಮಾದರಿಗಳು, ಅದುಮಲ್ಪಟ್ಟ ಆಧ್ಯಾತ್ಮಿಕ ಹಂಬಲಗಳು - ಈ ಅವಶೇಷಗಳು ತಮ್ಮನ್ನು ತಾವೇ ವಾಸ್ತವತೆಯ ಮೇಲೆ ಹೇರಿಕೊಳ್ಳುತ್ತವೆ ಮತ್ತು ಭವಿಷ್ಯತ್ತಿಗೆ ಪರಿವರ್ತನೆ ಹೊಂದಲು ನಿರಾಕರಿಸುತ್ತವೆ. ಮನೋವಿಶ್ಲೇಷಕನು ಪರಿವರ್ತನೆ ಅಸಾಧ್ಯವಾದ, ಗತಕಾಲದಲ್ಲಿ ನಡೆಯುವಂತೆ ಕಾಣುವ, ನಿಕೃಷ್ಟ ತಡೆಗೆ ಒಳಗಾಗಲ್ಪಡುವ ವೈಯಕ್ತಿಕ ವಿಕಾಸದ ಹಂತಗಳು ಮತ್ತು ಉನ್ಮಾದತೆಗಳನ್ನು ಅಭ್ಯಸಿಸುವ ಮೂಲಕ (ಚಾರಿತ್ರಿಕ ರೋಗಸ್ಥಿತಿ, ಜೀವನ ಚರಿತ್ರೆ, ಮತ್ತು ಇತಿಹಾಸಗಳಲ್ಲಿ) ಇತ್ತೀಚಿನ ವರ್ಷಗಳಲ್ಲಿ ಆಂತರಿಕ ಸಮಗ್ರತೆ ಪುನಃಚೇತನಗೊಳಿಸುವ ಮತ್ತು ಪರಿಷ್ಕರಣೆ ಮಾಡುವ ವಿಧಿವಿಧಾನಗಳನ್ನು (ವೈಯಕ್ತಿಕ ಹಾಗೂ ಸಾಮಾಜಿಕ) ವಿವೇಚಿಸಲು ಕಲಿತಿದ್ದಾನೆ.*

*ಆದ್ದರಿಂದ, ಪ್ರಸ್ತುತ ಚರಿತ್ರೆಯಲ್ಲಿ ಹೊರಹೊಮ್ಮುವ (ಮತ್ತು ಈಗಾಗಲೇ ತೀವ್ರವಾಗಿ ಬಯಸಿರುವ) ನಿರ್ಧಾರಗಳಿಗೆ ತಡೆಯನ್ನೊಡ್ಡುವ, ಗತಕಾಲದ ಚರಿತ್ರೆಯಿಂದಲೂ ನಿರೋಧಿಸಲ್ಪಟ್ಟಿರುವ ಕಠಿಣ ಮತ್ತು ಅಜಾಗೃತ ಆಂತರಿಕ ತಡೆಗಳ ಸ್ಪಷ್ಟೀಕರಣವು ಚಾರಿತ್ರಿಕ ಪ್ರಕ್ರಿಯೆಗಳ ಅಧ್ಯಯನಕ್ಕೆ ಮನೋವಿಶ್ಲೇಷನಾಶಾಸ್ತ್ರದ ಒಂದು ಸಂಭಾವ್ಯ ಕೊಡುಗೆ ಎಂದು ನಾನು ಭಾವಿಸುತ್ತೇನೆ. ಇದು ನಾವು 'ಮನೋ-ಚಾರಿತ್ರಿಕ ವಿದ್ಯಮಾನಗಳು' ಎಂದು ಕರೆಯಬಹುದಾದ ವರ್ಣನೆಗೆ ಕೊಡುಗೆ ನೀಡಬಲ್ಲದು. ಇದು ವ್ಯಕ್ತಿಯೊಬ್ಬನಲ್ಲಿ ಪರಿವರ್ತನೆಗೊಳ್ಳಬಲ್ಲ ನಿರೀಕ್ಷೆಗಳಿಗೆ ಹಾಗೂ ಪರಿವರ್ತನೆಯಾಗದ ಆತಂಕಗಳಿಗೆ ತತ್ ಕ್ಷಣದ ಪ್ರಸ್ತುತತೆಯಾಗುವ ಚಾರಿತ್ರಿಕ ಘಟನೆಗಳು ಮತ್ತು ಶಕ್ತಿಗಳ ಮೊತ್ತ. ಈ ರೀತಿಯ ಅಂತರಾತ್ಮದ ಪ್ರಸ್ತುತತೆ ಸಮೂಹವೊಂದರ ಪ್ರಚಲಿತ ಚಾರಿತ್ರಿಕ ವಿಸ್ತಾರ, ಸಮಯದ ಅರಿವಿಗೆ ವ್ಯಾಪಕ ಕಾಣಿಕೆಯನ್ನು ನೀಡುತ್ತದೆ. ಮತ್ತು ತಮ್ಮ ವೈಯಕ್ತಿಕ ಜೀವನ ಚರಿತ್ರೆಯಲ್ಲಿ ಬದುಕುತ್ತಿರುವ ವ್ಯಕ್ತಿಗಳಿಗೆ ಅತ್ಯಂತ ಪ್ರಸ್ತುತವಾಗುವ ಸಂಗತಿ ಅವರ ಭವಿಷ್ಯದ ಚರಿತ್ರೆಯ ಮೇಲಿನ ಪ್ರಭಾವವನ್ನು ಸಹ ನಿರ್ಧರಿಸುತ್ತದೆ. ಏಕೆಂದರೆ, ಚಾರಿತ್ರಿಕ ವಾಸ್ತವಿಕತೆಯು ಗತಕಾಲವನ್ನು ಅಂತರ್ಗತ ಗುರುತುಗಳನ್ನು ಒಳಗೊಂಡ ಭವಿಷ್ಯತ್ತಿಗೆ ಮಾರ್ಪಾಟು ಮಾಡಬಲ್ಲ ಲಭ್ಯ ಸಂಪನ್ಮೂಲಗಳನ್ನು ಎತ್ತಿ ತೋರಿಸುತ್ತದೆ.*

ಆದಾಗ್ಯೂ, ಒಂದು ಚಾರಿತ್ರಿಕ ನಿರ್ಧಾರವು, ಚಾರಿತ್ರಿಕ ಪ್ರಸ್ತುತತೆಯಲ್ಲಿ, ನಿಜವಾಗಿಯೂ ಅತ್ಯಂತ ದೂಷಿತ ಕ್ಷಣವಾಗಿರುತ್ತದೆ. ಏಕೆಂದರೆ, ನಿರ್ಧಾರ ತೆಗೆದುಕೊಳ್ಳುವ ವ್ಯಕ್ತಿ ಮತ್ತು ಅದನ್ನು ಒಪ್ಪಿ ಉಳಿಸಿಕೊಂಡು ಹೋಗುವವರ ಬಳಿ ಇರುವ ಮೂಲ ಸಂಪತ್ತುಗಳು ಕ್ಷಣಾರ್ಧದಲ್ಲಿ ಬೆಸೆದುಕೊಳ್ಳುತ್ತವೆ. ಇದನ್ನು ಅರ್ಥ ಮಾಡಿಕೊಳ್ಳಲು, ಚರಿತ್ರೆಕಾರರು ಮತ್ತು ಮನೋವಿಶ್ಲೇಷಕರು ಪ್ರತಿಯೊಂದು ವೈಯಕ್ತಿಕ ಜೀವನ ತನ್ನದೇ ಆದ ರೇಖಾಂಶೀಯ ತರ್ಕವನ್ನು ಹೊಂದಿದ್ದರೆ, ಚಾರಿತ್ರಿಕ ಕಾಲವೊಂದರಲ್ಲಿ ಪರಸ್ಪರಾವಲಂಬಿಯಾಗಿ ಬದುಕಿದ ಎಲ್ಲಾ ಜೀವಗಳು ಒಂದೇ ರೀತಿಯ ಚಾರಿತ್ರಿಕ ತರ್ಕವನ್ನು ಹಂಚಿಕೊಳ್ಳುತ್ತವೆ ಎನ್ನುವ ಸಂಗತಿಯನ್ನು ಸಂಪೂರ್ಣವಾಗಿ ಗ್ರಹಿಸಲು ಕಲಿಯಬೇಕು. ಇದರಲ್ಲಿ ಹೆಚ್ಚಿನವು ಮನುಷ್ಯರು ಒಬ್ಬರನ್ನೊಬ್ಬರು ಗುರುತಿಸಿಕೊಳ್ಳುವ, ತಮ್ಮ ಸಂಸ್ಥೆಯೊಂದಿಗೆ ತಮ್ಮನ್ನು ಮತ್ತು ತಮ್ಮೊಂದಿಗೆ ತಮ್ಮ ಸಂಸ್ಥೆಯನ್ನು ಗುರುತಿಸಿಕೊಳ್ಳುವ, ತಮ್ಮ ನಾಯಕರೊಂದಿಗೆ ತಮ್ಮನ್ನು ಮತ್ತು ತಮ್ಮೊಂದಿಗೆ ತಮ್ಮ ನಾಯಕರನ್ನು ಗುರುತಿಸಿಕೊಳ್ಳುವ, ಮತ್ತು ಈ ರೀತಿಯಲ್ಲಿ ಗುರುತಿಸಿಕೊಳ್ಳುವ ಅವರು ಹೇಗೆ ತಮ್ಮ ವಿರೋಧಿಗಳು ಮತ್ತು ಶತ್ರುಗಳನ್ನು ಪರಿತ್ಯಜಿಸುತ್ತಿದ್ದರು (ತಮ್ಮನ್ನು ತಾವೇ ಇದರಿಂದ ಪ್ರತ್ಯೇಕಿಸಿಕೊಳ್ಳುವುದು ಎಂದು ಹೇಳಬಹುದು) ಎನ್ನುವ ರೀತಿ ಮತ್ತು ಚಿತ್ರಣಗಳನ್ನು ಒಳಗೊಂಡಿರುತ್ತವೆ.

ಇದೆಲ್ಲವುಗಳ ಪೂರ್ವಾಪರ ಬಾಲ್ಯ ಮತ್ತು ವೈಯಕ್ತಿಕ ಜೀವನದ ಮೊದಲ ಎದುರಾಳಿಗಳನ್ನು ಗುರುತಿಸಿಕೊಳ್ಳುವಿಕೆಯಲ್ಲಿ ಇದೆ. ಜೀವನದ ಸಂಧ್ಯಾಕಾಲದ ಪ್ರತಿಯೊಂದು ಹೊಸ ಆರಂಭ ಮತ್ತು ಪ್ರತಿಯೊಂದು ಹೊಸ ಬಂಧನ ಹಾಗೂ ಒಳಗೊಳ್ಳುವಿಕೆಗಳು ಬಾಲ್ಯದ ನಮ್ಮ ಚಿತ್ರಣಗಳಲ್ಲಿ ಪ್ರತಿಧ್ವನಿಸುತ್ತವೆ; ಹಾಗೂ ಎಲ್ಲಾ ರಾಜರು ಮತ್ತು ನಾಯಕರು, ತಂದೆಯರು ಅಥವಾ ದೊಡ್ಡಣ್ಣಂದಿರು ಎನ್ನುವ ರೀತಿಯ ಮತ್ತು ಎಲ್ಲಾ ದೇಶಗಳು ಹಾಗೂ ವಿಚಾರಗಳು ತಾಯಂದಿರು ಎನ್ನುವ ರೀತಿಯ ಪರಿಣಾಮ ಬೀರುತ್ತವೆ. ಪ್ರತಿಯೊಂದು ಕಾಲಘಟ್ಟ ಈ ರೀತಿಯ ಪರಸ್ಪರತೆಯನ್ನು ತನ್ನದೇ ಆದ ರೀತಿಯಲ್ಲಿ ಬೆಳೆಸಿಕೊಳ್ಳುವುದರಿಂದ, ಇದನ್ನು ನಾವು ಸಹಜವೆಂಬಂತೆ ಪರಿಗಣಿಸುವುದು ಮತ್ತು ಅಧ್ಯಯನಕ್ಕೆ ಒಳಪಡಿಸಿಕೊಳ್ಳುವುದನ್ನು ಕಲಿಯಬೇಕಾಗುತ್ತದೆ. ಬಹಳಷ್ಟು ಜನರಲ್ಲಿ ಘಳಿಗೆಯೊಂದರಲ್ಲಿ ಏನು ಪ್ರತಿಧ್ವನಿಸುತ್ತದೆಯೋ ಅದಕ್ಕಿಂತ ಪ್ರತ್ಯೇಕ ವ್ಯಕ್ತಿಗಳಲ್ಲಿ ಗಮನಿಸಬಹುದಾದ ಪ್ರತಿಕ್ರಿಯೆಗಳ ಗುಣಮಟ್ಟವು ಭಿನ್ನವಾಗಿರುತ್ತದೆ. ಎಲ್ಲದಕ್ಕಿಂತ ಹೆಚ್ಚಿನದಾಗಿ, ತನ್ನ ರಾಜಕೀಯ ಪ್ರಾಮುಖ್ಯತೆಗೆ ನಿರ್ಣಾಯಕವಾಗುವ ಯೋಜಿತ ಕ್ರಿಯೆಯ ನಿಕಟತೆಯಲ್ಲಿ ಇದು ಬದಲಾಗುತ್ತದೆ.

ಪ್ರವೃತ್ತಿಗಳು ಮತ್ತು ಮನುಷ್ಯರು ಸಂಪೂರ್ಣ ವಿಭಿನ್ನ ವ್ಯವಸ್ಥೆಗಳಾದ್ದರಿಂದ, ಹೀಗೆ ಗುರುತಿಸಲ್ಪಟ್ಟ ಮತ್ತು ಹೆಸರಿಸಲ್ಪಟ್ಟ ಪ್ರತಿಯೊಂದು ಶೈಶವೀಯ ಅಥವಾ ಪೂರ್ವ-ವಿಚಾರಶಕ್ತಿಯುಳ್ಳ ವಸ್ತುವನ್ನು, ಇದು ಪ್ರತಿ ಜೀವನಚಕ್ರ ಮತ್ತು ಸಮುದಾಯದ ಆಸ್ತಿಯಾದ್ದರಿಂದ ಮತ್ತು ಈ ಕಾರಣಕ್ಕಾಗಿಯೇ ಸಂಸ್ಥೆಗಳ ಭವಿಷ್ಯಕ್ಕೆ ಅಧೀನವಾಗಿರುವುದರಿಂದ, ಅಧ್ಯಯನಕ್ಕೆ ಒಳಪಡಿಸಬೇಕಾಗುತ್ತದೆ. ಮನೋಚಾರಿತ್ರಿಕ ವಾಸ್ತವತೆ, ಆದ್ದರಿಂದ, ಎರಡು ಘಟಕಗಳನ್ನು ಹೊಂದಿರುತ್ತದೆ: ವ್ಯಕ್ತಿಯ ವ್ಯಕ್ತಿತ್ವ ರಚನೆಗಾಗಿ ಚಾರಿತ್ರಿಕ ಬದಲಾವಣೆಗಳ ಪ್ರಸ್ತುತತೆ, ಹಾಗೂ ಸಮಾಜವೊಂದರಲ್ಲಿ, ಚರಿತ್ರೆಯ ಕಾಲಘಟ್ಟವೊಂದರಲ್ಲಿ ಪ್ರಭಾವಯುತವಾಗಿ ಬದಲಾದ ವ್ಯಕ್ತಿತ್ವ ರಚನೆಯ ರೀತಿಗಳಿಗಾಗಿ ಮತ್ತಷ್ಟು ಚಾರಿತ್ರಿಕ ಬದಲಾವಣೆಗಳ ಪ್ರಸ್ತುತತೆ.

ಒಬ್ಬ ನಿಜವಾದ ನಾಯಕನನ್ನು ತನ್ನ ಹಿಂಬಾಲಕರ ವಾಸ್ತವತೆಗಳ ಬಗ್ಗೆ ಆತನಿಗಿರುವ ಅಂತರ್ಬೋಧೆಯ ಗ್ರಹಿಕೆಯಿಂದ ಗುರುತಿಸಬಹುದು; ಹಾಗೆಂದರೆ, ನಿರ್ದಿಷ್ಟ ಮಾರ್ಗಗಳಲ್ಲಿ ವ್ಯವಹಾರಕುಶಲರಾಗಿ ವರ್ತಿಸಲು ಆತನ ಹಿಂಬಾಲಕರ ಸಿದ್ಧತೆ, ಮತ್ತು ಒಂದು ಹೊಸ, ಪ್ರಮುಖ ಅಂಶವೊಂದಕ್ಕೆ (ವ್ಯಕ್ತಿತ್ವ, ಪ್ರತಿಮೆ, ಶೈಲಿ) ತನ್ನನ್ನು ಉಪಕ್ರಮಿಸಬಲ್ಲ ಆತನ ಶಕ್ತತೆ. ಆತ ತೆಗೆದುಕೊಳ್ಳುವ ಯಾವುದೇ ಪ್ರಮುಖ ನಿರ್ಧಾರದ ಯಶಸ್ಸು ಈ ಎರಡು ಸಾಮರ್ಥ್ಯಗಳ ಮೇಲೆ ಅವಲಂಬಿತವಾಗಿರುತ್ತದೆ. ಆತನ ಸ್ಥಾನವನ್ನು ಅಳೆಯಬೇಕಾದರೆ, ನಾವು ವಾಸ್ತವತೆಗಳ ಜೊತೆ ಆತನ ವ್ಯವಹರಿಸುವಿಕೆಯನ್ನು ಮತ್ತು ನಿರ್ಧಾರವೊಂದನ್ನು ಸ್ವೀಕರಿಸುವ ಆತನ ಹಿಂಬಾಲಕರ ಶಕ್ತತೆಗೆ ಪ್ರಸಕ್ತವಾದ, ಕಾಲಘಟ್ಟವೊಂದರಲ್ಲಿನ ಪ್ರಭಾವಗಳನ್ನು ಅರಿತಿರಬೇಕು. ಒಂದು ನಿರ್ಧಾರವು ಲಭ್ಯವಿರುವ ಆಂತರಿಕ ಸಂಪನ್ಮೂಲಗಳನ್ನು ಒಗ್ಗೂಡಿಸಿಕೊಳ್ಳಬೇಕು, ಮತ್ತು ಈ ರೀತಿಯ ಒಗ್ಗೂಡಿಸಿಕೊಳ್ಳುವಿಕೆಯಲ್ಲಿನ ಅಶಕ್ತತೆಯು ದೊಡ್ಡ ಪ್ರಮಾಣದ ವ್ಯಕ್ತಿತ್ವ ನಾಶಕ್ಕೆ ಹಾಗೂ 'ಮೊದಲ ಏಟಿಗೆ' ಕಾದು ಕೂತ ಅಸಂಗತ ಕ್ರೋಧಾವೇಶಗಳನ್ನು

*ಸ್ವಚ್ಛಂದವಾಗಿ (ಗುಂಪಿನಲ್ಲಿ ಹಾಗೂ ವೈಯಕ್ತಿಕವಾಗಿ ಕೂಡ) ಹರಿಬಿಡಬಲ್ಲ ಯಾಂತ್ರಿಕ ವ್ಯವಸ್ಥೆಗಳ ನಿಷ್ಕ್ರಿಯತೆಗೆ ಕಾರಣವಾಗುತ್ತದೆ ಎನ್ನುವುದನ್ನು ನಾವು ಅರಿತಿದ್ದೇವೆ.*

*ಮನೋಚಾರಿತ್ರಿಕ ವಾಸ್ತವತೆಯಲ್ಲಿನ ಈ ಭಿನ್ನಾಭಿಪ್ರಾಯಗಳ ಶಕ್ತಿಯನ್ನು ಅಂಗೀಕರಿಸುವುದೆಂದರೆ ಕಾಲಘಟ್ಟವೊಂದರಲ್ಲಿ ಯಾವ ಸ್ಥಳಗಳಲ್ಲಿ ವ್ಯಕ್ತಿಗಳು ನೈಜ್ಯತೆಯನ್ನು ತಿರುಚುತ್ತಾರೆ ಮತ್ತು ಪ್ರತೀಕಾರದ ಬೆದರಿಕೆಯೊಂದಿಗೆ ಹಿಂದಿರುಗುತ್ತಾರೆ ಎನ್ನುವುದನ್ನು ಗ್ರಹಿಸುವುದಷ್ಟೇ ಅಲ್ಲ. ಹಾಗೆಯೇ, ಗತಕಾಲದ ಅವಶೇಷಗಳನ್ನು ಅತೀತವಾಗಿಸಲು, ಮತ್ತು ತಮ್ಮ ಜೊತೆಗಾರರೊಡನೆ ವಿಸ್ತಾರವಾದ ಹಾಗೂ ಹೆಚ್ಚಿನ ಅಂತರ್ಗತ ಗುರುತಿಸಿಕೊಳ್ಳುವಿಕೆಯ ಸಲುವಾಗಿ (ಇಂತಹ ಗುರುತಿಸಿಕೊಳ್ಳುವಿಕೆ ನಿರ್ಣಾಯಕ ಮಹತ್ಸಾಧನೆಗಳಿಗೆ ಬೇಕಾದ ಸಾಮರ್ಥ್ಯವನ್ನು ಒದಗಿಸುತ್ತದೆ) ವಿವೇಚನಾಶೀಲ ದೃಷ್ಟಿಕೋನವನ್ನು ಒಗ್ಗೂಡಿಸಿಕೊಳ್ಳಲು ಮತ್ತು ಬೆಳೆಸಿಕೊಳ್ಳಲು ವಾಸ್ತವವಾಗಿ ಅವರು ಎಷ್ಟು ತಯಾರಿರುತ್ತಾರೆ ಎನ್ನುವುದನ್ನು ಸಹ ನಾವು ಅರ್ಥಸಿಕೊಳ್ಳಬಹುದು.* (ಎರಿಕ್ಸನ್, 1964, ಪುಟ 206-208)[7]

## 'ಸಂಪೂರ್ಣಗೊಂಡ ಜೀವನಚಕ್ರ'

ಎರಿಕ್ಸನ್ ಬಾಲ್ಯದಿಂದ ಮುಪ್ಪಿನವರೆಗಿನ ಮಾನವನ ವಿಕಾಸವನ್ನು ಎಂಟು ಅನುಕ್ರಮ ಹಂತಗಳಲ್ಲಿ ಕಂಡುಕೊಂಡಿದ್ದಾನೆ. ಇವು ರೇಖಾತ್ಮಕ ಚೌಕಟ್ಟಿನಲ್ಲಿ ಜೋಡಿಸಲ್ಪಟ್ಟ ಬಿಗಿಯಾದ ವಿಭಾಗಗಳಂತಿರದೆ, ಕ್ರಮಬದ್ಧವಾಗಿ ಒಂದರ ಮೇಲೊಂದು ವ್ಯಾಪಿಸಿರುವ ಸುಸಂಘಟಿತ ಹಂತಗಳಂತಿವೆ. ಅವನು ತನ್ನ ಮಾನವ ವಿಕಾಸದ ಸಿದ್ಧಾಂತವನ್ನು 'ಸಂಪೂರ್ಣಗೊಂಡ ಜೀವನಚಕ್ರ' ಎಂದು ಕರೆಯುತ್ತಾನೆ (ಈತ ಇದೇ ಶೀರ್ಷಿಕೆಯಡಿಯಲ್ಲಿ ಒಂದು ಪುಸ್ತಕವನ್ನು ಬರೆದಿದ್ದಾನೆ). ಈತನ ಸಿದ್ಧಾಂತಗಳು ತನ್ನ ಚಿಕಿತ್ಸಾ ಅನುಭವಗಳು, ಸಮಕಾಲೀನ ಪ್ರಮುಖ ಚಿಂತಕರಾದ ಅನ್ನಾ ಫ್ರೆಡ್, ರುತ್ ಬೆನೆಡಿಕ್ಟ್, ಹಾಗೂ ಮಾರ್ಗರೆಟ್ ಮೀಡ್ ಜೊತೆಗಿನ ಒಡನಾಟಗಳು, ಮತ್ತು ಹಿಂದುಗಳ ಜೀವನಚಕ್ರದಲ್ಲಿ ರೂಪುಗೊಂಡ 'ಆಶ್ರಮ'ಗಳಿಂದ ಪ್ರಭಾವಿತಗೊಂಡಿವೆ (ಎರಿಕ್ಸನ್, 1964, ಪುಟ 225). ಭಾರತೀಯ ಮನೋವಿಶ್ಲೇಷಕ ಹಾಗೂ ಬರಹಗಾರರಾದ ಸುಧೀರ್ ಕರಕ್ (1968) ಹಿಂದು ಸಿದ್ಧಾಂತದ 'ಆಶ್ರಮಗಳು' ಮತ್ತು ಎರಿಕ್ಸನ್ನನ ಮಾನವ ವಿಕಾಸದ ಎಂಟು ಹಂತಗಳ ಸಿದ್ಧಾಂತದ ನಡುವಿನ ಆಲೋಚನಾಪರ ಸಾಮ್ಯತೆಗಳನ್ನು ಬಿಂಬಿಸುತ್ತಾರೆ. ಎರಡೂ ಸಿದ್ಧಾಂತಗಳು ಮಾನವನ ವಿಕಾಸ ಪ್ರತ್ಯೇಕವಾಗಿ ಆಗದೆ ವ್ಯಕ್ತಿಗಳು ತಮ್ಮ ಜೀವನಚಕ್ರದ ಪ್ರತಿ ಹಂತವನ್ನು ಹೇಗೆ ನಿರ್ವಹಿಸಿಕೊಳ್ಳುತ್ತಾರೆ ಎನ್ನುವುದನ್ನು ಪ್ರಭಾವಿಸುವ ಆಂತರಿಕ ಮತ್ತು ಬಾಹ್ಯ ಶಕ್ತಿಗಳ ಸಂಕೀರ್ಣ ಕ್ರಿಯೆಗಳ ಮೂಲಕ ನಡೆಯುತ್ತವೆ ಎಂದು ನಂಬುತ್ತವೆ. ಎರಿಕ್ಸನ್ನನ ಸಿದ್ಧಾಂತವು ಪುರಾತನ ನಂಬಿಕೆಗಳ ಪೂರ್ವೇತಿಹಾಸಗಳ ಬಗ್ಗೆ (2,500 ವರ್ಷಗಳಿಗಿಂತಲೂ ಹೆಚ್ಚಿನ ಕಾಲದಿಂದ ಇವು ವರ್ಗಾಯಿಸಲ್ಪಟ್ಟಿವೆ) ಹೆಚ್ಚೇನೂ ಹೇಳದಿದ್ದರೂ ಸಹ, ಮಗುವಿನ ವಿಕಾಸ ಮತ್ತು ಆಂತರಿಕ ಶಕ್ತಿಗಳ ಪಾತ್ರಗಳ ಬಗ್ಗೆ ಒತ್ತು ನೀಡುತ್ತದೆ.

ಎರಿಕ್ಸನ್ನನ ಪ್ರಕಾರ, ಆಂತರಿಕ ಶಕ್ತಿಗಳು ಎಂದರೆ ಮೂಲ ಪ್ರವೃತ್ತಿ, ಮನೋಧರ್ಮ, ಆಸಕ್ತಿ, ಮೂಡುತ್ತಿರುವ ಪ್ರಭುದ್ಧತೆ, ಹಾಗೂ ದೈನಂದಿಕ ಜೀವನದಲ್ಲಿ ಮಗುವೊಂದು ತನ್ನ ಸಮತೋಲನದ ಅರಿವನ್ನು ಹುಡುಕಲು ಶ್ರಮಿಸುತ್ತಿರುವ ರೀತಿಗಳು. ಬಾಹ್ಯ ಶಕ್ತಿಗಳೆಂದರೆ ಮಗುವಿನ ಜೀವನದಲ್ಲಿನ ಕುಟುಂಬ, ಶಾಲೆ, ಸಮುದಾಯ, ಸಂಸ್ಕೃತಿ, ಹಾಗೂ ಸಾಮಾಜಿಕ-ಚಾರಿತ್ರಿಕ ಹಿನ್ನಲೆಗಳು. ಪ್ರತಿಯೊಬ್ಬ ಮನುಷ್ಯ ತನ್ನ ವಯಸ್ಸಿಗೆ ಅನುಗುಣವಾಗಿ ಮೊದಲ ಬಾರಿ ಎದುರಿಸುವ ವೈರುಧ್ಯಮಯ ಹಾಗೂ ವಿರುದ್ಧಾತ್ಮಕ ಭಾವನಾತ್ಮಕ ಶಕ್ತಿಗಳಿಂದ (ಮೂಲಭೂತ ನಂಬಿಕೆಗೆ ಪ್ರತಿಯಾಗಿ ಅಪನಂಬಿಕೆ, ಸ್ವಾಯತ್ತತೆಗೆ ಪ್ರತಿಯಾಗಿ ಅವಮಾನ ಮತ್ತು ಸಂಶಯ, ಇತ್ಯಾದಿ) ಮಾನವ ವಿಕಾಸದ ಪ್ರತಿ ಹಂತ ರೂಪುಗೊಂಡಿರುತ್ತದೆ. ಪ್ರಭುದ್ಧತೆ ಪ್ರತಿಯೊಂದು ಹಂತದ ಶಕ್ತಿ ಹಾಗೂ

ಬಲಹೀನತೆಗಳು ಧನಾತ್ಮಕತೆ ಹಾಗೂ ಋಣಾತ್ಮಕತೆಗಳ ನಡುವೆ ಸಮತೋಲನವನ್ನು ಗಳಿಸಲು ವ್ಯಕ್ತಿಯೊಬ್ಬ ಕೆಲಸ ಮಾಡಿದಾಗ (ಅಥವಾ ಸಾಮಾಜಿಕ ಸ್ತರಗಳ ಪ್ರಭಾವದಿಂದ ಮಾರ್ಗದರ್ಶಿತನಾದಾಗ) ಹೊರಹೊಮ್ಮುತ್ತದೆ. ಪ್ರತಿ ಹಂತದ ಸನ್ನಿಹಿತ ಬಿಕ್ಕಟ್ಟುಗಳಿಂದ ಪ್ರಕಟವಾದ 'ಪರಿವರ್ತಿತ ಶಕ್ತಿ' ಅಥವಾ 'ಸದ್ಗುಣ' ರೂಪುಗೊಳ್ಳುತ್ತಿರುವ ವ್ಯಕ್ತಿತ್ವದ ಪ್ರಬುದ್ಧತೆಯನ್ನು ನಿರ್ಧರಿಸುತ್ತದೆ. ಹೊಸ ಹಂತದ 'ಸತ್ವಯುತ ವಿಕಾಸ' ಹಿಂದಿನ ಹಂತವೊಂದು ನಿಭಾಯಿಸಲ್ಪಟ್ಟ ರೀತಿ ಮತ್ತು ಸ್ವಪ್ರಜ್ಞೆಯು ನಿಯಂತ್ರಿಸಲ್ಪಟ್ಟ ರೀತಿಯಿಂದ ಗಳಿಸಿಕೊಂಡ ಶಕ್ತಿಗಳ ಆಧಾರದ ಮೇಲೆ ಆಗುತ್ತದೆ.

ಉದಾಹರಣೆಗೆ, ಜೀವನದಲ್ಲಿ ಮೊತ್ತಮೊದಲ ಬಾರಿಗೆ ಸ್ವಾಯತ್ತತೆಯನ್ನು ಅನುಭವಿಸಬೇಕು ಎಂಬ ತುಡಿತ ಹೊಂದಿರುವ ಶಿಶುವು ಸಾಮಾಜಿಕ ರೂಢಿಗಳು ಮತ್ತು ವೈಯಕ್ತಿಕ ಸ್ವಾತಂತ್ರ್ಯದ ನಡುವೆ ಸಮತೋಲನ ಸಾಧಿಸುವ ಅಗತ್ಯತೆಯನ್ನು ಪೋಷಕ ನಿರ್ದೇಶನದ ಸೂಕ್ಷ್ಮತೆಗಳ ಅಡಿಯಲ್ಲಿ ಹಾಗೂ ಮೂಲಕ ಅರ್ಥೈಸಿಕೊಳ್ಳಬೇಕಾಗುತ್ತದೆ. ಇಚ್ಛೆಯ ಪ್ರಜ್ಞೆಯು ಇಂದಿನ ಮತ್ತು ಮುಂದಿನ ಕಾಲಕ್ಕೆ ಸೂಕ್ತವಾದ ಆಯ್ಕೆಗಳನ್ನು ಮಾಡಲು ಈ ಹಂತದಲ್ಲಿ ಹೊರಹೊಮ್ಮುವ ಮೂಲಭೂತ ಸದ್ಗುಣವಾಗಿದೆ.

> *ಬಿಕ್ಕಟ್ಟು ತನ್ನ ಅರ್ಧದಷ್ಟು ಅರ್ಥವನ್ನು ಪ್ರಾಯೋಗಿಕ ಕೆಲಸಗಳಿಂದ (ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರಗಳಲ್ಲಿ ಇರುವಂತೆ) ಪಡೆದಿದೆ; ಒಂದೊಮ್ಮೆ ಬಿಕ್ಕಟ್ಟನ್ನು ವೈದ್ಯಶಾಸ್ತ್ರದಲ್ಲಿ ಉನ್ನತಿ ಅಥವಾ ಅವನತಿಗಾಗಿನ ನಿರ್ಣಾಯಕ ತಿರುವು ಎಂದು ಅರ್ಥೈಸಲಾಗುತ್ತಿತ್ತು. ಮಹತ್ವದ ಸಮಯದಲ್ಲಿ ಒಂದಲ್ಲ ಮತ್ತೊಂದು ರೀತಿಯ ಇಂತಹ ನಿರ್ಣಾಯಕ ತಿರುವು ಅನಿವಾರ್ಯ. ಹೊಸ ಮೂಲಭೂತ ಅಗತ್ಯಗಳು ಹಠಾತ್ ನಿಷೇಧಕ್ಕೊಳಗಾದಾಗ ಮನುಷ್ಯನ ಸಂಪೂರ್ಣ ವಿಕಾಸದಲ್ಲಿ ಇಂತಹ ಬಿಕ್ಕಟ್ಟುಗಳು, ಕೆಲವೊಮ್ಮೆ ಸಶಬ್ದವಾಗಿಯೇ, ಆಗುತ್ತವೆ. ಹೊಸ ಶಕ್ತತೆಗಳು ಹೊಸ ಅವಕಾಶಗಳಿಗೆ ಸರಿಸಮನಾಗಲು ಹಂಬಲಿಸಿದಾಗ, ಮತ್ತು ಹೊಸ ಮಹತ್ವಾಕಾಂಕ್ಷೆಗಳು ವ್ಯಕ್ತಿಯೊಬ್ಬ ಎಷ್ಟು ಮಿತಿಗೆ ಒಳಪಟ್ಟಿದ್ದಾನೆ (ಈ ಹೊತ್ತಿಗಾದರೂ) ಎಂಬುದನ್ನು ವ್ಯಕ್ತಗೊಳಿಸಿದಾಗ, ಇಂತಹ ಬಿಕ್ಕಟ್ಟುಗಳು ಕೆಲವೊಮ್ಮೆ ನಿಶಬ್ದವಾಗಿ ಆಗುತ್ತವೆ.* (ಎರಿಕ್ಸನ್, 1964, ಪುಟ 139)

ಎರಿಕ್ಸನ್ನನಿಗೆ ಈ 'ನಿರ್ಣಾಯಕ ತಿರುವು' ನಿಭಾಯಿಸಲ್ಪಟ್ಟ ರೀತಿ ಒಂದು ಸಂತಸಮಯ, ಸಮತೋಲಿತ ವ್ಯಕ್ತಿತ್ವ ವಿಕಾಸದ ತಿರುಳಾಗಿತ್ತು. ಹಂತಹಂತವಾಗಿ ಆದ ವಿಕಾಸ (ಇದನ್ನು ಪರಿವಿಕಾಸ ತತ್ವ (epigenetic principle) - ಭ್ರೂಣವು ಪ್ರಾರಂಭದಲ್ಲಿ ವಿಶಿಷ್ಟ ಭಾಗಗಳೇನೂ ಇಲ್ಲದ ರಚನೆಯಾಗಿದ್ದು ಕ್ರಮೇಣ ವಿಶಿಷ್ಟೀಕರಣದ ಪರಿಣಾಮವಾಗಿ ವಿವಿಧ ಅಂಗಗಳಿರುವ ರಚನೆಯಾಗುವುದು - ಎಂದೂ ಕರೆಯಲಾಗುತ್ತದೆ) ಮನುಷ್ಯನ ಅಹಂಗೆ ನಿಯಂತ್ರಣದ ಅರಿವನ್ನು ಕಂಡುಕೊಳ್ಳಲು ಮತ್ತು ಒಬ್ಬ ಪ್ರಬುದ್ಧ ಹಾಗೂ ಸಂಪೂರ್ಣ ವ್ಯಕ್ತಿಯಾಗಿ ಬೆಳೆಯಲು ಬೇಕಾದ ಶಾರೀರಿಕ ಹಾಗೂ ಮಾನಸಿಕ ಸಮತೋಲನ (ಸಂತುಲನ)ದ ಹೊಸ ಅರಿವನ್ನು ಪಡೆಯಲು ಅವಕಾಶವನ್ನು ಒದಗಿಸುತ್ತದೆ.

ಪ್ರತಿಯೊಂದು ಹಂತ ವಯಸ್ಸಿನೊಂದಿಗೆ ಪ್ರಗತಿ ಸಾಧಿಸುವುದರಿಂದ, ಸ್ತರಗಳ ಪ್ರಭಾವದಲ್ಲಿ (ಕುಟುಂಬ, ಶಾಲೆ, ಒಡನಾಡಿ ಗುಂಪು, ಸಮಾಜ) ನಿರತರಾಗಿರುವ ಪಾತ್ರಧಾರಿಗಳ ಸಂಖ್ಯೆ ಹೆಚ್ಚುತ್ತಿರುವಂತೆ, ಬೆಳೆಯುವಿಕೆ ಸಂಕೀರ್ಣವಾಗತೊಡಗುತ್ತದೆ. ವ್ಯಕ್ತಿಯೊಬ್ಬ ಹಂತವೊಂದನ್ನು ವೈಫಲ್ಯದಿಂದ ಹಾದು ಹೋದರೆ, ವೈರುಧ್ಯವಾದ ಎರಡು ಶಕ್ತಿಗಳಲ್ಲಿ ಒಂದನ್ನು ಹೋಲುವಂತಹ ಮನೋಧರ್ಮವನ್ನು ಬೆಳೆಸಿಕೊಳ್ಳಬಹುದು. ಪರಿಣಾಮವಾಗಿ, ವ್ಯಕ್ತಿ ಭಾವನಾತ್ಮಕ ಅಸ್ವಸ್ಥತೆ ಅಥವಾ, ಅತಿ ಗಂಭೀರ ಸ್ಥಿತಿಗಳಲ್ಲಿ, ಮಾನಸಿಕ ರೋಗವನ್ನು[8] ಅನುಭವಿಸಬೇಕಾಗಬಹುದು. ಹಿಂದಿನ ಹಂತವೊಂದರ ಬಿಕ್ಕಟ್ಟನ್ನು (ಸ್ವಾಯತ್ತತೆ ಪ್ರತಿಯಾಗಿ ಅವಮಾನ ಹಾಗೂ ಸಂಶಯಗಳ ರೀತಿಯಲ್ಲಿ) ಯಶಸ್ವಿಯಾಗಿ ನಿರ್ವಹಿಸಿರದ ವ್ಯಕ್ತಿಗೆ ಜೀವನದ ಮುಂದಿನ ಹಂತದಲ್ಲಿ ಸ್ವಾಯತ್ತತೆಯ

ಸವಾಲು ಮತ್ತು ಸಂಬಂಧಿತ ನಿಯಂತ್ರಣವನ್ನು ನಿಭಾಯಿಸಲು ಬೇಕಾದ ಭಾವನಾತ್ಮಕ ಶಕ್ತಿ ಸಿಗದಿರಬಹುದು. ಜೀವನದ ಸಾಮಾಜಿಕ ಮತ್ತು ಭಾವನಾತ್ಮಕ ಸವಾಲುಗಳನ್ನು ಸಂಧಾನ ಮಾಡಿಕೊಳ್ಳುವ ಹಾಗೂ ಜಯಿಸುವುದರ ಪ್ರಾಮುಖ್ಯತೆಯ ಅರಿವು ಉಪಶಮನ ಹಾಗೂ ನಿರ್ವಹಣೆಗೆ, ಮತ್ತು ಆಂತರಿಕ ವಿಕಾಸ ಹಾಗೂ/ಅಥವಾ ವೃತ್ತಿಪರ ಆಪ್ತಸಮಾಲೋಚನೆಯ ಮೂಲಕ ಸ್ವನಿಯಂತ್ರಣಕ್ಕೆ ಸಹ ಅವಕಾಶಗಳನ್ನು ಒದಗಿಸಿಕೊಡುತ್ತದೆ.

> *ನಾನು 'ಬಲಿಷ್ಠ' ವ್ಯಕ್ತಿಯ ಮೂಲ ಗುಣಲಕ್ಷಣಗಳನ್ನು ಹೆಸರಿಸುವ ಈ ಮೊದಲ ಪ್ರಯತ್ನದಲ್ಲಿ (ಇಲ್ಲಿಯವರೆಗೆ ಧರ್ಮೋಪದೇಶಕರು ಮತ್ತು ದೇವತಾಶಾಸ್ತ್ರಜ್ಞರಿಗೆ ಬಿಟ್ಟಂತಹ ವಿಷಯಗಳನ್ನು) ಈ ಗುಣಲಕ್ಷಣಗಳನ್ನು ಅವುಗಳ ದಿನನಿತ್ಯದ ಹೆಸರುಗಳಲ್ಲಿ ನೀಡಿದ್ದೇನೆ: ಅವು ಬೇರೆಯವರನ್ನು ಗಮನಿಸಿದಾಗ ಇದೇ ರೀತಿಯಲ್ಲಿ ಕಾಣುತ್ತವೆ; ಅವುಗಳನ್ನು ವಶಪಡಿಸಿಕೊಂಡಾಗ ಇದೇ ರೀತಿಯಲ್ಲಿ ಅನುಭವಕ್ಕೆ ಬರುತ್ತವೆ; ಮತ್ತು ಇವುಗಳು, ಎಲ್ಲದಕ್ಕಿಂತ ಹೆಚ್ಚಿನದಾಗಿ, 'ಸದ್ಗುಣವು ಮನುಷ್ಯನಿಂದ ಹೊರ ಹೋದಾಗ' ಅನುಪಸ್ಥಿತವಾದಂತೆ ಕಾಣುತ್ತವೆ* [ಕೋಷ್ಠಕ 1ನ್ನು ನೋಡಿ]. *ಈ ರೀತಿಯ ಸದ್ಗುಣದ ಋಣಾತ್ಮಕತೆ ಅವಗುಣವಾಗಲು ಸಾಧ್ಯವಿಲ್ಲ, ಪ್ರತಿಯಾಗಿ, ಇದು ಬಲಹೀನತೆಯಾಗಿದ್ದು ಅಸ್ತವ್ಯಸ್ತತೆ (disorder), ಅಪಸಾಮಾನ್ಯ ಕ್ರಿಯೆ (dysfunction), ವಿಘಟನೆ (disintegration), ಮತ್ತು ದಿಕ್ಕುಗೆಟ್ಟತನ (anomie) ಇದರ ಗುರುತುಗಳಾಗಿವೆ. ಆದರೆ 'ಬಲಹೀನತೆ'ಯು ಕ್ಷೋಭೆಯ ಸಂಕೀರ್ಣತೆಯನ್ನು ತಲುಪಿಸುವಲ್ಲಿ, ಮತ್ತು ಇಲ್ಲಿ ಸ್ಥೂಲವಾಗಿ ಚಿತ್ರಿಸಲಾಗಿರುವ ಸದ್ಗುಣಗಳ ಸಕ್ರಿಯಕರಣ (activation) ಹಾಗೂ ಸಮಗ್ರತೆಗೆ ಅಡ್ಡಿಯಾದಾಗ ಮನುಷ್ಯನಲ್ಲಿ ಕ್ರೋಢೀಕೃತವಾಗುವ ನಿರ್ದಿಷ್ಟ ಕ್ರೋಧಾವೇಶವನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ಸೋಲುತ್ತದೆ. ಸಕ್ರಿಯ ಉದ್ವೇಗ ಪೂರ್ವಸ್ಥಿತಿಗೆ ಬಂದಾಗ ಮಾತ್ರ ಸಂಗತಿಗಳು ಶಕ್ತತೆಯಿಂದ ಹಾಗೂ ಸರಳವಾಗಿ ಸರಿಯಾದ ಸ್ಥಾನ ಸೇರಿಕೊಳ್ಳುತ್ತವೆ.* (ಎರಿಕ್ಸನ್, 1964, ಪುಟ 140)

ಎರಿಕ್ಸನ್ನನ ಸಿದ್ಧಾಂತದ ಅನ್ವಯಯೋಗ್ಯತೆಯು ತೀವ್ರವಾಗಿ ಬದಲಾಗುತ್ತಿರುವ ಸಾಮಾಜಿಕ ಶಿಷ್ಟಾಚಾರಗಳ ಹಿನ್ನಲೆಯಲ್ಲಿ ಸ್ವಾತಂತ್ರ್ಯ, ಜವಾಬ್ದಾರಿ, ನೈತಿಕತೆ, ಮತ್ತು ಪೋಷಕರ ಮಾರ್ಗದರ್ಶನ (ಅಥವಾ ನಿಯಂತ್ರಣ)ಗಳ ಸಾಂಸ್ಕೃತಿಕ ಹಾಗೂ ಕೌಟುಂಬಿಕ ಅರ್ಥೈಸುವಿಕೆಯ ಕಾರಣದಿಂದಾಗಿ ಬದಲಾಗಬಹುದು. ಆದಾಗ್ಯೂ, ಆತನ ಸಿದ್ಧಾಂತಗಳು ಸಾರ್ವತ್ರಿಕವಾದ ಮಾನವ ವಿಕಾಸದ ತತ್ವಗಳನ್ನು ಕಲಿಯಲು ಅವಕಾಶಗಳನ್ನು ಒದಗಿಸುತ್ತವೆ. ಹಾಗಾಗಿ, ಆತನ ಸಿದ್ಧಾಂತವು ಪೋಷಕತ್ವ, ಶಿಕ್ಷಣ, ಆಪ್ತಸಮಾಲೋಚನೆ, ಮತ್ತು ಸಾಮಾಜಿಕ ಹಾಗೂ ಬಹು-ಸಾಂಸ್ಕೃತಿಕ ವಿನಿಮಯಗಳಿಗೆ ನಿಹಿತಾರ್ಥಗಳನ್ನು ಹೊಂದಿದೆ.

ಎರಿಕ್ಸನ್ನನ ಚೌಕಟ್ಟು ಎರಡು ಪ್ರಮುಖ ಕಾರಣಗಳಿಂದಾಗಿ ಗಮನ ಸೆಳೆಯುತ್ತದೆ: ಮೊದಲನೆಯದಾಗಿ, ಇದು ಮಾನಸಿಕ ಚಿಕಿತ್ಸೆ ಅಥವಾ ಸ್ವ-ನಿರೀಕ್ಷೆಯ ಮೂಲಕ ಸ್ವ-ಗುಣಮುಖತೆಗಾಗಿ ನೀಡುವ ಭರವಸೆ; ಮತ್ತು, ಎರಡನೆಯದಾಗಿ, ಶಾಲಾ-ವಯಸ್ಸಿನ ಮಕ್ಕಳಿಗೆ ವಿಕಾಸಾತ್ಮಕವಾಗಿ ಸೂಕ್ಷ್ಮ ಹಾಗೂ ಆಲೋಚನಾಪರ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಲು ನೀಡುವ ಶಕ್ತತೆ. ಮಕ್ಕಳು ಇದರ ಮೂಲಕ ತಮ್ಮ ರಚನಾತ್ಮಕ ವರ್ಷಗಳಲ್ಲಿ ಮೂಲಭೂತ ಸದ್ಗುಣಗಳನ್ನು ಬೆಳೆಸಿಕೊಳ್ಳುವ ಮತ್ತು ಅಳವಡಿಸಿಕೊಳ್ಳುವ ಅವಕಾಶಗಳನ್ನು ಅನುಭವಿಸಬಹುದು.

ಕೆಳಗಿನ ವಿಭಾಗಗಳು ಎರಿಕ್ಸನ್ನನ ಬರಹಗಳಿಂದ ಆಯ್ದ ಲಘು ಉದ್ಧೃತ ಭಾಗಗಳನ್ನು, ಜೊತೆಗೆ ಜೀವನಚಕ್ರದ ನಕ್ಷೆಯನ್ನು ಒಳಗೊಂಡ ಸಂದರ್ಭ-ಆಧಾರಿತ ವ್ಯಾಖ್ಯಾನಗಳು ಹಾಗೂ ವಿಶ್ಲೇಷಣೆಗಳ ಮೂಲಕ ಆತನ ಎಂಟು ಹಂತಗಳ ಬಗ್ಗೆ ಸಂಕ್ಷಿಪ್ತ ವಿವರಣೆಗಳನ್ನು (ಸೂಕ್ತ ವಯಸ್ಸಿನ ಶ್ರೇಣಿಗಳ ಜೊತೆಗೆ)[9] ನೀಡುತ್ತದೆ. ಮುಂದಿನ ವಿಭಾಗವು ಮನುಷ್ಯರ ಸಾಮಾಜಿಕ ಹಾಗೂ ಮಾನಸಿಕ ವಿಕಸನದ ಹಿನ್ನಲೆಯಲ್ಲಿ ಎರಿಕ್ಸನ್ನನ ಮಾನವ ವಿಕಾಸ ಸಿದ್ಧಾಂತದ ಅನ್ವಯ ಯೋಗ್ಯತೆಯ ಮೇಲೆ ಒಳನೋಟ ಬೀರುತ್ತದೆ.

**ಕೋಷ್ಟಕ I.** ಸಂಪೂರ್ಣಗೊಂಡ ಜೀವನಚಕ್ರ: ಮಾನವ ವಿಕಾಸದ ಒಂದು ಮನೋಸಾಮಾಜಿಕ ಗ್ರಹಿಕೆ

| | **ಹಂತಗಳು** | **ಮನೋಸಾಮಾಜಿಕ ಬಿಕ್ಕಟ್ಟುಗಳು** | **ಪ್ರಮುಖ ಸಂಬಂಧಗಳ ಪರಿಧಿ** | **ಮೂಲ ಸತ್ವಗಳು** | **ರೋಗಲಕ್ಷಣದ ತಿರುಳು** |
|---|---|---|---|---|---|
| **I** | **ಶೈಶವ 0–1½ ವರ್ಷಗಳು** | ಮೂಲಭೂತ ನಂಬಿಕೆಗೆ ಪ್ರತಿಯಾಗಿ ಅಪನಂಬಿಕೆ | ಮಾತೃ ಸಂಬಂಧಿಗಳು | ಭರವಸೆ | ನಿರ್ಲಿಪ್ತತೆ |
| **II** | **ಬಾಲ್ಯ 1½-3 ವರ್ಷಗಳು** | ಸ್ವಾಯತ್ತತೆಗೆ ಪ್ರತಿಯಾಗಿ ಅವಮಾನ, ಸಂಶಯ | ಪಿತೃ ಸಂಬಂಧಿಗಳು | ಇಚ್ಛೆ | ಒತ್ತಾಯ |
| **III** | **ಆಟದ ವಯಸ್ಸು 3–6 ವರ್ಷಗಳು** | ಉಪಕ್ರಮತೆಗೆ ಪ್ರತಿಯಾಗಿ ತಪ್ಪಿತಸ್ಥತೆ | ಮೂಲ ಕುಟುಂಬ | ಉದ್ದೇಶ | ಹಿಂಜರಿಕೆ |
| **IV** | **ಶಾಲಾ ವಯಸ್ಸು 6–12 ವರ್ಷಗಳು** | ದುಡಿಮೆಗೆ ಪ್ರತಿಯಾಗಿ ಕೀಳರಿಮೆ | ‘ನೆರೆ-ಹೊರೆ’, ಶಾಲೆ | ಸಾಮರ್ಥ್ಯ | ಜಡತ್ವ |
| **V** | **ತಾರುಣ್ಯ 10–24/26 ವರ್ಷಗಳು** | ವ್ಯಕ್ತಿತ್ವಕ್ಕೆ ಪ್ರತಿಯಾಗಿ ಪಾತ್ರದ ಗೊಂದಲ | ಸಮವಯಸ್ಕ ಗುಂಪು ಮತ್ತು ಹೊರ ಗುಂಪುಗಳು; ನಾಯಕತ್ವದ ಮಾದರಿಗಳು | ನಿಷ್ಠೆ | ನಿರಾಕರಣೆ |
| **VI** | **ಎಳೆಯ ಪ್ರೌಢಾವಸ್ಥೆ 18/22–40 ವರ್ಷಗಳು** | ಸಾಮೀಪ್ಯಕ್ಕೆ ಪ್ರತಿಯಾಗಿ ಒಂಟಿತನ | ಸ್ನೇಹ, ಕಾಮ, ಸ್ಪರ್ಧೆ, ಸಹಯೋಗದ ಜೊತೆಗಾರರು | ಪ್ರೀತಿ | ಪ್ರತ್ಯೇಕತಾಕಾಂಕ್ಷೆ |
| **VII** | **ಪ್ರೌಢಾವಸ್ಥೆ 30–65 ವರ್ಷಗಳು** | ಉತ್ಪಾದಕತೆಗೆ ಪ್ರತಿಯಾಗಿ ನಿಷ್ಕ್ರಿಯತೆ | ಹಂಚಲ್ಪಟ್ಟ ಕೆಲಸ ಮತ್ತು ಹಂಚಿಕೊಂಡ ಕೌಟುಂಬಿಕ ಜವಾಬ್ದಾರಿಗಳು | ಕಾಳಜಿ | ತಿರಸ್ಕೃತತೆ |
| **VIII** | **ಮುಪ್ಪು 55–60+ ವರ್ಷಗಳು** | ಐಕ್ಯತೆಗೆ ಪ್ರತಿಯಾಗಿ ಹತಾಶೆ | ‘ಮನುಜ ಕುಲ, ನನ್ನ ಕುಲ’ | ಬುದ್ಧಿಮತ್ತೆ | ಕೀಳ್ಭಾವನೆ |

## *ಮೂಲಭೂತ ನಂಬಿಕೆಗೆ ಪ್ರತಿಯಾಗಿ ಅಪನಂಬಿಕೆ: ಶೈಶವ (0 – 1½ ವರ್ಷಗಳು)*

ಶಿಶುವು ಶೈಶವಾವಸ್ಥೆಯಲ್ಲಿ ಮೊದಲು ಮೂಲಭೂತ ನಂಬಿಕೆಯ ಒಳ ಮತ್ತು ಹೊರ ಅರ್ಥಗಳನ್ನು ಶೋಧಿಸಲು ಕಲಿಯುತ್ತದೆ; ಭರವಸೆಯು (ಅಥವಾ ಹಿಂತೆಗೆಯುವಿಕೆ) ಈ ನಂಬಿಕೆಯ ಆಧಾರದ ಮೇಲೆಯೇ ವಿಕಾಸಾತ್ಮಕ ಸದ್ಗುಣದ ಅಗತ್ಯತೆಯಾಗಿ ಹೊರಹೊಮ್ಮುತ್ತದೆ. ಪ್ರೀತಿ, ಆರ್ಥಿಕ ಭದ್ರತೆ, ಆಟ, ಹಾಗೂ ಸಂತೋಷ ಹೇರಳವಾಗಿ ದೊರೆಯುವ ಕುಟುಂಬದಲ್ಲಿ ಜನಿಸಿದ ಮಗು ತಾನೂ ನಂಬಲ್ಪಟ್ಟ ಭಾವನೆಯೊಂದಿಗೆ ಬದುಕುವುದನ್ನು ಕಲಿಯುತ್ತದೆ ಮತ್ತು ಹಾಗೆಯೇ ಬೇರೆಯವರನ್ನು ನಂಬುವುದನ್ನೂ ಕಲಿಯುತ್ತದೆ. ಭರವಸೆಯು ಮೂಲ ಸದ್ಗುಣವಾಗಿ ಹೊರಹೊಮ್ಮಿ, ಜೀವನವು ಬದುಕಲು ಮತ್ತು ನಿಯಂತ್ರಿಸಲು ಅರ್ಹ ಎನ್ನುವ ಭಾವನೆಯನ್ನು ಹುಟ್ಟಿಸುತ್ತದೆ. ಶೈಶವಾವಸ್ಥೆಯಲ್ಲಿ ತಾಯಿಯ ಪಾತ್ರ ಅತ್ಯಂತ ನಿರ್ಣಾಯಕ. ಸಂತಸ, ಪ್ರಬುದ್ಧ, ಹಾಗೂ ಸಂತೃಪ್ತ ವ್ಯಕ್ತಿಯಾಗಿ ಆಕೆಯ ವ್ಯಕ್ತಿತ್ವದ ಪ್ರಜ್ಞೆ ನಂಬಿಕೆಯ ಮಟ್ಟವನ್ನು ತನ್ನ ಮಗುವಿಗೆ ತಲುಪಿಸಬಹುದಾದ ಸಾಧ್ಯತೆಗಳನ್ನು ಪ್ರಭಾವಿಸುತ್ತದೆ. ಬಾಹ್ಯ ಶಕ್ತಿಗಳು ಸದಾ ಪ್ರೀತಿ, ಕಾಳಜಿ, ಹಾಗೂ ಊಡಿಸುವಿಕೆಯಿಂದ ವಂಚಿತವಾದ ಮಗುವಿಗೆ ಭರವಸೆ ಮತ್ತು ಸಂತಸದಿಂದ ಬದುಕುವ ಅರಿವನ್ನು ನಿರಾಕರಿಸುತ್ತವೆ. ಈ ರೀತಿಯ ಮಗು ಮೌನಪ್ರವೃತ್ತಿಯ, ವಿಷಾದ ಜಾಡ್ಯದಲ್ಲಿ ಬಂಧಿಸಲ್ಪಟ್ಟ, ಪ್ರಚೋದನೆಗೆ ಕಷ್ಟವಾದ, ಕಿರಿಕಿರಿಯ, ಹಾಗೂ ಸಾಮಾನ್ಯವಾಗಿ ಅಸಂತುಷ್ಟ ಸ್ವಭಾವದ್ದಾಗಿರಬಹುದು. ಸುಲಭವಾಗಿ ಕಾಳಜಿ ಮಾಡಲ್ಪಡಬಹುದಾದಂತಹ ಮಗುವಿಗೆ ಬಡತನ, ಸಾಮಾಜಿಕ ಅಭಾವ, ನಿರ್ಲಕ್ಷ್ಯ, ಹಾಗೂ ಹೆಣ್ಣು ಮಗುವಿನ ವಿರುದ್ಧದ ತಾರತಮ್ಯಗಳು[10] ಅದರ ವಿಕಾಸದ ಮೇಲೆ ಪರಿಣಾಮ ಬೀರಬಹುದು. ಈ ಮಗುವು ಪ್ರಚೋದನೆ, ಸಾಮೀಪ್ಯ, ಹಾಗೂ ನಂಬಲಾರ್ಹ ಪ್ರೀತಿಯ ಕೊರತೆಯಿಂದ ಅನಾಸಕ್ತವಾಗಬಹುದು. ಎರಿಕ್ಸನ್ನನ ಪ್ರಕಾರ, ಈ ಮಗುವು ಭರವಸೆಯ ಸದ್ಗುಣಕ್ಕೆ ವಿರುದ್ಧವಾದ ತಿರುಳಿನಂತೆ ಹೊರಹೊಮ್ಮುವ, ನಿರ್ಲಿಪ್ತತೆಯಂತಹ ಪ್ರಮುಖ ರೋಗಲಕ್ಷಣದ ಸ್ಥಿತಿಯಲ್ಲಿ ಇರಬಹುದು.

> *ನಂಬಿಕೆ ಎನ್ನುವುದರ ಸಾಮಾನ್ಯ ಅರಿವು ಒಬ್ಬ ಬಾಹ್ಯ ವ್ಯವಸ್ಥಾಪಕರ ತದ್ವತ್ತತೆ ಮತ್ತು ನಿರಂತರತೆಯ ಮೇಲೆ ನಿರ್ಭರನಾಗಲು ಕಲಿತಿದ್ದಾನೆ ಎಂದು ಅರ್ಥೈಸಿಕೊಳ್ಳುವುದಷ್ಟೇ ಅಲ್ಲ. ಬದಲಾಗಿ, ಆತ ತನ್ನಲ್ಲಿ ತಾನು ಮತ್ತು ತನ್ನ ಅವಯವಗಳು ಹಂಬಲಗಳ ಜೊತೆ ಏಗುವ ಸಾಮರ್ಥ್ಯದ ಬಗ್ಗೆ ನಂಬಿಕೆ ಇಡಬಹುದು; ಮತ್ತು ವ್ಯವಸ್ಥಾಪಕರು ಯಾವಾಗಲೂ ಎಚ್ಚರದಿಂದ ಇರಬೇಕಾದ ಅಗತ್ಯತೆ ಬೀಳದೆ (ಇವು ನಶಿಸಿ ಹೋಗಬಹುದು ಎನ್ನುವ ಶಂಕೆಯಿಂದ) ತನ್ನನ್ನು ತಾನೇ ನಂಬಲಾರ್ಹ ಎಂದು ಪರಿಗಣಿಸಲು ಶಕ್ತನಾಗಬಹುದು.* (ಎರಿಕ್ಸನ್, 1963, ಪುಟ 148)

## *ಸ್ವಾಯತ್ತತೆಗೆ ಪ್ರತಿಯಾಗಿ ಅವಮಾನ, ಸಂಶಯ: ಬಾಲ್ಯ (1½ - 3 ವರ್ಷಗಳು)*

ಪೋಷಕರು ಮತ್ತು ಸಂಬಂಧಿಕರು ಶಿಶುವು ದೈಹಿಕ ಚಲನಶೀಲತೆ ಗಳಿಸಿದ ಸಮಯದಿಂದಾಚೆಗೆ (ಸುಮಾರು 12-14 ತಿಂಗಳ ವಯಸ್ಸಿನಿಂದ) ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಮಯಲೀಕರಣ[11] ಹೆಚ್ಚಿದಂತೆ ಮಗು ತನ್ನದೇ ಪರಿಮಿತಿಯಲ್ಲಿ ಪ್ರಪಂಚದ ಮಿತಿಯನ್ನು ಪರಿಶೋಧಿಸತೊಡಗುತ್ತದೆ.

ಈಗ ತಾನೇ ನಡೆಯಲು ಕಲಿಯುತ್ತಿರುವಾಗ ತನ್ನ ನಡೆದಾಟದ ಹೊಸ ಸಾಮರ್ಥ್ಯದ ಸಂತಸಕ್ಕೆ ನಿರಂತರವಾದ 'ಬೇಡ', 'ಅಲ್ಲಿ ಬೇಡ', 'ಇಲ್ಲಿ ಬೇಡ' ಎನ್ನುವ ಅಸ್ಥಿರ ಕೂಗುಗಳು ಕೇಳಿಬರುತ್ತಿದ್ದರೆ, ಆ ಸಣ್ಣ ಮಗುವಿನ ಪಾಡನ್ನು ಚಿತ್ರಿಸಿಕೊಳ್ಳಿ. ಸುರಕ್ಷತೆಗೆ ಸಂಬಂಧಿಸಿದ ಹೊಸ ತಲ್ಲಣಗಳ ಒಂದು ಕಂತೆ ಮಗುವಿನ ಚಿಗುರುತ್ತಿರುವ ಸ್ವಾಯತ್ತತೆಯ ಬಯಕೆ ಮತ್ತು ಪ್ರಪಂಚವನ್ನು ಪರಿಶೋಧಿಸುವ ಹಂಬಲಗಳನ್ನು ಮೊಟಕುಗೊಳಿಸುತ್ತದೆ. ಹೊಸ ಮತ್ತು ಬಹಳಷ್ಟು ಸಲ ಅವೇದ್ಯವಾದ ನಿಯಮಗಳು ಮಗುವಿಗೆ ತನ್ನ ಆಂತರಿಕ ಹಂಬಲಗಳನ್ನು ಪರಿಶೋಧಿಸುವ ಮತ್ತು ಪೂರೈಸಿಕೊಳ್ಳುವ ಅವಕಾಶಗಳನ್ನು ನಿರಾಕರಿಸುತ್ತವೆ. ಉದಯಿಸುತ್ತಿರುವ

ತನ್ನತನಕ್ಕೆ ನಿಜವಾದ ಮೊಟ್ಟಮೊದಲ ಸವಾಲು 'ಅಹಂ' ಅನ್ನು ಸಂರಕ್ಷಿಸಿಕೊಳ್ಳುವ ಮತ್ತು ಸಾಮಾಜಿಕ ಮಿತಿಗಳ ಜೊತೆ ವ್ಯವಹರಿಸುವ ಅಗತ್ಯತೆಗಳಿಗೆ ಸೂಕ್ತ ಪ್ರತಿಕ್ರಿಯೆಗಳನ್ನು ಬೆಳೆಸಿಕೊಳ್ಳುವ ನಿಯಂತ್ರಣದ ಅರಿವನ್ನು ಹುಡುಕುವುದು ಮತ್ತು ಅಳವಡಿಸಿಕೊಳ್ಳುವುದಾಗಿದೆ. ಹೀಗೆ, ಹೊಸ ಅಸ್ತಿತ್ವದ ಇರವು ಫಲಿತವಾಗಿ ಬರುವ ಹೊಸ ಸಾಮರ್ಥ್ಯವೊಂದನ್ನು ಪರಿಶೋಧಿಸುವುದು ಮತ್ತು ನೈಪುಣ್ಯತೆ ಗಳಿಸಿಕೊಳ್ಳುವುದು ಅಂತರ್ಗತವಾಗಿ ಮನಸ್ಸಂತೋಷ ನೀಡುವುದಾದರೂ ಸಹ, ಇದರ ಜೊತೆಯಾಗಿ ಸಾಮಾಜಿಕವಾಗಿ ಅಂಗೀಕೃತಗೊಂಡ ಮಿತಿಗಳಿಗೆ ವಿಧೇಯಕನಾಗಿರುವ ಅನಿವಾರ್ಯ ಒತ್ತಡ ಮತ್ತು ನಿರೀಕ್ಷೆಗಳಿವೆ. ಮಗುವಿನ ಕೃತ್ಯಗಳ ಸಂಭಾವ್ಯ ಪರಿಣಾಮಗಳ ಬಗೆಗಿನ ವಿವರಣೆಗಳನ್ನು ಸಂಯಮದಿಂದ ನೀಡಬಹುದಾದರೂ ಸಹ, ಎಳೆಯ ಮಗು ಸಾಮಾಜಿಕ ರೀತಿಗಳ ಚೌಕಟ್ಟಿನ ಒಳಭಾಗದಲ್ಲಿಯೇ ಸ್ವಾಯತ್ತತೆ ಅನುಭವಿಸುವುದನ್ನು ಕ್ರಮೇಣವಾಗಿ ಕಲಿಯುತ್ತದೆ. ಬಾಹ್ಯ ನಿಯಂತ್ರಣ ಕಠಿಣವಾಗಿರುವ ಮತ್ತು 'ಶಿಸ್ತಿಗೆ ಒಳಪಡಿಸುವಿಕೆ' ಬಹಳಷ್ಟು ಬಾರಿ ಅಸಂಗತವಾಗಿರುವ ಸಂದರ್ಭಗಳಲ್ಲಿ, ಮಗು ತನ್ನದೇ ಹಂಬಲಗಳನ್ನು ಸಂಶಯಿಸತೊಡಗುತ್ತದೆ ಮತ್ತು ಅಲ್ಲಿ ಒಳ್ಳೆಯ ಹಾಗೂ ಕೆಟ್ಟ, ಸರಿ ಹಾಗೂ ತಪ್ಪುಗಳ ಗೊಂದಲಯುಕ್ತ ಪ್ರಜ್ಞೆ ಹುಟ್ಟಿಕೊಳ್ಳುತ್ತದೆ.

> *ಆದ್ದರಿಂದ, ಬಾಹ್ಯ ನಿಯಂತ್ರಣವು, ಈ ಹಂತದಲ್ಲಿ, ದೃಢವಾಗಿ ಪುನರ್ ವಿಶ್ವಾಸ ನೀಡುವಂತಿರಬೇಕು. ಶಿಶುವಿನ ಭಿನ್ನಾಭಿಪ್ರಾಯ, ಆಯ್ಕೆ ಬೇಕೆಂಬ ಈ ಕ್ಷಣದ ತೀವ್ರ ಬಯಕೆ, ತನ್ನದೇ ವಿಶಿಷ್ಟ ಬೇಡಿಕೆ, ಹಾಗೂ ಹಠಮಾರಿತನದ ವರ್ಜಿಸುವಿಕೆಗಳಿಂದ ಅದರ ಮೌಖಿಕ ಹಂತದ (ಈ ಹಿಂದಿನ ಹಂತ) ಉದ್ರಿಕ್ತ ಸ್ಥಿತಿಯಿಂದ ಕಾಪಾಡಿಕೊಂಡು ಬಂದ ಬಹುಮೂಲ್ಯ ಸಂಪತ್ತಾದ 'ಅಸ್ತಿತ್ವದಲ್ಲಿನ ನಂಬಿಕೆ' ಗಂಡಾಂತರಕ್ಕೆ ಈಡಾಗಲಾರದು ಎನ್ನುವ ಅನಿಸಿಕೆಯನ್ನು ಹೊಂದಬೇಕು. ಮಗುವು 'ದೃಢತೆ'ಯನ್ನು ಇನ್ನೂ ತರಬೇತಿಗೆ ಒಳಪಡದ ವಿವೇಚನೆಯ ಪ್ರಜ್ಞೆಯ ಸಂಭಾವ್ಯ ಅರಾಜಕತೆ, ಯುಕ್ತಾಯುಕ್ತ ಪರಿಜ್ಞಾನದೊಂದಿಗೆ ಹಿಡಿದಿಟ್ಟುಕೊಳ್ಳುವ ಮತ್ತು ಬಿಟ್ಟು ಕೊಡುವಲ್ಲಿನ ಅಸಾಮರ್ಥ್ಯತೆಗಳಿಂದ ಕಾಪಾಡಿಕೊಳ್ಳಬೇಕು. ಪರಿಸರವು ಮಗುವನ್ನು 'ತನ್ನ ಕಾಲಿನ ಮೇಲೆ ತಾನೇ ನಿಲ್ಲಲು' ಪ್ರೋತ್ಸಾಹಿಸುವುದರಿಂದ, ಅದು ಮಗುವನ್ನು ಅವಮಾನ ಮತ್ತು ಪ್ರಾರಂಭಿಕ ಹಂತದ ಸಂಶಯಗಳ ಅನರ್ಥಕಾರಿ ಹಾಗೂ ಅನಿಯಂತ್ರಿತ ಅನುಭವಗಳಿಂದ ಕಾಪಾಡಿಕೊಳ್ಳಬೇಕು.* (ಎರಿಕ್ಸನ್, 1963, ಪುಟ 252)

ಈ ವಯಸ್ಸಿನಲ್ಲಿ ಆಯ್ಕೆ ಮಾಡುವ, ಬದಲಾಯಿಸುವ, ಹಾಗೂ ವಿವೇಚಿಸುವ ಬಯಕೆ ಆಂತರಿಕ ಅಸ್ತಿತ್ವದ ಅಭಿವ್ಯಕ್ತಿಯಾಗಿದೆ. ತನ್ನ ಸ್ವಾಯತ್ತತೆಯನ್ನು ಶೋಧಿಸಿಕೊಳ್ಳಲು ಸರಿಯಾಗಿ ನಿರ್ದೇಶಿಸಲ್ಪಟ್ಟ ಅನುಭವಗಳು ಸಣ್ಣ ಮಗುವಿನಲ್ಲಿ ಹೊರಗಿನ ಜಗತ್ತಿನ 'ನಾನು ಇದ್ದೇನೆ, ನಾನು ಮಾಡಬಲ್ಲೆ, ಮತ್ತು ಆದ್ದರಿಂದ, ನಾನು ಮಾಡುತ್ತೇನೆ ಎನ್ನುವ ಪ್ರಾರಂಭಿಕ ನಂಬಿಕೆಯ ಅನಿಸಿಕೆಯನ್ನು ವಿಸ್ತರಿಸುವ ಮಾನಸಿಕ ಸ್ಥಿತಿಯಾದ 'ಇಚ್ಛೆ'ಯ ಅರಿವನ್ನು ಬಿಡಿಸಿಡಲು ಸಹಾಯ ಮಾಡುತ್ತವೆ. ಸಮಯ, ಸಂಪನ್ಮೂಲಗಳು, ಹಾಗೂ ಕೌಟುಂಬಿಕ ಅಥವಾ ಸಾಂಸ್ಕೃತಿಕ ಪರಿಮಿತಿಗಳ ಆಯ್ಕೆಗಳನ್ನು ಮಾಡುವ ಮಗುವಿನ ಅವಕಾಶಗಳನ್ನು ಮಿತಿಗೊಳಿಸುವಂತಹ ಕುಟುಂಬಗಳಲ್ಲಿ ಮಗು ಮತ್ತು ವಯಸ್ಕರ ನಡುವಿನ ತಿಕ್ಕಾಟಗಳು ವಿವೇಚನೆ ಹಾಗೂ ಸ್ವ-ನಿಯಂತ್ರಣ ಸಾಧಿಸುವ ಮಗುವಿನ ಸಾಮರ್ಥ್ಯಗಳಲ್ಲಿ ಸಂಶಯದ ಭಾವನೆಗಳನ್ನು ಹುಟ್ಟಿಸಬಹುದು. ಸ್ವ-ಸಂಶಯದ ಈ ಪ್ರಾರಂಭಿಕ ಅನಿಸಿಕೆ ವಿಕಾಸದ ಮುಂದಿನ ಹಂತಗಳಲ್ಲಿ ಬಹುಕಾಲ ಉಳಿಯಬಲ್ಲದು ಮತ್ತು ಅದು ಕೊರತೆ, ತಗ್ಗಿದ ಆತ್ಮಗೌರವ, ಹಾಗೂ ಅದುಮಲ್ಪಟ್ಟ ಸಾಮರ್ಥ್ಯತೆಗಳ ಅನಿಸಿಕೆಗಳಿಗೆ ಎಡೆ ಮಾಡಿಕೊಡುತ್ತದೆ. ಬಾಲ್ಯದಲ್ಲೇ ಸ್ವತಂತ್ರವಾಗಿ ರುಚಿ ನೋಡಲು, ಅನುಭವಿಸಲು, ಹಾಗೂ ಉಣ್ಣಲು ಅನುವು ಮಾಡಿಕೊಡುವ ಸ್ವಾಯತ್ತತೆಯ ಅನುಭವಗಳು ಮಗುವಿಗೆ ಆಯ್ಕೆ ಮಾಡುವ, ತನ್ನದೇ ದೇಹಕ್ಕೆ ಕಿವಿಗೊಡುವ, ಪ್ರತಿಫಲಾಪೇಕ್ಷೆಗೆ ತಡೆಯೊಡ್ಡುವ, ಮತ್ತು ತನ್ನ ಇಚ್ಛೆ ಹಾಗೂ ಅನಿಚ್ಛೆಗಳನ್ನು ವ್ಯಕ್ತಪಡಿಸುವ ಶಕ್ತತೆಯನ್ನು ನೀಡುತ್ತವೆ. ಇದೇ ರೀತಿಯಲ್ಲಿ, 2 ಮತ್ತು 4 ವರ್ಷದ ನಡುವಿನ

ಮಗುವಿಗೆ ಸೀಸದ ಕಡ್ಡಿ ಹಾಗೂ ಹಾಳೆ, ಪುಸ್ತಕಗಳು ಹಾಗೂ ಇನ್ನಿತರ ಮುದ್ರಿತ ಸಾಮಗ್ರಿಗಳು, ಕಥೆಗಳು ಹಾಗೂ ದಂತಕಥೆಗಳ ಮೂಲಕ ತನ್ನ ಪ್ರಪಂಚವನ್ನು ಶೋಧಿಸಲು ಅವಕಾಶ ಒದಗಿಸಿದಲ್ಲಿ, ಆ ಮಗುವಿಗೆ ಈ ಪ್ರಾರಂಭಿಕ ಓದು ಹಾಗೂ ಬರೆಯುವ ಅನುಭವಗಳು ತಮ್ಮದೇ ಆದ ಅರ್ಥವನ್ನು ರಚಿಸುವ ಅವಕಾಶ ಒದಗಿಸುತ್ತವೆ. ಶಾಲಾ ಪೂರ್ವ ಅನುಭವಗಳು ಮಗುವಿಗೆ ತನ್ನಿಚ್ಛೆಯಂತೆ ತಾನು ಪುಸ್ತಕಗಳ ಹಾಳೆಗಳನ್ನು ತಿರುಗಿಸುವ ಮತ್ತು ಆಕಾರ ಹಾಗೂ ಆಕೃತಿಗಳನ್ನು ಬರೆದು ಅವುಗಳಿಗೆ ಅರ್ಥ ಹಾಗೂ ತನ್ನದೇ ಕಲ್ಪನೆಗಳನ್ನು ಯೋಜಿಸುವ ಅವಕಾಶಗಳನ್ನು ನಿರಾಕರಿಸಿದಾಗ, ಪ್ರಸಕ್ತ ಮತ್ತು ಅರ್ಥವತ್ತಾದ ಓದು ಹಾಗೂ ಬರಹವನ್ನು ಕಲಿಯುವ ಇಚ್ಛೆಯ ಅರಿವಿಗೆ ಹಿನ್ನಡೆಯಾಗುತ್ತದೆ.

> *ಶಾಶ್ವತವಾದ ಸದ್ಭಾವನೆ ಮತ್ತು ಹೆಮ್ಮೆ ಆತ್ಮಗೌರವದ ನಷ್ಟವಿಲ್ಲದ ಆತ್ಮಸಂಯಮದ ಅರಿವಿನಿಂದ ಸಿಗುತ್ತವೆ; ಆತ್ಮಸಂಯಮದ ನಷ್ಟ ಮತ್ತು ಮಿತಿಮೀರಿದ ಬಾಹ್ಯ ನಿಯಂತ್ರಣದ ಅರಿವಿನಿಂದ ಸಂಶಯ ಹಾಗೂ ಅವಮಾನದ ಶಾಶ್ವತ ಪ್ರವೃತ್ತಿ ಜನಿಸುತ್ತದೆ.* (ಎರಿಕ್ಸನ್, 1963, ಪುಟ 254)

### *ಉಪಕ್ರಮತೆಗೆ ಪ್ರತಿಯಾಗಿ ತಪ್ಪಿತಸ್ಥತೆ: ಆಟದ ವಯಸ್ಸು (3 – 6 ವರ್ಷಗಳು)*

ಭರವಸೆ ಮತ್ತು ಇಚ್ಛೆಯಂತಹ ಸದ್ಗುಣಗಳು ಎಳೆಯ ಮಗುವಿಗೆ ಭಾವನಾತ್ಮಕ ಶಕ್ತಿಯನ್ನು ನೀಡುತ್ತವೆ. ಮಗುವು ಈ ಶಕ್ತಿಯಿಂದ ಆಟ ಮತ್ತು ವಿಸ್ತೃತ ಸಾಮಾಜಿಕ ವಿನಿಮಯಗಳ ಮೂಲಕ ಜೀವನದ ರಹಸ್ಯ ಲಿಪಿಯನ್ನು ಭೇದಿಸಲು ಸಹಾಯಕವಾಗುವ ಸಾಮರ್ಥ್ಯವನ್ನು ಪಡೆದಿದ್ದೇನೆ ಎಂದು ಅಂದುಕೊಳ್ಳುತ್ತದೆ. ಮಗುವು ತನ್ನ ಕುಟುಂಬ ಹಾಗೂ ಮನೆಯ ಸದಸ್ಯರು, ಶಿಕ್ಷಕ, ವೈದ್ಯ, ಕಾವಲುಗಾರ, ವಿಮಾನ ಚಾಲಕ, ಆರಕ್ಷಕ, ಮುಂತಾದವರ ಪಾತ್ರಗಳನ್ನು ವಹಿಸುವಂತೆ ನಟಿಸುತ್ತದೆ. ಚಹವನ್ನು ತಯಾರಿಸಿ ಅದನ್ನು ಹಂಚುವಂತೆ ನಟಿಸುವ ಮೂಲಕ ಆಟ ಮತ್ತು ನೈಜ್ಯತೆಗಳ ನಡುವಿನ ವ್ಯತ್ಯಾಸಗಳನ್ನು ಕಂಡುಕೊಳ್ಳುತ್ತದೆ. ನಿಜವಾದ ಹಿಟ್ಟಿನಿಂದ ನಿಜವಾದ ಚಪಾತಿಗಳನ್ನು ತಯಾರಿಸಿ ಅವುಗಳನ್ನು ಬಡಿಸುವ ಮೂಲಕ ಊಹಾತ್ಮಕ ಪ್ರಪಂಚ ಮತ್ತು ನೈಜ್ಯ ಪ್ರಪಂಚದ ನಡುವಿನ ವ್ಯತ್ಯಾಸವನ್ನು ಗುರುತಿಸಲು ಇಚ್ಛಿಸುತ್ತದೆ. ವಯಸ್ಕರು ಯಾವಾಗಲೂ 'ಕ್ರಿಯೆ ಮತ್ತು ಉದ್ದೇಶ'ದ ಜೀವನದಲ್ಲಿ ಮಗ್ನರಾಗಿರುವಂತೆ ಕಾಣುವ ಪ್ರಪಂಚದಲ್ಲಿ ಕಲ್ಪನೆ, ಗೊಂಬೆ ಹಾಗೂ ಪಾತ್ರಗಳ ಆಟ, ಮತ್ತು ಚಲನ ಸಂಬಂಧಿ ಪ್ರಯೋಗಗಳ ಮೂಲಕ ಮಗು ತನಗೆ ತಾನೇ 'ಕ್ರಿಯೆ ಮತ್ತು ಅರ್ಥ'ದ ಅರಿವನ್ನು ಹುಡುಕಲು ಪ್ರಯತ್ನಿಸುತ್ತದೆ. ಮಗುವಿನ ಈ ಪ್ರಾರಂಭದ ಆಟ ಮತ್ತು ಕೆಲಸ ಅದಕ್ಕೆ 'ಉದ್ದೇಶ'ವೊಂದರ ಪ್ರಜ್ಞೆಯನ್ನು ರೂಪಿಸಿಕೊಳ್ಳಲು ಸಹಾಯ ಮಾಡುತ್ತದೆ. ಪ್ರಾರಂಭತ್ವದ ಗುಣಮಟ್ಟ ತಿಳಿಸಿಕೊಡುವ ಈ 'ಉದ್ದೇಶ'ದ ಪ್ರಜ್ಞೆ ಎನ್ನುವುದು '*ಪ್ರತಿಯೊಂದು ಕ್ರಿಯೆಯ ಅತ್ಯಗತ್ಯ ಭಾಗ, ಮತ್ತು ಹಣ್ಣು ಆರಿಸುವುದರಿಂದ ಹಿಡಿದು ವಾಣಿಜ್ಯ ಸಂಸ್ಥೆಯ ವ್ಯವಸ್ಥೆಯವರೆಗೆ ತಾನು ಕಲಿಯುವ ಹಾಗೂ ಮಾಡುವ ಯಾವುದಕ್ಕೇ ಆದರೂ ಮನುಷ್ಯನಿಗೆ ಇರುವ ಪ್ರಾರಂಭತ್ವದ ಅರಿವು*' (ಎರಿಕ್ಸನ್, 1963, ಪುಟ 255).

ಕೆಲಸಗಳನ್ನು ಮಾಡುವಾಗ ಇರುವ ಒಂದು ಶಕ್ತಿಯುತ ಉತ್ಸಾಹಪೂರ್ಣತೆ ಮತ್ತು ತನ್ನ ಸುತ್ತಮುತ್ತ ನಡೆಯುತ್ತಿರುವ ಪ್ರತಿಯೊಂದರಲ್ಲೂ ಭಾಗಿಯಾಗುವುದರಲ್ಲಿ ಇರುವ ಖುಷಿ ಈ ಹಂತದ ಗುರುತು. ಈ ಜೀವಂತಿಕೆಯು ಅನೇಕವೇಳೆ ಮಗುವನ್ನು ಉನ್ನತ 'ಸ್ವ-ನಿರೀಕ್ಷಣೆ, ಸ್ವ-ನಿರ್ದೇಶನ, ಮತ್ತು ಸ್ವಯಂ-ಶಿಕ್ಷೆ'ಗಳ ಕಡೆಗೆ ಕೊಂಡೊಯ್ಯಲು ಬಯಸುವ ಪೋಷಕರ ಸದ್ಗುಣಗಳ ಜೊತೆಯಲ್ಲಿ ಒಂದುಗೂಡುತ್ತದೆ. ಆದಾಗ್ಯೂ, ಇದು ಪೋಷಕರಿಗಿಂತ ಹೆಚ್ಚಾಗಿ ಸಾಮಾಜಿಕ ರೂಢಿ ಮತ್ತು ಅಭ್ಯಾಸಗಳಿಂದ ನಿರ್ದೇಶಿಸಲ್ಪಡುತ್ತದೆ. ಪರಿಸರವನ್ನು ಪರಿಶೋಧಿಸುವ ಮತ್ತು ಸರಳ ವಸ್ತುಗಳೊಡನೆ ಸಂಶೋಧಿಸುವ ಹಂಬಲವು ಈಗ ಬಾಹ್ಯ ಶಕ್ತಿಗಳಿಗೆ

ಸರಿಹೊಂದಿಸಿಕೊಳ್ಳುವ ಮತ್ತು ಸ್ವ-ನಿಯಂತ್ರಣ, ಕಾರಣ, ಹಾಗೂ ಸಮಾನ ಮನೋಧರ್ಮಗಳ ಆಧಾರದ ಮೇಲೆ ಹೊರಹೊಮ್ಮುತ್ತಿರುವ ನೈತಿಕತೆಯನ್ನು ಬೆಳೆಸಿಕೊಳ್ಳುವ ಒತ್ತಡದಡಿಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತದೆ. ಈ ಸಂಘರ್ಷಗಳನ್ನು ನಿಭಾಯಿಸುವ ರೀತಿ, ಈ ಹಂತದಲ್ಲಿ, ಮಗುವಿನ ಭಾವನೆಗಳ ನಿಯಂತ್ರಣ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಪ್ರಾರಂಭತ್ವದ ಪ್ರಜ್ಞೆಗೆ ಹೊರಹೊಮ್ಮುತ್ತಿರುವ ಮತ್ತು ವಿಕಸನಗೊಳ್ಳುತ್ತಿರುವ ಮಾನಸಿಕ, ಸಾಮಾಜಿಕ, ಹಾಗೂ ದೈಹಿಕ ಅವಕಾಶಗಳು ನಿರಾಕರಿಸಲ್ಪಟ್ಟ ಸಂದರ್ಭಗಳಲ್ಲಿ, ತಪ್ಪಿತಸ್ಥ ಮನೋಭಾವದ ಪ್ರಜ್ಞೆ ಬೆಳೆದು ಅದು ಗೀಳಾಗಿ ಬದಲಾಗಬಹುದು, ಇದು ಕ್ರಮೇಣ ಶಾಶ್ವತ ಸ್ವ-ಸಂಶಯವಾಗಬಹುದು. ಒಡನಾಡಿಗಳ ಜೊತೆಗಿನ ಸಂಘರ್ಷಗಳನ್ನು ಪರಿಹರಿಸಿಕೊಳ್ಳುವಲ್ಲಿ ತನ್ನದೇ ನೈತಿಕ ಹೊಣೆಗಾರಿಕೆಯನ್ನು ಹುಡುಕುತ್ತಿರುವ, ಅಥವಾ ತನ್ನ ಕಲ್ಪನೆಗಳು ಹಾಗೂ ಬಯಕೆಗಳ ಜೊತೆ ವ್ಯವಹರಿಸುತ್ತ ತನ್ನದೇ ಕನಸುಗಳಲ್ಲಿ ಬದುಕಲು ಮತ್ತು ತನ್ನ ಒಳಿತಿನೆಡೆ ಸಾಗಲು ಬಯಸುತ್ತಿರುವ ಮಗುವನ್ನು ನಂಬದಿದ್ದ ಪಕ್ಷದಲ್ಲಿ, ಆ ಮಗುವು ತನ್ನ 'ಆಕ್ರೋಶ'ವನ್ನು ತನ್ನೆಡೆಗೇ ತಿರುಗಿಸಿಕೊಂಡು ದೀರ್ಘಕಾಲದವರೆಗೆ 'ಹಿಂಜರಿಕೆ'ಯ ಪ್ರಜ್ಞೆಯೊಂದಿಗೆ ಬದುಕುತ್ತದೆ.

> *ಸಮಸ್ಯೆಯು, ಪುನಃ, ಪರಸ್ಪರ ನಿಯಂತ್ರಣಗಳಲ್ಲೊಂದಾಗಿದೆ. ಈ ಹೊತ್ತಿಗಾಗಲೇ ತನ್ನನ್ನು ಮಾರ್ಪಡಿಸಿಕೊಳ್ಳಲು ತಯಾರಿರುವ ಮಗು ನೈತಿಕ ಜವಾಬ್ದಾರಿಯ ಪ್ರಜ್ಞೆಯನ್ನು ಕ್ರಮೇಣ ಬೆಳೆಸಿಕೊಳ್ಳಬಹುದಾದ ಸಂದರ್ಭಗಳಲ್ಲಿ, ತನ್ನ ಜವಾಬ್ದಾರಿಯುತ ಭಾಗವಹಿಸುವಿಕೆಗೆ ಅನುವು ಮಾಡಿಕೊಡಬಲ್ಲ ಸಂಸ್ಥೆಗಳು, ಕಾರ್ಯಕ್ರಮಗಳು, ಹಾಗೂ ಪಾತ್ರಗಳಲ್ಲಿ ಅರಿವನ್ನು ಬೆಳೆಸಿಕೊಳ್ಳಬಲ್ಲ ಸಂದರ್ಭಗಳಲ್ಲಿ, ಪರಿಕರಗಳು ಹಾಗೂ ಆಯುಧಗಳನ್ನು ಪ್ರಯೋಗಿಸುವಲ್ಲಿ, ಅರ್ಥಪೂರ್ಣ ಆಟಿಗೆಗಳನ್ನು ಕುಶಲತೆಯಿಂದ ನಿರ್ವಹಿಸುವಲ್ಲಿ, ಮತ್ತು ಸಣ್ಣ ಮಕ್ಕಳನ್ನು ಕಾಳಜಿ ಮಾಡುವಲ್ಲಿ ಸಂತೋಷದಾಯಕ ಸಾಧನೆಯನ್ನು ಕಾಣುತ್ತದೆ.* (ಎರಿಕ್ಸನ್, 1963, ಪುಟ 256)

ಮಕ್ಕಳಲ್ಲಿ ಕುಟುಂಬ ಮತ್ತು ಶಾಲಾ ಜೀವನ ವಿಭಿನ್ನ ರೀತಿಗಳಲ್ಲಿ ಪ್ರಾರಂಭತ್ವ ಹಾಗೂ ಉದ್ದೇಶಗಳ ವಿಕಾಸವನ್ನು ಪ್ರಭಾವಿಸುತ್ತದೆ. ಎಲ್ಲಿ ಶಾಲಾ ವ್ಯಾಸಂಗ ಕ್ರಮ ಮಕ್ಕಳಿಗೆ ಅನಿಸಿಕೆಗಳನ್ನು ಹಂಚಿಕೊಳ್ಳಲು, ಭಾವನೆಗಳನ್ನು ವ್ಯಕ್ತಪಡಿಸಲು, ಸಂಘರ್ಷಗಳನ್ನು ಬಗೆಹರಿಸಿಕೊಳ್ಳಲು, ಒಂದು ಸಮಾನ ನೈತಿಕ ನೆಲೆಗಟ್ಟನ್ನು ಕಂಡುಕೊಳ್ಳಲು, ಯೋಜನೆಗಳನ್ನು ಹೇಳಿಕೊಳ್ಳಲು, ಪ್ರಯೋಗ ಮಾಡಲು, ಮತ್ತು ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಅನುವು ಮಾಡಿಕೊಡುತ್ತದೆಯೋ, ಅಲ್ಲಿ ಮಕ್ಕಳು ತಮ್ಮ ಸಾಮರ್ಥ್ಯಗಳಲ್ಲಿ ನಂಬಿಕೆ ಬೆಳೆಸಿಕೊಳ್ಳುತ್ತಾರೆ ಮತ್ತು ತಮ್ಮ ಆಸಕ್ತಿಗಳನ್ನು ವಿಸ್ತರಿಸಿಕೊಳ್ಳುತ್ತಾರೆ. ಅಹಂ ಸ್ವಸ್ವರೂಪದ ಆಂತರಿಕ ತಳಪಾಯದ ವಿಕಾಸಕ್ಕೆ ಸೂಕ್ತ ವ್ಯಾಸಂಗ ಕ್ರಮ ಅತ್ಯಗತ್ಯ. ಇಂತಹ ವ್ಯಾಸಂಗ ಕ್ರಮ ಲಭ್ಯವಿರದ ಸಂದರ್ಭಗಳಲ್ಲಿ, ಮತ್ತು ಕೌಶಲ್ಯ ಹಾಗೂ ಪಠ್ಯಾಧಾರಿತ ಕಲಿಕೆಯನ್ನು ಹೇರಲ್ಪಟ್ಟು ದೀರ್ಘಕಾಲ ಕುಳಿತುಕೊಳ್ಳಬೇಕಾದ ನಿರೀಕ್ಷೆ ಹೊತ್ತ ಮಕ್ಕಳಲ್ಲಿ, ಬಾಲ್ಯವು ಕಲಿಯಲು, ಪರಿಶೋಧಿಸಲು, ಹಾಗೂ ಸೃಷ್ಟಿಸಲು ಅವರ ಆಂತರಿಕ ಪ್ರೇರೇಪಣೆಯನ್ನು ನಿರ್ದೇಶಿಸುವ ಸಾಮರ್ಥ್ಯದ ಬದಲಾಗಿ ನಿರಾಸಕ್ತಿ, ಸ್ವ-ಸಂಶಯ, ಹಾಗೂ ತಪ್ಪಿತಸ್ಥತೆಯಿಂದ ಗುರುತಿಸಲ್ಪಡುತ್ತದೆ.

ಪೂರ್ವ-ಪ್ರಾಥಮಿಕ ಮತ್ತು ಪ್ರಾಥಮಿಕ ಶಿಕ್ಷಣದಲ್ಲಿ ಕೌಶಲ್ಯಾಧಾರಿತ ಪರೀಕ್ಷೆಗಳನ್ನು ನಡೆಸುವ ಪರಿಪಾಠ ಬಹಳಷ್ಟು ಕುಟುಂಬಗಳಲ್ಲಿ ಕಲಿಕೆ ಮತ್ತು ವಿಕಾಸದ ಭ್ರಾಂತಿಯನ್ನು ಹುಟ್ಟಿಸುತ್ತದೆ. ಶಾಲೆಗಳು ಅತಿ ವಿರಳವಾಗಿ ಮಕ್ಕಳನ್ನು ಆಲೋಚಿಸುವ ಮತ್ತು ಅನುಭವಿಸುವ ಜೀವಿಗಳಾಗಿ, ತಮ್ಮದೇ ಅಥವಾ ತಮ್ಮ ಒಡನಾಡಿಗಳ ಅಗತ್ಯತೆಗಳು ಮತ್ತು ಹಂಬಲಗಳಿಗೆ ತೆರೆದುಕೊಳ್ಳುವ ಸೂಕ್ಷ್ಮತೆಯುಳ್ಳವರನ್ನಾಗಿ ಬೆಳೆಸಬೇಕಾದ ಪ್ರಮುಖ ಪ್ರಕ್ರಿಯೆಗಳ ಬಗ್ಗೆ ಗಂಭೀರ ಚಿಂತನೆ ಮಾಡಿವೆ. ಸರಿಯಾದ ಪರಾಮರ್ಶೆಗೆ ಒಳಪಟ್ಟ ಶೈಕ್ಷಣಿಕ ವ್ಯಾಸಂಗ ಕ್ರಮವೊಂದು ಮಕ್ಕಳಲ್ಲಿ ಉದ್ದೇಶ ಮತ್ತು ಕ್ರಿಯೆಗಳ ವಿಕಾಸವನ್ನು ಸಾಧ್ಯವಾಗಿಸುವ ಅತ್ಯಾವಶ್ಯಕ ಅಂಶಗಳನ್ನು ತಿಳಿಸಿಕೊಡುವಲ್ಲಿ ಪ್ರಮುಖ ಕೊಡುಗೆ ನೀಡಬಲ್ಲದು. ಈ ಸಾಧ್ಯತೆಯನ್ನು ಮಾನವ ವಿಕಾಸದ ಹಂತಗಳ

ಗ್ರಹಿಕೆಯನ್ನು ಶೈಕ್ಷಣಿಕ ರಚನೆ ಮತ್ತು ಸಂವಾದಗಳಲ್ಲಿ ಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಳ್ಳುವ ಮೂಲಕ ಸಾಧ್ಯವಾಗಿಸಬಹುದು.

### *ದುಡಿಮೆಗೆ ಪ್ರತಿಯಾಗಿ ಕೀಳರಿಮೆ: ಶಾಲಾ ವಯಸ್ಸು (6 – 12 ವರ್ಷಗಳು)*

ಆಟ, ಕಲ್ಪನೆ, ಹಾಗೂ ತೀವ್ರ ದೈಹಿಕ ಬೆಳವಣಿಗೆಯ ಹಂತದ ತರುವಾಯ ಬರುವ ಹಂತವೆಂದರೆ ಹೊಸ ಪರಿಕರಗಳು ಮತ್ತು ಕೌಶಲ್ಯಗಳು, ಕ್ರಿಯಾಶೀಲ ಕಲ್ಪನಾಶಕ್ತಿ, ಮತ್ತು ಬುದ್ಧಿಯನ್ನು ತೊಡಗಿಸಿಕೊಳ್ಳುವ ಹಾಗೂ ಬಳಸುವ ತವಕಗಳ ಸಹಾಯದಿಂದ 'ಉದ್ದೇಶ'ದ ಪ್ರಜ್ಞೆಯನ್ನು ಹುಡುಕಿಕೊಳ್ಳುವುದು. ಈ ಹಂತದಲ್ಲಿ ಮಗುವಿನ ಬೌದ್ಧಿಕ ಸಾಮರ್ಥ್ಯವು ರಚಿಸುವ, ಊಹಿಸುವ, ತಂತ್ರಜ್ಞಾನ ಬಳಸುವ, ಹಾಗೂ ವ್ಯವಸ್ಥಿತ ಕಾರ್ಯವಿಧಾನಗಳ ಮೂಲಕ ಜ್ಞಾನವನ್ನು ಗಳಿಸುವ ಹಂಬಲಗಳನ್ನು ಹೊಂದಿದ ಅಮೂರ್ತ ಚಿಂತನೆಗಳ ಜೊತೆಗೆ ಸಂಧಾನ ನಡೆಸಬಲ್ಲದು. ಈ 'ದುಡಿಮೆ'ಯ ಪ್ರಜ್ಞೆಯು ತನ್ನ ಸಮಾಜ ಮತ್ತು ಸಂಸ್ಕೃತಿಯಲ್ಲಿ ಉಳಿಯಲು ಅಗತ್ಯವಾದ ಕೌಶಲ್ಯಗಳನ್ನು ಕಲಿಸುವ 'ಸಾಮರ್ಥ್ಯ'ದ ಪ್ರಜ್ಞೆಯನ್ನು ಒದಗಿಸುತ್ತದೆ. ಎರಿಕ್ಸನ್ ಯುವ ಜನಾಂಗವನ್ನು ಭವಿಷ್ಯದ ವಯಸ್ಕ ಜೀವನಕ್ಕೆ, ಸಾಮಾಜಿಕ ಪ್ರಭಾವಗಳಿಂದ ರೂಪಿಸಲ್ಪಟ್ಟ ಆದರೆ ಸಂಪೂರ್ಣವಾಗಿ ಬಾಹ್ಯ ಶಕ್ತಿಗಳಿಂದ ವಿಧಿಸಲ್ಪಡದ, ತನ್ನದೇ ಆದ 'ಸಾಮರ್ಥ್ಯ' ಹಾಗೂ 'ಉದ್ದೇಶ'ಗಳ ಪ್ರಜ್ಞೆಯನ್ನು ಹುಡುಕಿಕೊಳ್ಳಲು ತಯಾರು ಮಾಡುವ ಅತ್ಯಗತ್ಯ ವಿಕಾಸಾತ್ಮಕ ಅನುಭವವಾದ 'ದುಡಿಮೆ' ಪದವನ್ನು ವಿಶೇಷಿಸಲು 'ಉದ್ಯೋಗಶೀಲತೆ' ಎಂಬ ಪದವನ್ನು ಸಹ ಉಪಯೋಗಿಸುತ್ತಾನೆ.

ಮಗುವು ವಯಸ್ಕನಾಗುವ ಮೊದಲೇ ಅದಕ್ಕೆ ವಯಸ್ಕತೆ ಸಾಧ್ಯವಾಗುವ ರೀತಿಗಳು ತಿಳಿದಿರಬೇಕು. ತನ್ನ ಮತ್ತು ತನ್ನ ಮೇಲೆ ನಿರ್ಭರರಾಗುವವರ ಉಳಿವನ್ನು ಖಾತ್ರಿಗೊಳಿಸುವ ರೀತಿಗಳನ್ನು ಅದು ಕಲಿಯಬೇಕಾಗುತ್ತದೆ. ಈ 'ಸಾಮರ್ಥ್ಯ'ದ ಪ್ರಜ್ಞೆಯು 'ಕೆಲಸ'[12] ಮತ್ತು ತನ್ನ ಸಂಸ್ಕೃತಿಯಲ್ಲಿ ಅದರ ಪಾತ್ರವು ವ್ಯಕ್ತವಾಗಿರುವ ಗ್ರಹಿಕೆಗೆ ನೆಲೆಗಟ್ಟನ್ನು ಒದಗಿಸುತ್ತದೆ. ಈ ಶಕ್ತಿ ತನ್ನ ವಿಕಾಸಕ್ಕೆ ತನ್ನ ಪೂರ್ವವರ್ತಿಗಳಾದ 'ಭರವಸೆ', 'ಇಚ್ಛೆ', ಹಾಗೂ 'ಉದ್ದೇಶ'ಗಳ ಮೇಲೂ ಅವಲಂಬಿತವಾಗುತ್ತದೆ. 'ಉದ್ದೇಶ' ಮತ್ತು 'ದುಡಿಮೆ'ಗಳ ಪ್ರಜ್ಞೆ ಪೋಷಣೆಗೊಳಗಾಗದ ಸಂದರ್ಭಗಳಲ್ಲಿ, ಮಗುವು ನಷ್ಟ ಹಾಗೂ ಯಾವ ವಿದ್ಯಮಾನವೂ ಪ್ರಭಾವ ಬೀರದ ಅಥವಾ ವಿಮುಖವಾಗಿ ತೋರುವ ಜಡತ್ವದ ಪ್ರಜ್ಞೆಯಾಗಿ ವ್ಯಕ್ತಪಡುವ ಬುದ್ಧಿಮತ್ತೆಯ ಅಶಕ್ತತೆ ಸ್ಥಿತಿಯಲ್ಲಿ ತನ್ನನ್ನು ತಾನು ಕಾಣಬಹುದು.

> *ಮಗುವಿನ ಅಪಾಯ, ಈ ಹಂತದಲ್ಲಿ, ಅಸಮರ್ಥತೆ ಮತ್ತು ನಿಕೃಷ್ಟತೆಗಳ ಪ್ರಜ್ಞೆಯಲ್ಲಿ ನೆಲೆಸಿರುತ್ತದೆ. ಮಗು ತನ್ನ ಪರಿಕರಗಳು ಮತ್ತು ಕೌಶಲ್ಯಗಳು ಅಥವಾ ತನ್ನ ಪರಿಕರ ಒಡನಾಡಿಗಳ ನಡುವೆ ತನ್ನ ಮಾನ್ಯತೆಯ ಬಗ್ಗೆ ಹತಾಶೆ ಅನುಭವಿಸಿದಲ್ಲಿ, ಅದು ಅವರೊಡನೆ ಮತ್ತು ಪರಿಕರ ಪ್ರಪಂಚದ ಭಾಗವೊಂದರೊಡನೆ ಗುರುತಿಸಿಕೊಳ್ಳುವಿಕೆಯಲ್ಲಿ ಎದೆಗುಂದಬಹುದು. ಈ ರೀತಿಯ 'ದುಡಿಮೆಯ' ಜೊತೆಗೂಡುವಿಕೆಯಲ್ಲಿ ನಂಬಿಕೆಯ ಅಭಾವ ಮಗುವನ್ನು ಹೆಚ್ಚಿನ ಏಕಾಂತಕ್ಕೆ ಹಾಗೂ ಅಲ್ಪ ಪರಿಕರ-ಜಾಗೃತಿಯುಳ್ಳ ಕೌಟುಂಬಿಕ ಕಲಹಕ್ಕೆ (ಈಡಿಪಸ್ ಕೀಳರಿಮೆಯ (oedipus complex) ಕಾಲಘಟ್ಟದಲ್ಲಿ ಇರುವಂತೆ) ಹಿಂದಡಿ ಇಡುವಂತೆ ಮಾಡಬಹುದು. ಮಗುವು ಪರಿಕರಗಳುಳ್ಳ ಪ್ರಪಂಚದಲ್ಲಿನ ತನ್ನ ಸಾಮಗ್ರಿಗಳು ಮತ್ತು ತನ್ನ ಅಂಗರಚನೆಯ ಬಗ್ಗೆ ಹತಾಶೆ ಅನುಭವಿಸುತ್ತದೆ, ಮತ್ತು ತಾನು ಅಸಾಮಾನ್ಯತೆ ಅಥವಾ ಅಸಮರ್ಥತೆಯಲ್ಲಿ ಮುಳುಗಿರುವಂತೆ ಭಾವಿಸುತ್ತದೆ. ಈ ಘಟ್ಟದಲ್ಲಿ, ವಿಶಾಲ ಸಮಾಜವು ತನ್ನ ತಂತ್ರಜ್ಞಾನ ಮತ್ತು ಆರ್ಥಿಕತೆಯಲ್ಲಿ ಅರ್ಥಪೂರ್ಣ ಪಾತ್ರಗಳನ್ನು ವಹಿಸುವಂತೆ ಮಗುವನ್ನು ಸೇರಿಸಿಕೊಳ್ಳುವ ರೀತಿಗಳಿಂದ ಪ್ರಮುಖವಾಗುತ್ತದೆ. ಕೌಟುಂಬಿಕ ಜೀವನ ಮಗುವನ್ನು ಶಾಲಾ ಜೀವನಕ್ಕೆ ತಯಾರು ಮಾಡುವಲ್ಲಿ ಸೋತಾಗ, ಅಥವಾ ಶಾಲಾ ಜೀವನ ಹಿಂದಿನ ಹಂತಗಳ ಆಶ್ವಾಸನೆಗಳನ್ನು ಉಳಿಸಿಕೊಳ್ಳಲು ಸೋತಾಗ, ಬಹಳಷ್ಟು ಮಕ್ಕಳ ವಿಕಾಸ ಭಗ್ನಗೊಳ್ಳುತ್ತದೆ.* (ಎರಿಕ್ಸನ್, 1963, ಪುಟ 260)

'ದುಡಿಮೆ'ಯ ವಿಕಾಸದ ಹಂತದಲ್ಲಿ ಹುಟ್ಟಿದ ಮತ್ತು ಪರಿಷ್ಕೃತಗೊಂಡ 'ಪರಿಕರಗಳು' ಕ್ರೀಡೆ, ಬರಹ, ರಂಗಶಾಲೆ, ವೈಜ್ಞಾನಿಕ ಪ್ರಾಯೋಗಿಕ ಪರೀಕ್ಷೆ, ಸಂಶೋಧನೆ, ಶಾಲಾ ಕಾರ್ಯಕ್ರಮಗಳ ಸಂಘಟನೆ ಮತ್ತು ವ್ಯವಸ್ಥೆ, ಇನ್ನೂ ಮುಂತಾದ ವ್ಯಾಸಂಗ ಕ್ರಮದ ಅನುಭವಗಳಿಂದ ಹೊರಹೊಮ್ಮುತ್ತವೆ. ಕೆಲವೇ ಕೆಲವು ಖಾಸಗಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಕೆಲ ಮಕ್ಕಳು 'ದುಡಿಮೆ'ಯ[13] ಪ್ರಜ್ಞೆಯ ವಿಕಾಸಕ್ಕೆ ಅವಕಾಶ ಪಡೆಯುವುದನ್ನು ಬಿಟ್ಟರೆ, ನಮ್ಮ ಶೈಕ್ಷಣಿಕ ಅಭ್ಯಾಸಗಳು ಮಾನವ ವ್ಯಕ್ತಿತ್ವದ ಈ ಮೂಲಭೂತ ಘಟಕಗಳ ಬೆಳವಣಿಗೆ ಮತ್ತು ವಿಕಾಸಕ್ಕೆ ಬೇಕಾದ ಅತ್ಯಗತ್ಯ ವ್ಯಾಸಂಗ ಕ್ರಮಕ್ಕೆ ಸ್ಥಳಾವಕಾಶವನ್ನು ಒದಗಿಸಿಲ್ಲ. ಪ್ರೌಢ ತರಗತಿಗಳ ಯುವ ಜನಾಂಗದ ಜೊತೆ ಸಂವಹನ ನಡೆಸಿದಾಗ 'ನಾವು ಶಾಲೆಯಲ್ಲಿ ಇದನ್ನು ಎಂದೂ ಮಾಡಿಲ್ಲ', 'ನಮ್ಮ ಪಠ್ಯಕ್ರಮದಲ್ಲಿ ಇದನ್ನು ನಮಗೆ ಕಲಿಸಿಲ್ಲ', ಮತ್ತು 'ಪರೀಕ್ಷೆಗಳಲ್ಲಿ ನಮ್ಮನ್ನು ಕೇಳಲ್ಪಡುವ ವಿಷಯಗಳ ಹೊರತಾಗಿ ನಾವು ಇದನ್ನು ಏಕೆ ಮಾಡಬೇಕು?' ಎನ್ನುವ ಮಾತುಗಳು ಕೇಳಿಬರುವುದು ಅಚ್ಚರಿಯಲ್ಲ. ಜಡತ್ವದ ಭಾವ, ಉದ್ದೇಶರಾಹಿತ್ಯತೆ, ಹಾಗೂ ಗುರಿಯ ಅನುಪಸ್ಥಿತಿ ಈ ಕಾಲದ ಮಕ್ಕಳು ಅನುಭವಿಸುವ ಸಾಮಾನ್ಯ ಬೇಗುದಿಗಳಾಗಿವೆ. ದಿನಪತ್ರಿಕೆಗಳು ಅತಿ ಹೆಚ್ಚಿನ ಆತ್ಮಹತ್ಯೆ, ಸ್ವೇಚ್ಛಾಚಾರ, ಹಾಗೂ ದುಷ್ಕೃತ್ಯ ಪ್ರಕರಣಗಳನ್ನು ವರದಿ ಮಾಡುತ್ತವೆ. ಕುಟುಂಬಗಳು, ಶಿಕ್ಷಕರು, ಶಾಲೆಯ ಮುಖ್ಯಸ್ಥರು, ಹಾಗೂ ಸಮಾಲೋಚಕರು ನಮ್ಮ ಮಕ್ಕಳಿಗೆ ಒದಗಿಸುತ್ತಿರುವ ಶೈಕ್ಷಣಿಕ ಅನುಭವಗಳ ಚೌಕಟ್ಟುಗಳಲ್ಲಿರುವ ಹುಳುಕುಗಳನ್ನು ಹುಡುಕುವಲ್ಲಿ ವಿಫಲರಾಗಿದ್ದಾರೆ.

ಆಹಾರ ಸಂಪಾದನೆ ಹಾಗೂ ಬಿತ್ತನೆ, ಮತ್ತು ಸಾಂಸ್ಕೃತಿಕ ಹಾಗೂ ಸಮುದಾಯ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳುವಿಕೆ ಸಾಮಾನ್ಯ ಬುಡಕಟ್ಟು ಅಥವಾ ಒಕ್ಕಲು ಸಮಾಜಗಳಲ್ಲಿನ ಯುವ ಜನಾಂಗಕ್ಕೆ ಕ್ರಮೇಣವಾಗಿ ತಮ್ಮ ಜೀವನದಲ್ಲಿ ಒಂದು ಉದ್ದೇಶವನ್ನು ಕಾಣುವುದಕ್ಕೆ ಅವಕಾಶ ಒದಗಿಸುತ್ತದೆ. ಸಮುದಾಯ-ಸಂಬಂಧಿತ ಉದ್ದೇಶ ಮತ್ತು ವಿನಿಮಯಗಳ ಅಭಾವ, ಇನ್ನಿತರ ಕಾರಣಗಳ ನಡುವೆ, ಸ್ಪರ್ಧಾತ್ಮಕ ಅನುಕೂಲತೆಯನ್ನು ಗಳಿಸಿಕೊಳ್ಳುವಿಕೆಗೆ ಪ್ರಾಮುಖ್ಯತೆ ನೀಡುವ ಆಧುನಿಕ ತಾಂತ್ರಿಕತೆಯುಳ್ಳ ಪ್ರಭುತ್ವ ಸಮಾಜಗಳಲ್ಲಿ ವಿಭಿನ್ನ ರೂಪದ ಭ್ರಮರಾಲೋಕ ಮತ್ತು ಸಾಮಾಜಿಕ ಜಾಲಬಂಧಗಳು (virtual and social networking) ಹೊರಹೊಮ್ಮಲು ಕಾರಣೀಭೂತವಾಗಿದೆ. ದುರದೃಷ್ಟವಶಾತ್, ಮನರಂಜನೆ ಮತ್ತು ಸೌಂದರ್ಯಾಕರ್ಷಣೆಯ ಪ್ರಪಂಚವು ಉದ್ದೇಶಪೂರ್ವಕ ಸಾಮಾಜಿಕ ವಿನಿಮಯಗಳ ಅವಕಾಶವನ್ನು ಆಕ್ರಮಿಸಿಕೊಂಡು, ತನ್ಮೂಲಕ 'ಉದ್ದೇಶ' ಮತ್ತು 'ದುಡಿಮೆ'ಯ ಪ್ರಜ್ಞೆಗಳ ವಿಕಾಸಕ್ಕೆ ಅತ್ಯಲ್ಪ ಅವಕಾಶಗಳನ್ನು ನೀಡಿದೆ. ಜೊತೆಯಾಗಿ, ಗಣೀಕೃತ (digital) ಪ್ರಪಂಚ ಮತ್ತು ಜನಪ್ರಿಯ ಅಭ್ಯಾಸಗಳು ಯುವ ಜನಾಂಗದ ಅರ್ಥಪೂರ್ಣ ತೊಡಗಿಸಿಕೊಳ್ಳುವಿಕೆಯ ಭ್ರಮೆಯನ್ನು ಮಾತ್ರ ಹುಟ್ಟಿಸುತ್ತವೆ. ಮತ್ತೊಂದು ಕಡೆ, ಉತ್ಕಟ ಸ್ಥಿತಿಗಳಲ್ಲಿ, ಮೂಲಭೂತವಾದಿ ಪ್ರಭಾವಗಳು ಹೊರಹೊಮ್ಮುತ್ತಿರುವ ತನ್ನತನದ ಪ್ರಜ್ಞೆಯ ವಿಕಾಸಕ್ಕೆ ದಾರಿಗಳನ್ನು ಹುಡುಕುವಲ್ಲಿ ವಿಫಲರಾಗುತ್ತಿರುವ ಯುವ ಜನಾಂಗದ ಜೀವನದಲ್ಲಿನ ಕೊರತೆಯನ್ನು ತುಂಬುತ್ತಿವೆ. ಆದರೆ, ಸ್ಕೌಟ್ ಮತ್ತು ಗೈಡ್ ಆಂದೋಲನಗಳು, ಪ್ರಾಣಿದಯಾ ಸಂಘಗಳು, ರಂಗತಂಡಗಳು, ಕಲೆ ಮತ್ತು ಸಂಸ್ಕೃತಿಯೊಡನೆ ತೊಡಗಿಸಿಕೊಳ್ಳುವಿಕೆ, ಸಮುದಾಯ ವಿಕಾಸದಲ್ಲಿ ತೊಡಗಿಸಿಕೊಳ್ಳುವಿಕೆ, ಮತ್ತು ನಿರಂತರ ಹೊರಾಂಗಣ ಸಾಹಸ ಮತ್ತು ಕ್ರೀಡೆಗಳಂತಹ ಚಟುವಟಿಕೆಗಳು, ಸಂದರ್ಭಗಳು, ಹಾಗೂ ಧ್ಯೇಯಗಳಲ್ಲಿ ತೊಡಗಿಸಿಕೊಂಡಿರುವ ಯುವ ಜನಾಂಗದ ಸಣ್ಣ ಗುಂಪುಗಳಿಂದ 'ಉದ್ದೇಶ' ಮತ್ತು 'ದುಡಿಮೆ'ಯ ಪ್ರಜ್ಞೆ ಪೋಷಿತಗೊಳ್ಳುತ್ತದೆ.

### *ವ್ಯಕ್ತಿತ್ವಕ್ಕೆ ಪ್ರತಿಯಾಗಿ ಪಾತ್ರದ ಗೊಂದಲ: ತಾರುಣ್ಯ (10 – 24/26 ವರ್ಷಗಳು)*

ಮಗುವು ಬಾಲ್ಯದ ವರ್ಷಗಳಲ್ಲಿ ಮೊತ್ತಮೊದಲು 'ಭರವಸೆ', 'ಇಚ್ಛೆ', 'ಉದ್ದೇಶ', ಹಾಗೂ 'ಸಾಮರ್ಥ್ಯ'ಗಳ ಸದ್ಗುಣಗಳನ್ನು ಯಶಸ್ವಿಯಾಗಿ ಪರಿಹರಿಸಿಕೊಂಡಲ್ಲಿ ತನ್ನ ಮುಂದಿನ ಜೀವನದ ಅನುಭವಗಳನ್ನು 'ಸ್ವಾಯತ್ತತೆ', 'ಪ್ರಾರಂಭತ್ವ', ಹಾಗೂ 'ದುಡಿಮೆ'ಯ ಪ್ರಜ್ಞೆಗಳೊಂದಿಗೆ ರಚಿಸಿಕೊಳ್ಳುವುದನ್ನು ಕಲಿಯಲು ಬೇಕಾದ ಫಲವತ್ತಾದ ಭೂಮಿ ಲಭಿಸುತ್ತದೆ. ನಾಟಕೀಯ ಜೈವಿಕ ಬದಲಾವಣೆಗಳಿಗೆ ಸರಿಸಮಾನವಾಗಿ ಸಾಮಾಜಿಕ ನಡವಳಿಕೆ ಮತ್ತು ನಿರೀಕ್ಷೆಗಳು ನಾಟಕೀಯ ತಿರುವು ಪಡೆಯುವ ಹರೆಯದ ಈ ಹಂತದಲ್ಲಿ ಕುಟುಂಬ ಮತ್ತು ವಿಶಾಲ ಸಮಾಜದಲ್ಲಿ ಮಗುವಿನ ಹೊಸದಾಗಿ ಹೊರಹೊಮ್ಮುತ್ತಿರುವ ಪಾತ್ರವನ್ನು ಅಳೆಯಲು ಅದರ ಸದ್ಗುಣಗಳು ಮರು-ಪ್ರಚೋದನೆಗೆ ಒಳಲ್ಪಡುತ್ತವೆ. ಈ ಪ್ರಮುಖ ಜೈವಿಕ-ನಡವಳಿಕೆ ಪಲ್ಲಟವು ಪುನಃಸಂಘಟನೆ ಮತ್ತು ಸಮಗ್ರೀಕರಣದ ಮೂಲಕ ತನ್ನ ಜೀವನವನ್ನು ರೂಪಿಸಿದ ಹಿಂದಿನ ಸದ್ಗುಣಗಳ ಸಮೂಹವನ್ನು ತಕ್ಕ ಕ್ರಮದಲ್ಲಿ ಜೋಡಿಸಲು ಮಗುವನ್ನು ಪ್ರೇರೇಪಿಸುತ್ತದೆ. ಈ ಮೂಲಕ ಮಗು ತನ್ನಲ್ಲಿ ಹೊರಹೊಮ್ಮುತ್ತಿರುವ ವ್ಯಕ್ತಿತ್ವದಲ್ಲಿ ಹೊಸ ಶಕ್ತಿಯನ್ನು ತುಂಬಲು ಪ್ರಯತ್ನಿಸುತ್ತದೆ. ಬಾಲ್ಯ ಮತ್ತು ಹರೆಯದ ನಡುವಿನ ಮನೋಸಾಮಾಜಿಕ ಹಂತದಲ್ಲಿರುವ ತರುಣ(ಣಿ) ಬಾಲ್ಯದಲ್ಲಿ ಗಳಿಸಿಕೊಂಡ ನೈತಿಕತೆಗೆ ಹೊಸ ಅರ್ಥವನ್ನು ನೀಡಲು ಕಲಿಯುತ್ತಾನೆ(ಳೆ) ಮತ್ತು ಭವಿಷ್ಯದ ವಯಸ್ಕತೆಯಲ್ಲಿ ಬೆಳೆಸಿಕೊಳ್ಳುವ ಮತ್ತು ಅಳವಡಿಸಿಕೊಳ್ಳುವ ಹೊಸ ನೈತಿಕತೆಯನ್ನು ಅಳವಡಿಸಿಕೊಳ್ಳಲು ತೊಡಗುತ್ತಾನೆ(ಳೆ).

'ಉದ್ದೇಶ' ಮತ್ತು 'ದುಡಿಮೆ'ಯ ಪ್ರಜ್ಞೆಯನ್ನು ಅನುಭವಿಸುವ ಅವಕಾಶಗಳು ಈಗ ಮಗುವನ್ನು ತನ್ನ ಸ್ನೇಹಿತರು ಹಾಗೂ ಅವರ ಆಸಕ್ತಿಗಳು, ಉಡುಪು ಹಾಗೂ ಮಾದರಿಗಳು, ಮನರಂಜನೆ (ಸಂಗೀತ, ಸಿನೆಮಾಗಳು), ಪ್ರವಾಸೀ ಸ್ಥಳಗಳು, ಸಂವಾದ ಹಾಗೂ ಚರ್ಚೆಯ ವಿಷಯಗಳು, ಹಾಗೂ ಬದಲಾಗುತ್ತಿರುವ ನೈತಿಕತೆ ಹಾಗೂ ಸದ್ಗುಣಗಳ ಬಗ್ಗೆ ವಿಕಸಿತಗೊಳ್ಳುತ್ತಿರುವ ತನ್ನದೇ ಇಚ್ಛೆ ಹಾಗೂ ಅನಿಚ್ಛೆಗಳಿಂದ ಆರಿಸಿಕೊಳ್ಳಲು ಕಲಿಯಬೇಕಾದ ಹಂತಕ್ಕೆ ತರುತ್ತವೆ. ಮತ್ತು ಇದೆಲ್ಲವನ್ನೂ ಮಗು ತನ್ನ ಶರೀರದಲ್ಲಿ ಗ್ರಂಥಿಗಳ ಬದಲಾವಣೆಗಳಿಂದಾಗುತ್ತಿರುವ ಉದ್ವೇಗವನ್ನು ಸಮಾನಾಂತರವಾಗಿ ನಿಭಾಯಿಸುತ್ತ ಮಾಡುವುದನ್ನು ಕಲಿಯಬೇಕಾಗುತ್ತದೆ. ಎಳೆಯ ಮಗುವಿಗೆ ಸಾಮಾಜಿಕ ಹಿನ್ನಲೆಯೊಂದರಲ್ಲಿ ತನ್ನನ್ನು ತಾನು ಹುಡುಕಿಕೊಳ್ಳುವ ಬಯಕೆ ಸರ್ವಪ್ರಧಾನವಾಗುತ್ತದೆ. ಆದ್ದರಿಂದ, ವರ್ಗವೊಂದಕ್ಕೆ ಸೇರ್ಪಡೆಯಾಗಿರುವ ಅರಿವು ಅತ್ಯಗತ್ಯವಾಗುತ್ತದೆ. ವ್ಯಕ್ತಿಯ ಇಚ್ಛೆ ಮತ್ತು ಅನಿಚ್ಛೆಗಳು ಸತತವಾಗಿ ಬದಲಾಗುವುದರಿಂದ, ಹೊರಹೊಮ್ಮುತ್ತಿರುವ ತನ್ನತನದ ಅರಿವಿಗೆ ಹೊಂದಿಕೆಯಾಗದ ಸಾಮಾಜಿಕ ಪ್ರಭಾವಗಳು ನಿರಾಕರಿಸಲ್ಪಡುತ್ತವೆ ಅಥವಾ ಬೆದರಿಕೆಗಳು ಎಂದು ಪರಿಗಣಿಸಲ್ಪಡುತ್ತವೆ.

> *ಬೆಳೆಯುತ್ತಿರುವ ಹಾಗೂ ವಿಕಸನಗೊಳ್ಳುತ್ತಿರುವ ಯುವಜನರು ಈಗ ತಮ್ಮಲ್ಲಿನ ಶಾರೀರಿಕ ಆವರ್ತನೆ ಮತ್ತು ತಮ್ಮ ಮುಂದಿರುವ ವಾಸ್ತವಿಕ ವಯಸ್ಕ ಕಾರ್ಯಗಳನ್ನು ಹೇಗೆ ಎದುರಿಸಬೇಕು, ಪ್ರಮುಖವಾಗಿ ತಮ್ಮ ಬಗೆಗಿನ ಅನಿಸಿಕೆಯ ಜೊತೆ ಇತರರ ಕಣ್ಣಲ್ಲಿ ತಾವು ಹೇಗೆ ಕಾಣುತ್ತೇವೆ ಎನ್ನುವುದರ ಹೋಲಿಕೆ ಮತ್ತು ಮುಂಚೆ ಬೆಳೆಸಿಕೊಂಡ ಪಾತ್ರಗಳು ಹಾಗೂ ಕೌಶಲ್ಯಗಳ ಜೊತೆಗೆ ಇಂದಿನ ಔದ್ಯೋಗಿಕ ಮಾದರಿಗಳನ್ನು ಹೇಗೆ ಜೋಡಿಸುವುದು ಎನ್ನುವ ಪ್ರಶ್ನೆಗಳ ಬಗ್ಗೆ ಆತಂಕ ಹೊಂದಿರುತ್ತಾರೆ. ಅವರು ತಮ್ಮ ಹೊಸದೊಂದು ನಿರಂತರತೆ ಮತ್ತು ತದ್ವತ್ತತೆಯ ಅರಿವಿನ ಹುಡುಕಾಟದಲ್ಲಿ ಹಿಂದಿನ ವರ್ಷಗಳ ಅನೇಕ ಯುದ್ಧಗಳನ್ನು ಮರುಹೋರಾಟ ಮಾಡಬೇಕಾಗುತ್ತದೆ; ಈ ಹೋರಾಟದಲ್ಲಿ ತಮ್ಮ ಎದುರಾಳಿಗಳ ಪಾತ್ರಗಳನ್ನು ವಹಿಸಲು ಸಜ್ಜನರನ್ನು ಕಲ್ಪಿತವಾಗಿ ಆಯ್ಕೆ ಮಾಡಿಕೊಳ್ಳಬೇಕಾಗಬಹುದು. ಮತ್ತು ಅವರು ತಮ್ಮ ಅಂತಿಮ ವ್ಯಕ್ತಿತ್ವದ ಪೋಷಕರನ್ನಾಗಿ ಶಾಶ್ವತ ದೇವತಾ ಮೂರ್ತಿಗಳನ್ನು ಹಾಗೂ ಆದರ್ಶಪ್ರಾಯರನ್ನು ಪ್ರತಿಷ್ಠಾಪಿಸಿಕೊಳ್ಳಲು ಸನ್ನದ್ಧರಾಗಿರುತ್ತಾರೆ.*
>
> *ಹಿಂದೆ ತಿಳಿಸಿದಂತೆ, ಅಹಂ ಸ್ವಸ್ವರೂಪದ ರೀತಿಯಲ್ಲಿ ಈಗ ನಡೆಯುತ್ತಿರುವ ಸಮನ್ವಯತೆಯು ಬಾಲ್ಯದ ಗುರುತುಗಳ ಮೊತ್ತಕ್ಕಿಂತ ಹೆಚ್ಚಿನದು. ಇದು ಕಾಮಾಸಕ್ತಿಯಲ್ಲಿನ ವ್ಯತ್ಯಯಗಳು, ಪ್ರತಿಭೆಯಿಂದ ವಿಕಸಿಸಲ್ಪಟ್ಟ*

*ಯೋಗ್ಯತೆಗಳು, ಮತ್ತು ಸಾಮಾಜಿಕ ಪಾತ್ರಗಳಲ್ಲಿ ಒದಗಿಸಲ್ಪಟ್ಟ ಅವಕಾಶಗಳ ಜೊತೆಗೆ ಎಲ್ಲಾ ಗುರುತುಗಳನ್ನು ಏಕೀಕೃತಗೊಳಿಸಬಲ್ಲ ಅಹಂನ ಸಾಮರ್ಥ್ಯದ ಸಂಚಿತ ಅನುಭವ.*

*... ಹೆಚ್ಚಿನ ಸಂದರ್ಭಗಳಲ್ಲಿ, ಔದ್ಯೋಗಿಕ ಗುರುತಿನೊಂದರಲ್ಲಿ ನೆಲೆ ಪಡೆಯಲು ಇರುವ ಅಸಮರ್ಥ್ಯತೆ ಯುವಜನರನ್ನು ವ್ಯಕ್ತಿಗತವಾಗಿ ವ್ಯಾಕುಲಪಡಿಸುತ್ತದೆ. ತಮ್ಮನ್ನು ತಾವು ಒಗ್ಗೂಡಿಸಿಕೊಂಡಿರಲು, ದೃಗ್ಗೋಚರವಾದ ಸಂಪೂರ್ಣ ವ್ಯಕ್ತಿತ್ವದ ನಾಶದ ಮಟ್ಟಕ್ಕೆ ತಮ್ಮನ್ನು ತಾತ್ಕಾಲಿಕವಾಗಿ ಪ್ರತ್ಯೇಕ ಬಳಗಗಳು ಮತ್ತು ಗುಂಪುಗಳ ನಾಯಕರ ಜೊತೆ ತೀವ್ರವಾಗಿ ಗುರುತಿಸಿಕೊಳ್ಳುತ್ತಾರೆ. ಸಂಪೂರ್ಣವಾಗಿ ಅಥವಾ ಮೂಲಭೂತವಾಗಿ ಕಾಮದ ವಿಚಾರವಾಗಿರದಿದ್ದರೂ ಸಹ (ಶಿಷ್ಟಾಚಾರ ಅದನ್ನು ಬಯಸದ ಹೊರತಾಗಿ), ಇದು 'ಪ್ರೀತಿಯಲ್ಲಿ ಬೀಳುವ' ಹಂತವನ್ನು ಸೂಚಿಸುತ್ತದೆ. ಗಮನಾರ್ಹ ಮಟ್ಟದಲ್ಲಿ, ಹರೆಯದ ಪ್ರೀತಿಯು ಒಬ್ಬರ ಕುಂಠಿತ ಅಹಂನ ಪ್ರತೀಕವನ್ನು ಮತ್ತೊಬ್ಬರ ಮೇಲೆ ಮುಂಚಾಚುವ ಮತ್ತು ಈ ರೀತಿ ಪ್ರತಿಫಲಿಸುವುದನ್ನು ನೋಡುತ್ತ ಕ್ರಮೇಣ ಸ್ಪಷ್ಟಗೊಳ್ಳುವ ಮೂಲಕ ತನ್ನ ವ್ಯಕ್ತಿತ್ವದ ನಿರೂಪಣೆಯತ್ತ ಬರುವ ಒಂದು ಪ್ರಯತ್ನವಾಗಿದೆ. ಇದಕ್ಕಾಗಿಯೇ ಹೆಚ್ಚಿನ* ಹರೆಯದ *ಪ್ರೀತಿ ಸಂಭಾಷಣೆಯ ರೂಪದಲ್ಲಿರುತ್ತದೆ.* (ಎರಿಕ್ಸನ್, 1963, ಪುಟ 261-262)

ಎರಿಕ್ಸನ್ನನ ದೃಷ್ಟಿಕೋನದ ಮೂಲಕ ಯುವಜನರ ಜೀವನದ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನಲೆಗಳನ್ನು ಅರ್ಥ ಮಾಡಿಕೊಳ್ಳುವುದರ ನಿಹಿತಾರ್ಥಗಳು ಹಲವು. ಯುವಜನರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಲು ಮತ್ತು ಸಾಂಸ್ಕೃತಿಕವಾಗಿ ಸ್ವೀಕರಿಸಲ್ಪಡುವಂತಹ ನಂಬಿಕೆಗಳನ್ನು ಹುಟ್ಟಿಸುವ ರೀತಿಗಳನ್ನು ಬಯಸುತ್ತಾರೆ; ಉದ್ದೇಶವೊಂದನ್ನು ಹುಡುಕುವುದು ಮತ್ತು ಕಾಳಜಿಯುಕ್ತ ಸಂಬಂಧಗಳನ್ನು ಸ್ಥಾಪಿಸುವುದನ್ನು ಬಯಸುತ್ತಾರೆ. ಆದರೆ ಅವರ ಅಭಿಪ್ರಾಯಗಳಿಗೆ ಕಿವಿಗೊಡದಿದ್ದಾಗ, ಅಥವಾ ತಮ್ಮ ಅಭಿವ್ಯಕ್ತಿತ್ವಕ್ಕೆ ಅರ್ಹ ಸ್ಥಳಾವಕಾಶ ದೊರೆಯದಿದ್ದ ಪಕ್ಷದಲ್ಲಿ, ಅವರು ತಮ್ಮ ವ್ಯಕ್ತಿತ್ವದ ವಿಕಾಸಕ್ಕಾಗಿ ಭಿನ್ನ-ಸಂಸ್ಕೃತಿಗಳನ್ನು ಅರಸುವ ಅಥವಾ ಹುಟ್ಟುಹಾಕುವ ಪ್ರವೃತ್ತಿ ತೋರುತ್ತಾರೆ.

ಯುವಜನರ ಅಗತ್ಯತೆಗಳನ್ನು ಪೂರೈಸುವ ಪ್ರಮುಖ ಸಂಸ್ಥೆಗಳಾದ ಆಧುನಿಕ ಸಮಾಜದ ಶಾಲೆಗಳು, ಕಾಲೇಜುಗಳು, ಹಾಗೂ ಉನ್ನತ ಶೈಕ್ಷಣಿಕ ಸಂಸ್ಥೆಗಳ ರಚನಾಕ್ರಮಗಳು ತಮ್ಮ ವ್ಯಕ್ತಿತ್ವದ ವಿಕಾಸಕ್ಕಾಗಿ ಹುಡುಕಾಟ ನಡೆಸುತ್ತಿರುವ ಯುವಜನರ ಅಗತ್ಯತೆಗಳನ್ನು ಕಡೆಗಣಿಸಿದ್ದಾವೆ ಎಂದು ಭಾಸವಾಗುತ್ತದೆ. ಥಾಮಸ್ ಸರ್ಗಿಯೋವನ್ನಿ ತನ್ನ ಸೂಕ್ಷ್ಮದೃಷ್ಟಿಯುಳ್ಳ ನಿಬಂಧವೊಂದರಲ್ಲಿ ಶಾಲೆಗಳ ಸಂಸ್ಕೃತಿಯ ಬಗ್ಗೆ ಹೀಗೆ ಬರೆಯುತ್ತಾನೆ:

*ಯುವಜನರು ಗುಂಪುಗಳು ಹಾಗೂ ಅನೌಪಚಾರಿಕ ಪಂಗಡಗಳನ್ನು ಸೇರಲು ಬಯಸುವ ಒಂದು ಪ್ರಮುಖ ಕಾರಣವೆಂದರೆ ಈ ಗುಂಪು ಹಾಗೂ ಪಂಗಡಗಳು ಶಾಲೆಗಳು ಮತ್ತು ಸಮುದಾಯಗಳು ನೀಡಬೇಕಿದ್ದ ಒಂದು ರೀತಿಯ ಸಾಮಾಜಿಕ ಬಂಡವಾಳವನ್ನು ಒದಗಿಸುವುದರಿಂದ. ಆದರೆ ಸದಸ್ಯತ್ವ ಉಚಿತವಾಗಿ ಬರುವಂತದ್ದಲ್ಲ. ಗುಂಪಿನ ಸಂಪ್ರದಾಯಕ್ಕೆ ಒಗ್ಗಿಕೊಳ್ಳಬೇಕಾದುದು ಇದರ ಸದಸ್ಯತ್ವದ ಶುಲ್ಕ. ಇದರ ಅತಿ ಸಾಧಾರಣ ಫಲಿತಾಂಶವೆಂದರೆ ಶಾಲೆಗಳು ಮಾಡಲು ಪ್ರಯತ್ನಿಸುತ್ತಿರುವುದಕ್ಕೆ ವಿರುದ್ಧವಾಗಿ ಕೆಲಸ ಮಾಡುವಂತಹ ಅಸಂಪ್ರದಾಯಬದ್ಧ ನಡಾವಳಿಗಳನ್ನು ಬೆಳೆಸುವುದು.* (ಸರ್ಗಿಯೋವನ್ನಿ, 2001, ಪುಟ 78)

ಇವುಗಳ ಪರಿಣಾಮವಾಗಿ, ಸರ್ಗಿಯೋವನ್ನಿ ತಮ್ಮ ಸಾಮಾಜಿಕ (ವೈಯಕ್ತಿಕ ಹಾಗೂ ಗುಂಪು ವ್ಯಕ್ತಿತ್ವಗಳು) ಮತ್ತು ಶೈಕ್ಷಣಿಕ ಬಂಡವಾಳವನ್ನು ಬೆಳೆಸಿಕೊಳ್ಳಲು ಯುವಜನರಿಗೆ ದೊರೆಯುತ್ತಿರುವ ಅವಕಾಶಗಳ ಜೊತೆಗೆ ಶಾಲೆಗಳ ವೈಶಿಷ್ಟ್ಯಗಳ ವಿಕಾಸವನ್ನು (ಈತನ ವಾದದ ಪ್ರಮುಖ ಅಂಶ) ವಾಸ್ತವಿಕವಾಗಿ ಜೋಡಣೆ ಮಾಡಬೇಕು ಎಂದು ಸೂಚಿಸುತ್ತಾನೆ.

ಎರಿಕ್ಸನ್ ವಿಭಿನ್ನ ಸಾಮಾಜಿಕ-ಚಾರಿತ್ರಿಕ ಹಿನ್ನಲೆಗಳಲ್ಲಿ ಯುವಜನರ ಮೇಲೆ ಸಾಮಾಜಿಕ ಪ್ರಭಾವಗಳ ಪರಿಣಾಮ ಮತ್ತು ಹೊರಹೊಮ್ಮುತ್ತಿರುವ ಯುವಜನರ ವ್ಯಕ್ತಿತ್ವಗಳ ಮಧ್ಯೆ ಕಾರಣಾರ್ಥಕ ಸಂಬಂಧಗಳನ್ನು ಸ್ಥಾಪಿಸುವ ಅಗತ್ಯತೆಯ ಬಗ್ಗೆ ವಾದಿಸುತ್ತಾನೆ.

ಸಾಮಾಜಿಕ ಕಲಹಗಳು ಸತತವಾಗಿ ಮಾರ್ಪಾಡಾಗುತ್ತಿರುವ ಸಾಮಾಜಿಕ-ರಾಜಕೀಯ ಪರಿಪಾಠಗಳು ಮತ್ತು ನಿರೀಕ್ಷೆಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿರುವ ಭಾರತದಂತ ನವೀನವಾಗಿ ವಿಕಸನಗೊಳ್ಳುತ್ತಿರುವ ಸಮಾಜಗಳಲ್ಲಿ ತೀವ್ರವಾಗಿ ಸಂಕೀರ್ಣವಾಗುತ್ತಿವೆ. ಸಮಾಜದ ಒಂದು ತುದಿಯಲ್ಲಿ ದೀನ ಸಾಮಾಜಿಕ/ಆರ್ಥಿಕ ಹಿನ್ನಲೆಯುಳ್ಳ ಯುವಜನರಿದ್ದರೆ, ಮತ್ತೊಂದು ಕೊನೆಯಲ್ಲಿ ವ್ಯಾಪಕವಾಗಿ ಅಂತರಾಷ್ಟ್ರೀಯತೆಗೆ ಒಡ್ಡಿಕೊಂಡ ಸುಯೋಗಿ ಯುವಜನರಿದ್ದಾರೆ. ಆಕ್ರಮಣಶೀಲ ಮಾಧ್ಯಮ ಮತ್ತು ಸಾಮಾಜಿಕ ಜಾಲಬಂಧ ತಾಣಗಳು, ಕೊನೆಯಿಲ್ಲದ ತಂತ್ರಜ್ಞಾನ-ಪ್ರೇರೇಪಿತ ಸಾಧ್ಯತೆಗಳು, ಉನ್ನತ ಶಿಕ್ಷಣಕ್ಕಿರುವ ಸೀಮಿತ ಅವಕಾಶಗಳು, ಸಾಮಾಜಿಕ ಮತ್ತು ರಾಜಕೀಯ ಸಿನಿಕತೆಗಳು, ನಿರಾಶಾದಾಯಕ ಆಡಳಿತಾತ್ಮಕತೆ, ಸಾಂಪ್ರದಾಯಿಕ ಪದ್ಧತಿಗಳಿಗೆ ಜೋತುಬೀಳಲು ಕೌಟುಂಬಿಕ ಒತ್ತಡ, ಮತ್ತು ವೈಯಕ್ತಿಕ ಹಾಗೂ ಸಾಮೂಹಿಕ ವಿಕಾಸದ ಸಮಸ್ಯೆಗಳ ಪರಿಹಾರಕ್ಕಿರುವ ಪರಿಮಿತ ಅವಕಾಶಗಳು ಎಲ್ಲಾ ಯುವಜನರ ಜೀವನಗಳನ್ನೂ ಪ್ರಭಾವಿಸುತ್ತವೆ.

ಇದಕ್ಕೆ ಸೇರಿಕೊಂಡಂತೆ, ನಮ್ಮ ಶೈಕ್ಷಣಿಕ ರಚನಾಕ್ರಮಗಳು ಮತ್ತು ಮೌಲ್ಯಮಾಪನ ಪದ್ಧತಿಗಳು ಕಠಿಣ, ವಿಮರ್ಶನಾತ್ಮಕ, ಹಾಗೂ ಅಸಂವೇದನಾಶೀಲವಾಗಿವೆ. ಪರಿಣಾಮವಾಗಿ, ಉಳಿವಿಗಾಗಿ, ತನ್ನತನದ ಸ್ವೀಕಾರಕ್ಕಾಗಿ, ಹಾಗೂ ಪಾತ್ರ-ಗೊಂದಲವನ್ನು ಬಗೆಹರಿಸಿಕೊಳ್ಳಲು ಅವಕಾಶವನ್ನು ಹುಡುಕಿಕೊಳ್ಳುವುದಕ್ಕಾಗಿನ ಹೋರಾಟ ತೀವ್ರವಾದ ಸವಾಲು ಮತ್ತು ಬೆದರಿಕೆಗೆ ಒಳಪಡುತ್ತದೆ. ಹಾಗಾಗಿ, ಸಾಂಪ್ರದಾಯಿಕ ಶಿಕ್ಷಣದ ರಚನಾಕ್ರಮಗಳ ವಿಕಾಸದಲ್ಲಿ ಶೈಕ್ಷಣಿಕ ಸಂಸ್ಥೆಗಳ ಪಾತ್ರ ಈ ಹಿಂದೆ ಭಾವಿಸಿದ್ದಕ್ಕಿಂತ ಹೆಚ್ಚಿನ ಪ್ರಮಾಣದ್ದಾಗಿದೆ.

ಇತ್ತೀಚಿನವರೆಗೂ ಕುಟುಂಬ ಮತ್ತು ಶೈಕ್ಷಣಿಕ ಸಂಸ್ಥೆಗಳ ಮೇಲೆ ನಿರ್ಭರವಾಗಿದ್ದ ವ್ಯಕ್ತಿಯೊಬ್ಬನ ವ್ಯಕ್ತಿತ್ವ ವಿಕಾಸ, ಈಗ ಸಮಾಜವನ್ನು ಪ್ರಭಾವಿಸುವ ಶಕ್ತಿಯುಳ್ಳ ವ್ಯಕ್ತಿ ಎಂದು ಸ್ಥಿರಪಡಿಸಲು, ಸಮಾಜದಲ್ಲಿ ತನ್ನ ಸ್ಥಾನವನ್ನು ನಿರ್ಣಯಿಸಿಕೊಳ್ಳಲು ಯುವ ವ್ಯಕ್ತಿಯು ಮಾಡುತ್ತಿರುವ ಆಯ್ಕೆಗಳಿಂದ ರೂಪಿತವಾಗುತ್ತಿದೆ. ಹಿಂದಿನ ಹಂತಗಳಲ್ಲಿ ಗಳಿಸಿಕೊಂಡ ಶಕ್ತಿಗಳು ಯುವಜನರು ಮುಂದಿನ ಹಂತಗಳಲ್ಲಿ ಮಾಡುವ ಆಯ್ಕೆಗಳ ಜತೆಗೂಡಿ ಉನ್ನತ ಶಿಕ್ಷಣ, ವೃತ್ತಿ ಹಾಗೂ ಉಪಯೋಗಾರ್ಹತೆ, ಮತ್ತು ಪ್ರಮುಖರಾದ ಇತರರೊಡನೆ ಬೆರೆಯಲು ಇವರ ಸಿದ್ಧತೆಗೆ ಮುಂದಿನ ಹಾದಿಗಳನ್ನು ನಿರ್ಧರಿಸುತ್ತವೆ. ಈ ನಿಟ್ಟಿನಲ್ಲಿ, ವ್ಯಕ್ತಿತ್ವ ವಿಕಾಸವು ಭವಿಷ್ಯದ ಸ್ವತಂತ್ರ ಕುಟುಂಬದ ಸಂಭಾವ್ಯ ಸದಸ್ಯರಾಗಿ, ತಮ್ಮ ಅವಕಾಶಗಳನ್ನು ತಾವೇ ಸೃಷ್ಟಿಸಿಕೊಳ್ಳುವ ಅವರ ಕ್ರಿಯೆಗಳಿಂದ ವ್ಯಾಪಿಸಲ್ಪಡುತ್ತದೆ.

### *ಸಾಮೀಪ್ಯಕ್ಕೆ ಪ್ರತಿಯಾಗಿ ಒಂಟಿತನ: ಎಳೆಯ ಪ್ರೌಢಾವಸ್ಥೆ (18/22 – 40 ವರ್ಷಗಳು)*

ತೀವ್ರಗತಿಯಲ್ಲಿ ವಿಸ್ತರಿಸುತ್ತಿರುವ ಈ ಸಾಮಾಜಿಕ ಪ್ರಪಂಚದಲ್ಲಿ, ಹಿಂದಿನ ವರ್ಷಗಳ ಶಕ್ತಿಗಳು ಮತ್ತು ದುರ್ಬಲತೆಗಳನ್ನು ಹೊಂದಿದ ಯುವ ವಯಸ್ಕರು ಈಗ ಒಡನಾಡಿ ಗುಂಪುಗಳು ಮತ್ತು ಹೊರಹೊಮ್ಮುತ್ತಿರುವ ಕಾಮದ ಅಗತ್ಯತೆಗಳ ಹಿನ್ನಲೆಯಲ್ಲಿ ಸ್ವಯಂ-ಪ್ರಮಾಣೀಕರಣಕ್ಕಾಗಿ ಹೊಸ ಅವಕಾಶಗಳ ಜೊತೆ ಮುಖಾಮುಖಿಯಾಗುತ್ತಾರೆ.

*ತನ್ನತನದ ಹುಡುಕಾಟ ಮತ್ತು ಸಮರ್ಥನೆಯಿಂದ ಹೊರಹೊಮ್ಮುತ್ತಿರುವ ಎಳೆಯ ವಯಸ್ಕ ತನ್ನ ವ್ಯಕ್ತಿತ್ವವನ್ನು ಇತರರ ವ್ಯಕ್ತಿತ್ವದೊಂದಿಗೆ ಒಂದುಗೂಡಿಸಿಕೊಳ್ಳಲು ಕಾತುರ ಮತ್ತು ಸನ್ನದ್ಧನಾಗಿರುತ್ತಾನೆ. ಆತ*

*ಗಮನಾರ್ಹ ತ್ಯಾಗಗಳು ಮತ್ತು ಹೊಂದಾಣಿಕೆಗಳಿಗೆ ಒಳಪಡಬೇಕಾಗಿದ್ದರೂ ಸಹ, ವಾಸ್ತವಿಕ ಸದಸ್ಯತ್ವ ಹಾಗೂ ಪಾಲುದಾರಿಕೆಗಳಿಗೆ ತನ್ನನ್ನು ಬದ್ಧನಾಗಿಸಿಕೊಳ್ಳುವ ಮತ್ತು ಅಂತಹ ಬದ್ಧತೆಗಳಿಗೆ ವಿಧೇಯನಾಗಿರಲು ನೈತಿಕ ಶಕ್ತಿ ಬೆಳೆಸಿಕೊಳ್ಳುವ ಸಾಮರ್ಥ್ಯದಿಂದ ಲೈಂಗಿಕ ಸಂಬಂಧಗಳಿಗೆ ತಯಾರಿರುತ್ತಾನೆ.* (ಎರಿಕ್ಸನ್, 1963, ಪುಟ 263)

ಮಾನವ ವಿಕಾಸದ ಅಂತರ್ಗತ ಹಂತವೆಂದು ಪರಿಗಣಿಸಲ್ಪಟ್ಟ ತನ್ನ ಮನಸ್ಸು, ಶರೀರ, ಹಾಗೂ ಆತ್ಮವನ್ನು ಹಂಚಿಕೊಳ್ಳುವ ಸಾಧ್ಯತೆಯುಳ್ಳ ವಯಸ್ಕನ ಸಾಮರ್ಥ್ಯವು ಹಿಂದಿನ ವರ್ಷಗಳಲ್ಲಿ ಬೆಳೆಸಿಕೊಂಡ ಅಹಂ-ಆಧಾರಿತ ಶಕ್ತಿಗಳಿಂದ ಹೊರಹೊಮ್ಮುತ್ತದೆ ಮತ್ತು ಇದು ಕೆಲಸ, ಸಂತಾನೋತ್ಪತ್ತಿ, ಹಾಗೂ ವಿನೋದಗಳ ಪಾಲುದಾರಿಕೆಗಳ ವಿಕಾಸಕ್ಕೆ ಎಡೆ ಮಾಡಿಕೊಡುತ್ತದೆ. ಈ ಹಂತ ಮತ್ತೊಬ್ಬ ವ್ಯಕ್ತಿಯೊಡನೆಯ ಪ್ರೀತಿಯ ಪ್ರೌಢ ಗ್ರಹಿಕೆಯಾಗಿ ಹೊರಹೊಮ್ಮುತ್ತದೆ; ಇನ್ನೊಬ್ಬರಿಗೆ ಬೆದರಿಕೆ ಒಡ್ಡದ ಅಥವಾ ಅವರ ಭಯವಿಲ್ಲದ ಹೊರಹೊಮ್ಮುತ್ತಿರುವ ವಯಸ್ಕ ವ್ಯಕ್ತಿತ್ವವನ್ನು ಹುಡುಕಿಕೊಳ್ಳುವ ಸಾಮರ್ಥ್ಯವು, ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವ ಸಾಮರ್ಥ್ಯದ ಜೊತೆ ಸರಿಸಾಟಿಯಾಗುತ್ತದೆ.

*ಶಿಶುವಿನ ನಿರಾತಂಕ ಹಾಗೂ ಉದ್ವೇಗದ ಬಾಂಧವ್ಯದಿಂದ ಹಿಡಿದು ಪ್ರಾಯಸ್ಥರ ಭಾವೋದ್ರಿಕ್ತ ಹಾಗೂ ಉತ್ಕಟ ವ್ಯಾಮೋಹಗಳವರೆಗೆ ಬಹಳಷ್ಟು ರೂಪದ ಪ್ರೀತಿಗಳಿವೆ; ಆದರೆ ವಿಕಾಸಾತ್ಮಕ ಮತ್ತು ತಲೆಮಾರಿನ ಪ್ರಜ್ಞೆಯಲ್ಲಿ ಪ್ರೀತಿ ಎಂದರೆ ಜೀವನದ ತಾರುಣ್ಯಪೂರ್ವ ಹಂತದಾದ್ಯಂತ ಪಡೆದ ಪ್ರೀತಿಯನ್ನು ವಯಸ್ಕ ಜೀವನದಲ್ಲಿ ಇನ್ನೊಬ್ಬರಿಗೆ ಮಾಡುವ ಕಾಳಜಿಯನ್ನಾಗಿ ಪರಿವರ್ತಿಸುವುದು ಎಂದು ನಾನು ನಂಬಿದ್ದೇನೆ.*

*ಲೈಂಗಿಕತೆಗೆ ಹೊರತಾಗಿ ಮತ್ತು ಅದನ್ನು ಮೀರಿ ಪ್ರೀತಿಯನ್ನು ಆರಿಸಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದು ಮಾನವನ ಒಂದು ವಿಕಾಸಾತ್ಮಕ ಅಂಶವಾಗಿರಬಹುದು: ಇದು ಇನ್ನೊಬ್ಬರಲ್ಲಿ ತನ್ನನ್ನು ಹುಡುಕಿಕೊಳ್ಳುವ ಅನುಭವದ ಮೂಲಕ ಪರಸ್ಪರ ಪರಿಶೀಲನೆ ಮಾಡಿಕೊಳ್ಳುವ ಸಲುವಾಗಿ ಸ್ವವ್ಯಕ್ತಿತ್ವವುಳ್ಳ ಸಂಗಾತಿಗಳು ಮತ್ತು ಜೊತೆಗಾರರ ಪರಸ್ಪರಾವಲಂಬನೆ ಎಂದು ನಾನು ಅಂದುಕೊಂಡಿದ್ದೇನೆ. ವ್ಯಕ್ತಿತ್ವವು ತನ್ನೊಡನೆ ತಾನು ಅದೃಷ್ಟ ಪರೀಕ್ಷೆ ಮಾಡಿಕೊಳ್ಳುವ ಅವಕಾಶವಿರುವ ಕಡೆ ತನ್ನನ್ನು ತಾನು ಬಲಿಷ್ಟ ಎಂದು ಸಾಬೀತು ಪಡಿಸುತ್ತದೆ ಎಂದು ನಾನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಇದೇ ಕಾರಣಕ್ಕಾಗಿ, ಪ್ರೀತಿ ತನ್ನ ನೈಜ್ಯ ರೂಪದಲ್ಲಿ ವ್ಯಕ್ತಿತ್ವ ಮತ್ತು ತತ್ವನಿಷ್ಠೆಗಳೆರಡರ ಬಗ್ಗೆಯೂ ಪೂರ್ವಕಲ್ಪನೆಗಳನ್ನು ಇಟ್ಟುಕೊಂಡಿರುತ್ತದೆ. ವಿವಿಧ ಸದ್ಗುಣಗಳ ರಚನೆಯಲ್ಲಿ ವಿಭಿನ್ನ ರೂಪಗಳ ಪ್ರೀತಿ ಕೆಲಸ ಮಾಡುತ್ತಿರುವುದನ್ನು ತೋರಿಸಿಕೊಡಬಹುದಾದರೂ ಸಹ, ಪರಸ್ಪರ ಬದ್ಧತೆಯಲ್ಲಿ ಪ್ರೀತಿಯ ಲಂಗರನ್ನು ಇಳಿಸಬಲ್ಲ ಹರೆಯದ ಕ್ರಮಾಂಕನ ಮಾತ್ರ ಆ ಆಪ್ತತೆ, ಒಂದುಗೂಡಿದ ಅರ್ಪಣೆಯ ಸ್ವಾರ್ಥರಹಿತತೆಯ ವಿಕಾಸಕ್ಕೆ ಅನುವು ಮಾಡಿಕೊಡುತ್ತದೆ ಎನ್ನುವುದನ್ನು ಅರಿತುಕೊಳ್ಳುವುದು ಬಹುಮುಖ್ಯ. ಅನ್ಯೋನ್ಯ ಪ್ರೀತಿಯು ಹೀಗೆ ಆ ಗ್ರಹಿಕೆಗೆ ನಿಲುಕದಿರುವ ಆದಾಗ್ಯೂ ಎಲ್ಲೆಡೆ ಪಸರಿಸಿರುವ ಮನೋಸಾಮಾಜಿಕ ವಿಕಸನದಲ್ಲಿನ ಶಕ್ತಿಯ ರಕ್ಷಕನಾಗಿದೆ: ಹಂಚಿಕೊಂಡ ನಮೂನೆಗಳ ಬದುಕುವಿಕೆಯಲ್ಲಿ ಗಾಢನಂಬಿಕೆಯನ್ನು ನೀಡುವ ಮತ್ತು ಬೇಡುವ ಸಾಂಸ್ಕೃತಿಕ ಹಾಗೂ ವೈಯಕ್ತಿಕ ಶೈಲಿಯ ಸಾಮರ್ಥ್ಯವು ಜಂಟಿ ಅನ್ಯೋನ್ಯತೆಯಲ್ಲಿ ವೈಯಕ್ತಿಕ ವ್ಯಕ್ತಿತ್ವವನ್ನು ಖಾತ್ರಿಗೊಳಿಸುತ್ತದೆ, ಮತ್ತು ಸಂತಾನೋತ್ಪತ್ತಿ ಹಾಗೂ ಉತ್ಪಾದನೆಯ ಸದಸ್ಯತ್ವವನ್ನು 'ಬದುಕುವ ರೀತಿ'ಯೊಡನೆ ಬೆಸೆಯುತ್ತದೆ.* (ಎರಿಕ್ಸನ್, 1963, ಪುಟ 127-128)

ಅನ್ಯೋನ್ಯ, ಪ್ರಬುದ್ಧ ಪ್ರೀತಿಯನ್ನು ಅನುಭವಿಸುವ ಸಾಧ್ಯತೆಯು ಎಳೆಯ ವಯಸ್ಕನನ್ನು ಹಿಂದಿನ ವಿಕಾಸದ ಹಂತಗಳ ಶಕ್ತಿ ಮತ್ತು ಕೊರತೆಗಳನ್ನು ಸಂಘಟಿಸಲು ಅನುವು ಮಾಡಿಕೊಡುತ್ತದೆ. ವಿಕಾಸ ಸುಗಮವಾಗಿದ್ದ ಮತ್ತು ಪರಿಸ್ಥಿತಿಗಳಿಂದ ಕಡಿಮೆ ತೊಂದರೆಗೊಳಲ್ಪಟ್ಟ ಸಂದರ್ಭಗಳಲ್ಲಿ, ಮತ್ತು ತನ್ನ ಹಾಗೂ

ಸಮಾಜದ ಕಡೆಗೆ ಹೊರಹೊಮ್ಮಿದ ಜವಾಬ್ದಾರಿಯ ಅರಿವಿನಿಂದ ಮಧ್ಯಸ್ಥಿಕೆ ವಹಿಸಲ್ಪಟ್ಟಲ್ಲಿ, ದೀರ್ಘಕಾಲ ಸಂಬಂಧಗಳನ್ನು ಉಳಿಸಿಕೊಳ್ಳುವ ಖಚಿತ ಸಾಧ್ಯತೆ ಇರುತ್ತದೆ.

ವಯಸ್ಕರ ಚಿಕಿತ್ಸೆಯಲ್ಲಿ ತೊಡಗಿರುವಾಗ ಅವರ ವೈಯಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ನನಸಾಗದ ಮತ್ತು ನೆರವೇರದ ತಾರುಣ್ಯಪೂರ್ವ ಹಾಗೂ ಹರೆಯದ ಸಂಘರ್ಷಗಳು ಕಾಣಿಸುವುದು ಅಚ್ಚರಿಯಲ್ಲ. ಎರಿಕ್ಸನ್ನನ ಪ್ರಕಾರ, ನೆರವೇರಲ್ಪಟ್ಟ ಸಂಬಂಧಗಳು ಬಾಲ್ಯ ಹಾಗೂ ಎಳೆಯ ವಯಸ್ಕತೆಯುದ್ದಕ್ಕೂ ಸೂಕ್ಷ್ಮತರವಾಗಿ ಪೋಷಿಸಿಕೊಂಡು ಬಂದ ಶಕ್ತಿ ಹಾಗೂ ಸದ್ಗುಣಗಳ ಪರಿವಿಕಾಸದ (epigenetic development) ಮೂಲಕ ಹೊರಹೊಮ್ಮುತ್ತವೆ.

ತನ್ನನ್ನು ಬೇರೆಯವವರ ಜೊತೆ ಹಂಚಿಕೊಳ್ಳಲು ಹೊರಹೊಮ್ಮುತ್ತಿರುವ ಸಾಮರ್ಥ್ಯದಿಂದ ವಯಸ್ಕನು ಈಗ ಸಮಗ್ರತೆಯ ದೃಷ್ಟಿಯಿಂದ ಮಾನವ ವಿಕಾಸದ ಮುಂದಿನ ಹಂತದ ದೃಢವಾದ ಪ್ರಾರಂಭವನ್ನು ದಾಖಲಿಸಲು, ಕಾಳಜಿ ಮತ್ತು ಕೊಡುವಿಕೆಯ ನೈಜ್ಯ ಅರ್ಥವನ್ನು ಕಲಿಯಲು ತಯಾರಾಗುತ್ತಾನೆ.

### *ಉತ್ಪಾದಕತೆಗೆ ಪ್ರತಿಯಾಗಿ ನಿಷ್ಕ್ರಿಯತೆ: ಪ್ರೌಢಾವಸ್ಥೆ (30 – 65 ವರ್ಷಗಳು)*

> *ಉತ್ಪಾದಕತೆಯು ಮಾನವನನ್ನು ಕಲಿಸುವ ಹಾಗೂ ಸಂಘಟಿಸುವ ಮತ್ತು ಕಲಿಯುವ ಪ್ರಾಣಿಯನ್ನಾಗಿಯೂ ಸಹ ಮಾಡಿರುವ ವಿಕಾಸಾತ್ಮಕ ಬೆಳವಣಿಗೆಯನ್ನು ಒಳಗೊಂಡಿರುತ್ತದೆ. ವಯಸ್ಕರ ಮೇಲಿನ ಮಕ್ಕಳ ಅವಲಂಬನೆಯನ್ನು ನಾಟಕೀಯಗೊಳಿಸುವ ರೂಢಿಗತ ಸಮರ್ಥನೆ ಬಹಳಷ್ಟು ಬಾರಿ ಎಳೆಯರ ಮೇಲಿನ ಹಳೆಯ ತಲೆಮಾರಿನ ಅವಲಂಬನೆಯ ಬಗ್ಗೆ ಕುರುಡಾಗುವಂತೆ ಮಾಡುತ್ತದೆ. ಪ್ರಬುದ್ಧ ಮನುಷ್ಯ ತಾನು ಅವಶ್ಯಕನಾಗಿರುವುದನ್ನು ಬಯಸುತ್ತಾನೆ, ಮತ್ತು ಪ್ರಬುದ್ಧತೆಯು ಈಗಾಗಲೇ ಬೆಳೆಸಲ್ಪಟ್ಟ ಹಾಗೂ ಕಾಳಜಿ ವಹಿಸಬೇಕಾದವುಗಳಿಂದ ನಿರ್ದೇಶನ ಹಾಗೂ ಪ್ರೋತ್ಸಾಹವನ್ನು ಬೇಡುತ್ತದೆ. ಹೀಗೆ ಉತ್ಪಾದಕತೆಯ ಪ್ರಮುಖ ಕಾಳಜಿ ಮುಂದಿನ ಪೀಳಿಗೆಯನ್ನು ಸ್ಥಾಪಿಸುವುದು ಮತ್ತು ಮಾರ್ಗದರ್ಶಿಸುವುದಾಗಿದೆ. ಆದಾಗ್ಯೂ, ದುರಾದೃಷ್ಟವಶಾತ್ ಅಥವಾ ಬೇರೊಂದು ದಿಕ್ಕಿನಲ್ಲಿ ವಿಶೇಷ ಅಥವಾ ನೈಜ ಪ್ರತಿಭೆಗಳನ್ನು ಹೊಂದಿದ ಕಾರಣಕ್ಕಾಗಿ, ತಮ್ಮ ಸ್ವಂತ ಮಕ್ಕಳನ್ನು ಈ ಉತ್ಪಾದಕತೆಗೆ ತೊಡಗಿಸದ ವ್ಯಕ್ತಿಗಳೂ ಇದ್ದಾರೆ.* (ಎರಿಕ್ಸನ್, 1963, ಪುಟ 266–267)

ಉತ್ಪಾದಕತೆಯು ಮಾನವಕುಲಕ್ಕೆ ಮಹತ್ವಪೂರ್ಣವಾಗಿರುವುದು ಇದು ವಿಕಾಸಾತ್ಮಕ ಬಿಕ್ಕಟ್ಟುಗಳ ಧನಾತ್ಮಕ ಸಂಯೋಜನೆಗಳ ಅನಿವಾರ್ಯ ಫಲಿತಾಂಶ ಎನ್ನುವ ಕಾರಣಕ್ಕಾಗಿ ಅಷ್ಟೇ ಅಲ್ಲದೆ, ಇದು ತನ್ನದೇ ಜೀವನ ಮತ್ತು ತನ್ನ ಜನಾಂಗದ ಸಮಗ್ರ ಸ್ವ-ಪರಿಶೀಲನೆಗಾಗಿ ವ್ಯಕ್ತಿಯೊಬ್ಬನ ಹುಡುಕುವಿಕೆಗೆ ಆಧಾರ ಎನ್ನುವ ಕಾರಣಕ್ಕಾಗಿಯೂ ಸಹ. ಭರವಸೆ, ನಂಬಿಕೆ, ಹಾಗೂ ಭದ್ರತೆಯ ಭಾವಗಳು ಪ್ರಾರಂಭದ ಹಂತಗಳಲ್ಲಿ ವಿಕಸಿಸುವ ರೀತಿಯಲ್ಲಿ, ಉತ್ಪಾದಕ ವ್ಯಕ್ತಿತ್ವವು ತನ್ನ ಸಮಯವನ್ನು ಹಂಚುವ ಮೂಲಕ ಮತ್ತು ತನ್ನ ಸೂಕ್ಷ್ಮತರ ರೀತಿಗಳಿಂದ ಅರ್ಥಪೂರ್ಣ ಸಾಮಾಜಿಕ ವಿನಿಮಯವನ್ನು ಸುಗಮಗೊಳಿಸುವ ಮೂಲಕ ಉದ್ಯೋಗ, ಜೀವನ, ಯೋಜನೆಗಳು, ಹಾಗೂ ಸೃಷ್ಟಿಗಳ ಬಗೆಗಿನ ಪ್ರೀತಿಯ ಅರಿವನ್ನು ರವಾನಿಸುತ್ತದೆ. ಉತ್ಪಾದಕ ವ್ಯಕ್ತಿತ್ವವು ಚಿಂತಕರು, ಕೆಲಸಗಾರರು, ಹಾಗೂ ಸಂಭಾವ್ಯ ಪೋಷಕ ಪೀಳಿಗೆಗಳ ನಡುವಿನ ಕೊಂಡಿಯಾಗಿದೆ. ಈ ವ್ಯಕ್ತಿತ್ವವು ನೀಡುವ ಅತ್ಯಗತ್ಯ ಜೋಡಣೆಯ ಆಧಾರದ ಮೂಲಕವೇ ಮುಂದಿನ ಪೀಳಿಗೆಗಳು ತಮ್ಮದೇ ಆದ ಉತ್ಪಾದಕ ವ್ಯಕ್ತಿತ್ವಗಳನ್ನು ಹುಡುಕಿಕೊಳ್ಳುತ್ತವೆ ಮತ್ತು ಗುರುತಿಸಿಕೊಳ್ಳುತ್ತವೆ.

ತಮ್ಮದೇ ಸಂತಾನವನ್ನು ಹೊಂದಿರದ ಜನರು ಅಂತರ್-ಪೀಳಿಗೆಯ ಬಂಧನ ಮತ್ತು ಮಾನವನ ಮಹತ್ವಾಕಾಂಕ್ಷೆಗಳು, ಭಾವನೆಗಳು, ಹಾಗೂ ಸಾಂಸ್ಕೃತಿಕ ಅಸ್ತಿತ್ವದ ರೀತಿಗಳ ವರ್ಗಾವಣೆಯನ್ನು ಸಾಧ್ಯವಾಗಿಸುವ ಸಾಂಘಿಕ ವ್ಯವಸ್ಥೆಗಳ ಮೂಲಕ 'ಕಾಳಜಿ' ತೋರುವುದನ್ನು ಆರಿಸಿಕೊಳ್ಳಬಹುದು. ಈ ಅರಿವಿನಲ್ಲಿ, ತನ್ನದೇ ಸಂತತಿಯಾಗಿರಲಿ ಅಥವಾ ಬೇರೆಯವರಾಗಿರಲಿ, 'ಉತ್ಪಾದಕತೆ'ಯು ಪ್ರಬುದ್ಧ ವಯಸ್ಕನೊಬ್ಬ ಕೊಡುವ, ಕಾಳಜಿ ತೋರುವ, ಹಾಗೂ ಎಳೆಯರ ವಿಕಾಸವನ್ನು ಪೋಷಿಸುವಲ್ಲಿ ಸಾರ್ಥಕತೆ ಕಾಣುವ ಹಂತ ಎಂದು ಎರಿಕ್ಸನ್ ಭಾವಿಸುತ್ತಾನೆ. ಉತ್ಪಾದಕತೆಯು ಜವಾಬ್ದಾರಿಯುತ ಪೋಷಕತ್ವದ ಪಾತ್ರವನ್ನು ಮೀರಿ ವಿಸ್ತರಿಸುತ್ತದೆ ಮತ್ತು ತನ್ನನ್ನು ಉತ್ಪಾದಕನೆಂದು ಭಾವಿಸುವ ವ್ಯಕ್ತಿ ತಮ್ಮ ಕುಟುಂಬದ ಪರಿಧಿಯಿಂದ ಹೊರಗಿರುವ ಎಳೆಯರ ಮೇಲೂ ತನ್ನ ಸಹಾಯಹಸ್ತವನ್ನು ಚಾಚುತ್ತಾನೆ. ಈ ತೊಡಗಿಸಿಕೊಳ್ಳುವಿಕೆಯು ಸಮುದಾಯದ ಕೆಲಸ, ಕ್ರೀಡೆ, ಪರಿಸರ ಕಾಳಜಿ, ಪರಿಹಾರ ಬೆಂಬಲ, ಹಾಗೂ ಸಾಮಾಜಿಕ ಕಾರ್ಯಗಳಿಗಾಗಿ ಇರುವ ಸಕಾರಾತ್ಮಕ ಗುಂಪುಗಳ ರೀತಿಯಲ್ಲಿ ಇರಬಹುದು.

ತನ್ನ ವಿಕಾಸಾತ್ಮಕ ಸದ್ಗುಣಗಳನ್ನು ಸ್ವ-ಪರಿಶೀಲನೆ ಮತ್ತು ಸ್ವ-ಸಂಕಲ್ಪಗಳ ಪ್ರಾಮಾಣಿಕ ಪ್ರಕ್ರಿಯೆಗಳ ಮೂಲಕ ಸಮನ್ವಯಗೊಳಿಸಿಕೊಳ್ಳದ ವ್ಯಕ್ತಿ ನೈತಿಕ ಹಾಗೂ ಆಂತರಿಕ ನಿಷ್ಕ್ರಿಯತೆ ಮತ್ತು ಒಂಟಿತನದ ಕಟು ಕ್ಷಣಗಳನ್ನು ಅನುಭವಿಸಬಹುದು. ಕಾಳಜಿ ಮತ್ತು ಕೊಡಬಲ್ಲ ರೀತಿಯ ಜೀವನವನ್ನು ಪಡೆದುಕೊಳ್ಳುವ ಸಾಮರ್ಥ್ಯದ ಸ್ಥಳದಲ್ಲಿ, ಇಡೀ ಸಮಾಜದಿಂದ ಪ್ರತ್ಯೇಕತೆ ಅನುಭವಿಸುವಂತಹ ಬಲವಾದ ಭಾವ ವ್ಯಕ್ತಿಯ ಆಸಕ್ತಿಗಳು ಮತ್ತು ಪ್ರಾಪಂಚಿಕ ನೋಟವನ್ನು ಪ್ರಭಾವಿಸುತ್ತದೆ.

### *ಐಕ್ಯತೆಗೆ ಪ್ರತಿಯಾಗಿ ಹತಾಶೆ: ಮುಪ್ಪು (55 – 60+ ವರ್ಷಗಳು)*

ಎರಿಕ್ಸನ್ ವ್ಯಕ್ತಿ ಮತ್ತು ಸಮಾಜದ ನಡುವಿನ ಅವಳಿ ಸಂಯೋಜನೆ ತನ್ನ ಸಿದ್ಧಾಂತ ಮತ್ತು ಕೆಲಸಗಳ ಪ್ರಮುಖ ಅಂಶ ಎಂದು ಭಾವಿಸಿದ್ದ. ಆತನ ದೃಷ್ಟಿಯಲ್ಲಿ, ಜೀವನದ ಪ್ರತಿ ಹಂತದ ಮೂಲಭೂತ ಸದ್ಗುಣಗಳ ಲಾಭಗಳನ್ನು ಪಡೆದಿರುವಂತಹ ಪ್ರಬುದ್ಧ ವಯಸ್ಕನು ಅದನ್ನು ಉತ್ಪಾದಕತೆಯ ಪ್ರಜ್ಞೆಯ ಮೂಲಕ (ಈ ಹಿಂದಿನ ಹಂತದಂತೆ) ಮತ್ತು ಪರ್ಯಾಲೋಚನೆ, ಸಂತೃಪ್ತಿಯ ನಿರಾಳ ಪ್ರಜ್ಞೆ, ಹಾಗೂ ಸಂತಸಗಳ (ಈ ಹಂತದಂತೆ) ಮೂಲಕ ಸಮಾಜಕ್ಕೆ ಹಿಂದಿರುಗಿಸಲು ಬಯಸುತ್ತಾನೆ.

ಜೀವನದ ಹಾದಿಯನ್ನು ಒಪ್ಪಿಕೊಳ್ಳಬೇಕಾದ ಅನಿವಾರ್ಯತೆ, ಜೊತೆಯಲ್ಲಿ ಅಸ್ತಿತ್ವದ ಮಾನಸಿಕ ಶ್ರೇಣಿಯ ಸಂಚಿತ ವಿಕಾಸದ ಅಹಂನ ಪ್ರಜ್ಞೆ, ಮಾನವನ ವಿಕಾಸದ ಕೊನೆಯ ಹಂತವಾದ ಮುಪ್ಪಿಗೆ ಎಡೆ ಮಾಡಿಕೊಡುತ್ತದೆ.

> *ತನ್ನದೇ ಆದ ರೀತಿಗಳಲ್ಲಿ ವಸ್ತುಗಳು ಹಾಗೂ ಮನುಷ್ಯರ ಕಾಳಜಿ ತೆಗೆದುಕೊಂಡಿರುವಂತಹ ಮತ್ತು ಅಸ್ತಿತ್ವಕ್ಕೆ ಅಂಟಿಕೊಂಡು ಬರುವಂತಹ ಗೆಲುವು ಹಾಗೂ ನಿರಾಶೆಗಳಿಗೆ ಹೊಂದಿಕೊಂಡಿರುವಂತಹ, ಮತ್ತೊಬ್ಬರ ಜನಕ ಅಥವಾ ಉತ್ಪನ್ನ ಮತ್ತು ಯೋಜನೆಗಳ ಉತ್ಪಾದಕನಲ್ಲಿ ಮಾತ್ರ - ಅವನಲ್ಲಿ ಮಾತ್ರ ಈ ಏಳು ಹಂತಗಳ ಫಲ ಕ್ರಮೇಣ ಪಕ್ವವಾಗಬಹುದು. ಇದಕ್ಕೆ ಅಹಂ ಸಮಗ್ರತೆ ಎನ್ನುವುದಕ್ಕಿಂತ ಉನ್ನತವಾದ ಪದವೊಂದು ನನಗೆ ತಿಳಿದಿಲ್ಲ.*
>
> *ಈ ಸಂಚಿತ ಅಹಂ ಸಮಗ್ರತೆಯ ಕೊರತೆ ಅಥವಾ ನಷ್ಟ ಸಾವಿನ ಭಯವನ್ನು ಸೂಚಿಸುತ್ತದೆ; ಜೀವನದ ಅಂತಿಮ ಎಂದು ಪರಿಗಣಿಸಲ್ಪಡದ ಒಂದೇ ಒಂದು ಜೀವನದ ಚಕ್ರವೆಂದರೆ ಇದೇ. ಸಮಯ ಈಗ ಕಡಿಮೆಯಿದೆ; ಮತ್ತೊಂದು ಜೀವನವನ್ನು ಪ್ರಾರಂಭಿಸಲು ಹಾಗೂ ಸಮಗ್ರತೆಗೆ ಪರ್ಯಾಯ ಮಾರ್ಗಗಳನ್ನು ಪ್ರಯತ್ನಿಸಲು ಅತ್ಯಲ್ಪ ಕಾಲಾವಧಿ ಇದೆ ಎನ್ನುವ ಭಾವನೆಗಳನ್ನು ಹತಾಶೆಯು ವ್ಯಕ್ತಪಡಿಸುತ್ತದೆ.* (ಎರಿಕ್ಸನ್, 1963, ಪುಟ 268–269)

ಮತ್ತೊಂದು ಕಡೆಯಲ್ಲಿ, ವೃದ್ಧಾಪ್ಯದ ಅತ್ಯಗತ್ಯ ವೈಶಿಷ್ಟ್ಯ ಅಥವಾ ಮೌಲ್ಯವಾದ ವಿವೇಕವು ತಲತಲಾಂತರ ಪೀಳಿಗೆಗಳಿಗೆ ಅಗತ್ಯವಾದ ಕೊಂಡಿಯನ್ನು ಒದಗಿಸುತ್ತದೆ. ತಮ್ಮ ಸಂಭಾವ್ಯ ವಿಕಾಸ ಮತ್ತು ಅಹಂನ ಸಮನ್ವಯತೆಗಾಗಿ ನಿರಂತರತೆ ಮತ್ತು ಭರವಸೆಯ ಪ್ರಜ್ಞೆಯ ಮೇಲೆ ಅವಲಂಬಿತರಾಗಿರುವ ಎಳೆಯರಿಗೆ ಈ ವಿವೇಕವು ನೆರವಾಗುತ್ತದೆ.

> *ಜೀವನಚಕ್ರದಲ್ಲಿ ಯಾವುದಾದರೊಂದು ಜವಾಬ್ದಾರಿ ಇರುವುದಾದರೆ ಅದು ಒಂದು ಪೀಳಿಗೆ ಮತ್ತೊಂದಕ್ಕೆ ಋಣಿಯಾಗಿರಬೇಕಾದ ಜ್ಞಾನದ ಗಳಿಕೆ; ಉನ್ನತ ವ್ಯಾಕುಲತೆಗಳಿಗೆ ತನ್ನದೇ ಆದ ರೀತಿಯಲ್ಲಿ ಎದೆಗೊಡುವ - ನಿತ್ರಾಣಗೊಳಿಸುವ ಬಡತನದಿಂದ ಅಥವಾ ಭಾವನಾತ್ಮಕ ಶೋಷಣೆಯಿಂದಾದ ನರವ್ಯಾಧಿ ವ್ಯಾಕುಲತೆಗಳಿಂದ ವಿಚಲಿತನಾಗದ ಜ್ಞಾನದ ಗಳಿಕೆಯಿಂದ.*
>
> *ಪ್ರತಿಯೊಂದು ಪೀಳಿಗೆ ತಲತಲಾಂತರದ ಜ್ಞಾನವನ್ನು ತನ್ನದೇ ರೀತಿಯಲ್ಲಿ ಹುಡುಕಿಕೊಳ್ಳಬೇಕಾಗುತ್ತದೆ. ಆದ್ದರಿಂದ, ವೃದ್ಧಾಪ್ಯದಲ್ಲಿನ ಶಕ್ತಿಯು ಜ್ಞಾನದ ಮೂಲಕ ಪಕ್ವಗೊಂಡ ವಿವೇಕ, ಸಂಘಟಿತ ತಿಳುವಳಿಕೆ, ಹಾಗೂ ಪ್ರಬುದ್ಧ ತೀರ್ಪುಗಳ ರೂಪವನ್ನು ಪಡೆದುಕೊಳ್ಳುತ್ತದೆ. ಇದು ಲೌಕಿಕ ಸಾಪೇಕ್ಷತೆಯಿಂದ ಬಿಡುಗಡೆ ಪಡೆದ ತಿಳುವಳಿಕೆಯ ಮೂಲತತ್ವವಾಗಿದೆ. ಹಾಗಾಗಿ, ಜ್ಞಾನವು ಜೀವನದ ಕಾಳಜಿಯಿಂದ ಮತ್ತು ಸಾವಿನ ಪಾಶದಿಂದ ಮುಕ್ತವಾದುದಾಗಿದೆ. ದೈಹಿಕ ಮತ್ತು ಮಾನಸಿಕ ಚಟುವಟಿಕೆಗಳ ಕುಗ್ಗುವಿಕೆಯ ಹೊರತಾಗಿಯೂ ಇದು ಅನುಭವದ ಸಮಗ್ರತೆಯನ್ನು ಉಳಿಸಿಕೊಳ್ಳುತ್ತದೆ ಮತ್ತು ಹೊರಸೂಸುತ್ತದೆ. ಇದು ಮುಂದಿನ ತಲೆಮಾರಿನ ಅಗತ್ಯತೆಗಳಿಗೆ ಸ್ಪಂದಿಸುತ್ತದೆ, ಆದಾಗ್ಯೂ ಸಮಗ್ರ ತಿಳುವಳಿಕೆಯ ಸಾಪೇಕ್ಷಿತ ಅರಿವನ್ನು ಹೊಂದಿರುತ್ತದೆ.* (ಎರಿಕ್ಸನ್, 1964, ಪುಟ 133)

## ಶಿಕ್ಷಣ ಮತ್ತು ಸಮಾಜದ ನಿಹಿತಾರ್ಥಗಳು

### … ಮಕ್ಕಳ ವಿಕಾಸ ಮತ್ತು ಶಿಕ್ಷಣಕ್ಕಾಗಿ

ಎರಿಕ್ಸನ್ನನ ಸೈದ್ಧಾಂತಿಕ ಒಳನೋಟಗಳು ಅಥವಾ ಪ್ರತಿಪಾದನೆಗಳು ಸಮಾಜ, ಮನೆ, ಹಾಗೂ ಸಂಸ್ಥೆಗಳಲ್ಲಿ ಮಕ್ಕಳಿಗಾಗಿ ಮಾಡಲಾಗಿರುವ ವ್ಯವಸ್ಥೆಗಳಿಗೆ ಮತ್ತು ಸಮತೋಲತೆ, ಜವಾಬ್ದಾರಿ, ಹಾಗೂ ಕಾಳಜಿ ಹೊಂದಿದ ಮನುಷ್ಯರಾಗಿ ವಯಸ್ಕರ ವಿಕಾಸಕ್ಕೆ ನಿಹಿತಾರ್ಥಗಳನ್ನು ಹೊಂದಿವೆ. ಈತ ಮನುಷ್ಯನ 'ಧನಾತ್ಮಕ' ಮತ್ತು 'ಕರಾಳ' ಮುಖಗಳೆರಡನ್ನೂ ನೈಜ್ಯ ಎಂದು ಒಪ್ಪಿಕೊಳ್ಳುತ್ತಾನೆ ಮತ್ತು ಅವರನ್ನು ಹೊಂದಿಕೊಳ್ಳಬಲ್ಲವರನ್ನಾಗಿ ಮಾರ್ಪಾಟು ಮಾಡಲು ಹೆಚ್ಚಿನ ಸಮತೋಲತೆಯ ಹಾಗೂ ಸಮಗ್ರತಾ ದೃಷ್ಟಿಯ ಜೀವನದ ದೃಷ್ಟಿಕೋನವನ್ನು ಉತ್ತೇಜಿಸಬಹುದಾದ ಆರೋಗ್ಯಕರ, ಕಾರ್ಯಸಾಧ್ಯವಾದ ಸದ್ಗುಣಗಳನ್ನು ಬೆಳೆಸಿಕೊಳ್ಳಲು ಮಾರ್ಗಗಳನ್ನು ಸೂಚಿಸುತ್ತಾನೆ. ಆತ ವ್ಯಕ್ತಿಗಳು ತಮ್ಮ ಅಹಂ ಸಾಮರ್ಥ್ಯಗಳನ್ನು ಧನಾತ್ಮಕವಾಗಿ ಸಂಘಟಿಸಿಕೊಳ್ಳಲು ಅಸಮರ್ಥರಾದಾಗ 'ನಿಷ್ಕ್ರಿಯತೆ ಮತ್ತು ಸ್ವೇಚ್ಛಾಚಾರ'ಗಳ ಋಣಾತ್ಮಕ ಫಲಿತಾಂಶ ಒದಗುತ್ತದೆ ಎಂದು ನಮ್ಮನ್ನು ಎಚ್ಚರಿಸುತ್ತಾನೆ.

ಎರಿಕ್ಸನ್ನನ ಪ್ರಕಾರ, ಉತ್ಪಾದಕತೆಯು ವರ್ಷಗಳ ಕಾಲ ಘನೀಕರಿಸಿಕೊಂಡ ಮತ್ತು ಸಂಕಲ್ಪಿಸಿಕೊಂಡ ಮಾನವ ವಿಕಾಸದ ಮುಂಚಿನ ಹಂತಗಳ ಫಲಿತಾಂಶ. ಉತ್ಪಾದಕ ವ್ಯಕ್ತಿಯು ಸಮತೋಲ ಹೊಂದಿದ ಅಹಂ ವ್ಯಕ್ತಿತ್ವಕ್ಕೆ ನಿದರ್ಶನನಾಗಿದ್ದು ಈತ ಅನ್ವೇಷಣೆ, ಜ್ಞಾನ ರಚನೆ, ಹಾಗೂ ವ್ಯಕ್ತಿತ್ವ ವಿಕಾಸದ ಜೀವನದೆಡೆಗೆ ಯುವಜನರನ್ನು ಹುರಿದುಂಬಿಸುವ, ಮಾರ್ಗದರ್ಶಿಸುವ, ಮುನ್ನಡೆಸುವ, ಹಾಗೂ ನಿರ್ದೇಶಿಸುವವನಾಗುತ್ತಾನೆ.

ಹಿಂದೆಗೆತ, ಸ್ವಯಂ-ಸಂಶಯ, ಕೀಳರಿಮೆ, ಹಾಗೂ ಏಕಾಂಗಿತನಗಳಂತಹ ಮನೋಪ್ರವೃತ್ತಿಗಳನ್ನು 'ಹತ್ತಿಕ್ಕಬೇಕಾದಲ್ಲಿ', ಈ ರೀತಿಯ ಋಣಾತ್ಮಕ ಭಾವನೆಗಳಿಗೆ ಎಡೆಮಾಡಿಕೊಡುವ ಮನೆ ಮತ್ತು ಶಾಲಾ ಪರಿಸರಗಳಲ್ಲಿನ ಅನುಭವಗಳ ಅರ್ಥಗಳ ಮೇಲೆ ಪರ್ಯಾಲೋಚನೆ ಮಾಡುವುದು ಸಮಾಜಕ್ಕೆ ಸಹಾಯಕಾರಿಯಾಗಬಹುದು. ಮಕ್ಕಳು ಮತ್ತು ಯುವಜನರು ಬೌದ್ಧಿಕ ಉತ್ತೇಜನೆ, ಅರ್ಥಪೂರ್ಣ ಸಾಮಾಜಿಕ ವಿನಿಮಯ, ಭಾವನಾತ್ಮಕ ವಿಕಾಸ, ಮತ್ತು ಸಾಂಸ್ಕೃತಿಕ ಸಹಿಷ್ಣುತೆಗಳಿಗೆ ಅವಕಾಶಗಳನ್ನು ಹುಡುಕುತ್ತಿರುತ್ತಾರೆ. ಮಕ್ಕಳು ಮತ್ತು ಯುವಜನರ ಅಗತ್ಯತೆಗಳನ್ನು ಮುನ್ನಲೆಗೆ ತರಬೇಕಾದರೆ ಮೊದಲು ನಾವು ಏನನ್ನು ಕಲಿಸುತ್ತಿದ್ದೇವೆ, ಏಕೆ ಕಲಿಸುತ್ತಿದ್ದೇವೆ, ಯಾವಾಗ ಕಲಿಸುತ್ತಿದ್ದೇವೆ, ಮತ್ತು ಹೇಗೆ ಕಲಿಸುತ್ತಿದ್ದೇವೆ ಎನ್ನುವುದರ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗುತ್ತದೆ, ಏಕೆಂದರೆ ಶಿಕ್ಷಣ ಎನ್ನುವುದು ಮೂಲಭೂತವಾಗಿ ಮಾನವ ವಿಕಾಸಕ್ಕೆ ಸಂಬಂಧಿಸಿದ್ದು.

ಸ್ವಾಭಾವಿಕವಾಗಿ, ಕಲಿಕಾ-ಸ್ನೇಹಿ ಶಿಕ್ಷಣವನ್ನು ಸಾಧ್ಯವಾಗಿಸಲು ನಾವು ಶಿಕ್ಷಕರನ್ನು ಮತ್ತು ಶೈಕ್ಷಣಿಕ ತಜ್ಞರನ್ನು ಹೇಗೆ ತಯಾರಿಸುತ್ತೇವೆ ಎನ್ನುವುದರ ಮೇಲೆ ಇದು ನಿಹಿತಾರ್ಥಗಳನ್ನು ಹೊಂದಿದೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಶಿಕ್ಷಣ ಕ್ರಮಗಳಲ್ಲಿ ಶಿಕ್ಷಕನನ್ನು ಕೇವಲ ಪೂರ್ವನಿರ್ಣಯಿತ ಜ್ಞಾನವನ್ನು ರವಾನಿಸುವ ವ್ಯಕ್ತಿಯನ್ನಾಗಿ ಅಷ್ಟೇ ಪರಿಗಣಿಸದೇ, ಆತನನ್ನು ತರಗತಿಯಲ್ಲಿ ಅರ್ಥ ಮತ್ತು ಸೂಕ್ಷ್ಮತೆಯನ್ನು ನಿರ್ಧರಿಸುವ ಪ್ರಮುಖ ನಟ ಅಥವಾ ಪಾತ್ರಧಾರಿ ಎನ್ನುವ ಪ್ರಾಮುಖ್ಯತೆಯಿಂದ ಗುರುತಿಸಲಾಗುತ್ತಿದೆ. ಶಿಕ್ಷಕ ವಿಕಾಸ ಮತ್ತು ತರಬೇತಿಗಳಲ್ಲಿ ನಿಸ್ಸಂಶಯವಾಗಿ ಒತ್ತನ್ನು ನೀಡಬೇಕಾಗಿರುವುದು 'ಪೋಷಿಸುವವರ ಪೋಷಣೆ'ಯ ಮೇಲೆ. ಜೀವನದ ಅಂತರ್ ಪೀಳಿಗೆಯ ಹಿನ್ನಲೆಯಲ್ಲಿ, ಶಿಕ್ಷಕನ ಸ್ವಯಂ ವಿಕಾಸ ಮುಂದಿನ ಪೀಳಿಗೆಗೆ ಉತ್ಪಾದಕನಾಗಿರಬೇಕಾದ ಆತನ ಸಾಮರ್ಥ್ಯದಷ್ಟೇ ನಿರ್ಣಾಯಕವಾದುದು. ಇಂತಹ ಸಮಗ್ರತಾ ದೃಷ್ಟಿಯ ವಿಕಾಸ ಬೇರು ಬಿಡಲು ಅವಕಾಶ ಸಿಗದ ಜೀವನದ ಸಂದರ್ಭಗಳಲ್ಲಿ, ಚಿಕಿತ್ಸೆ ಮತ್ತು ಸಾಮೂಹಿಕ ಕಲಿಕೆಗಳ ಮೂಲಕ ಸಿಗುವ ಉಪಶಮನ ಸ್ವ-ಪ್ರಜ್ಞೆಗೆ ಒಳನೋಟವುಳ್ಳ ದಾರಿಗಳನ್ನು ಮತ್ತು ಬೆಳವಣಿಗೆಗೆ ಪರ್ಯಾಲೋಚನ ಶಕ್ತಿಯನ್ನು ಒದಗಿಸುತ್ತದೆ.

ಇದರ ಜೊತೆಯಲ್ಲಿ, ಪಠ್ಯಕ್ರಮ ಪದ್ಧತಿಗಳನ್ನು ಉದ್ದೇಶ, ಹಿನ್ನೆಲೆ, ಸೂಕ್ತತೆ, ಹಾಗೂ ಅಭಿವೃದ್ಧಾತ್ಮಕ ತಯಾರಿಗಳಿಗಾಗಿ ಪರೀಕ್ಷಿಸಬೇಕಾಗುತ್ತದೆ. ಸಾಂಪ್ರದಾಯಿಕ ಶಾಲಾ ಶಿಕ್ಷಣ ಪದ್ಧತಿಗಳು ಸ್ವಾಯತ್ತ ಚಿಂತನೆ ಮತ್ತು ವ್ಯಕ್ತಪಡಿಸುವಿಕೆ, ತೊಡಗುವಿಕೆ ಮತ್ತು ಉದ್ಯೋಗಶೀಲತೆ, ಅರ್ಥಪೂರ್ಣ ಸಾಮಾಜಿಕ ವಿನಿಮಯ ಮತ್ತು ಒಳಗೊಳ್ಳುವಿಕೆಗಳಿಗೆ ಅತ್ಯಲ್ಪ ಸ್ಥಳಾವಕಾಶವನ್ನು ಒದಗಿಸುತ್ತವೆ. ಎರಿಕ್ಸನ್ನನ ಚೌಕಟ್ಟು ಮಕ್ಕಳಿಗೆ ಕಾರಣಾರ್ಥ ಸ್ವಾಯತ್ತತೆಯ ಪ್ರಜ್ಞೆಯನ್ನು ಅನುಭವಿಸಲು ಅವಕಾಶ ನೀಡಬೇಕು, ಮಕ್ಕಳು ತಮ್ಮ ಪ್ರಶ್ನೆ, ಆಲೋಚನೆ, ಯೋಜನೆ, ದ್ವಂದ್ವ, ಅಭಿಪ್ರಾಯ, ಹಾಗೂ ಸೃಜನಾತ್ಮಕ ಅಭಿವ್ಯಕ್ತತೆಗಳನ್ನು ನಿಯತವಾಗಿ ಹಂಚಿಕೊಳ್ಳಲು ಸಾಧ್ಯವಾಗುವ ರೀತಿಯಲ್ಲಿ ಪಠ್ಯಕ್ರಮ ಪದ್ಧತಿಗಳನ್ನು ರೂಪಿಸಬೇಕು, ತನ್ಮೂಲಕ ಮುಂದಿನ ಪೀಳಿಗೆಯಲ್ಲಿ ಉದ್ದೇಶ ಮತ್ತು ಕಾಳಜಿಯ ಪ್ರಜ್ಞೆಗಳ ಹೆಜ್ಜೆ ಗುರುತುಗಳನ್ನು ಮೂಡಿಸಬಹುದು ಎಂದು ಆಗ್ರಹಿಸುತ್ತದೆ.

## … ಮಾನವತ್ವ ಮತ್ತು ಸಹಬಾಳ್ವೆಗಾಗಿ

ಎರಿಕ್ಸನ್ ಸಾಮಾಜಿಕ ವಿಕಸನದ ಉದ್ದೇಶವು ತನ್ನ ಮತ್ತು ತನ್ನ ಹತ್ತಿರದ ಬಳಗದ ತತ್ಕಾಲದ ಅಗತ್ಯತೆಗಳನ್ನು ಮೀರಿ ಚಿಂತಿಸಬಲ್ಲ ಮತ್ತು ಜನರು ಹಾಗೂ ಸಮಸ್ಯೆಗಳ ಬಗ್ಗೆ ಕಾಳಜಿ ತೋರುವ ನೈತಿಕ, ಪ್ರಬುದ್ಧ ಮನುಷ್ಯನ ವಿಕಾಸ ಎಂದು ನಂಬುತ್ತಾನೆ. ಆತ ಉಳಿವಿಗೆ ಅಗತ್ಯವೆಂದು ಕಾಣುವ ಪೈಪೋಟಿ, ಪ್ರಭುತ್ವ, ಅಧಿಕಾರ, ಹಾಗೂ ದುರಾಸೆಗಳಿಗಾಗಿ ನಡೆಯುವ ನಿಷ್ಕರುಣ ಸೆಣಸಾಟದಂತಹ ಹಿಂಸಾತ್ಮಕ ಮತ್ತು ಆಕ್ರಮಣಶೀಲ

ಮಾನವ ಸ್ವಭಾವದ ಅಂಶಗಳನ್ನು ಬಹಳ ಹಿಂದಿನಿಂದಲೂ ಸಮಾಜಗಳು ವೈಭವೀಕರಿಸುತ್ತಿವೆ ಮತ್ತು ಸಮರ್ಥಿಸಿಕೊಳ್ಳುತ್ತಿವೆ ಎಂದು ವಾದಿಸುತ್ತಾನೆ. ಮನುಷ್ಯ ಸ್ವಭಾವದ ಈ ಕರಾಳ ಮುಖವನ್ನು ವಾಸ್ತವಾಂಶವೆಂದು ಪರಿಗಣಿಸಿ ಧನಾತ್ಮಕ ಮುಖದೊಂದಿಗೆ ತಾತ್ವಿಕ ಜಿಜ್ಞಾಸೆ ನಡೆಸುತ್ತಾನೆ. ಮಾನವ ಸ್ವಭಾವದ ಈ ಎರಡೂ ಮುಖಗಳ ನಡುವಿನ ಉದ್ವೇಗ ಎರಿಕ್ಸನ್ನನ ದ್ವಿಕೇಂದ್ರಿತ ಸಿದ್ಧಾಂತದ (Theory of Bipolarity) ಪ್ರಮುಖ ವಿಷಯವಾಗಿದೆ ಮತ್ತು ಮಾನವ ವಿಕಾಸದಲ್ಲಿನ ವಿಕಾಸಾತ್ಮಕ ಸಂದಿಗ್ಧ ಸಮಯದ ಉಗಮವಾಗಿದೆ. ಜೀವನದಿಂದ ಉದ್ಭವಿಸುವ ಪರಿವರ್ತನೆಗೊಳ್ಳಬಲ್ಲ ಅಹಂ ಸಾಮರ್ಥ್ಯಗಳು ಮತ್ತು ಜನರು ಮಾಡಿಕೊಳ್ಳುವ ಆಯ್ಕೆಗಳು ನೈತಿಕ, ಪ್ರಬುದ್ಧ ಮನುಷ್ಯರು ಹಾಗೂ ತಮ್ಮ ಅಹಂ ಸಮತೋಲನವನ್ನು ಹುಡುಕಿಕೊಳ್ಳಲು ಹೋರಾಡುತ್ತಿರುವ ಜನರ ನಡುವೆ ವ್ಯತ್ಯಾಸಕ್ಕೆ ಎಡೆ ಮಾಡಿಕೊಡುತ್ತವೆ.

ಎರಿಕ್ಸನ್ ವೈದ್ಯಕೀಯ ಮತ್ತು ನೈತಿಕ ಪದ್ಧತಿಗಳ ಮೂಲಕ ಮಾನವ ಸ್ವಭಾವದ ಧನಾತ್ಮಕ ಮುಖವನ್ನು ಸಮಾಜ ಮತ್ತು ಸ್ವಭಾವಗಳನ್ನು ಪ್ರಭಾವಿಸುವ ರೀತಿಯಲ್ಲಿ ಪೋಷಿಸಬಹುದು ಎಂದು ನಂಬುತ್ತಾನೆ. ಆತ ಪ್ರಾಣಿಗಳಲ್ಲಿ 'ಮತ್ತೊಂದಕ್ಕೆ' ಕಾಳಜಿ ಮಾಡುವ ಸಾಮರ್ಥ್ಯ ಇರಬಹುದಾದರೆ ಆಲೋಚನೆ, ಪರ್ಯಾಲೋಚನೆ, ಹಾಗೂ ಬೋಧನಾ ಸಾಮರ್ಥ್ಯಗಳಿರುವ ತಮ್ಮ ಸದ್ಗುಣಗಳ ಮೂಲಕ ಮನುಷ್ಯರು 'ಪ್ರಾಣಿ' ಸ್ವಭಾವ ಮತ್ತು 'ಮನುಷ್ಯ' ಸ್ವಭಾವಗಳೆಂದು ನಂಬಲ್ಪಟ್ಟವುಗಳನ್ನು ಮರು-ಪರೀಕ್ಷೆಗೆ ಒಳಪಡಿಸುವ ಶಕ್ತಿಯುಳ್ಳವರಾಗಿದ್ದಾರೆ ಎಂದು ನಂಬುತ್ತಾನೆ.

ಎರಿಕ್ಸನ್ 'ಪ್ರಾಣಿ ಸ್ವಭಾವ'ದ ಬಗ್ಗೆ ಹೊಂದಿರುವ ಬಲವಾದ ಮೂಢನಂಬಿಕೆಗಳು ಮತ್ತು ಭ್ರಾಂತಿಗಳನ್ನು ಹೋಗಲಾಡಿಸಲು ವೈಜ್ಞಾನಿಕ ಅಧ್ಯಯನಗಳಿಂದ ಎರಡು ಉತ್ತಮ ಉದಾಹರಣೆಗಳನ್ನು ನೀಡುತ್ತಾನೆ (ಎರಿಕ್ಸನ್, 1964, ಪುಟ 228-230). ಆತ ಮೊದಲನೆಯದಾಗಿ, ಪ್ರಾಧ್ಯಾಪಕ ಹ್ಯಾರಿ ಹಾರ್ಲೊ ಅವರ ಕೋತಿಮರಿಗಳ ನಡುವಿನ ಪ್ರೀತಿಯ ಶಕ್ತಿಯ ಮೇಲಿನ ಅಧ್ಯಯನವನ್ನು ಉಲ್ಲೇಖಿಸುತ್ತಾನೆ. ಜನನಿ ಅಥವಾ ಸ್ವಾಭಾವಿಕ ತಾಯಂದಿರಿಂದ ಬೇರ್ಪಡಿಸಲ್ಪಟ್ಟ ಈ ಮರಿ ಕೋತಿಗಳನ್ನು ಉಣ್ಣೆ, ಲೋಹ, ಹಾಗೂ ಬಟ್ಟೆಗಳಂತಹ ಘನ ವಸ್ತುಗಳಿಂದ ಮಾಡಿದ 'ತಾಯಂದಿರ' ಜೊತೆಗೆ ಬೋನಿನಲ್ಲಿ ಇಡಲಾಗಿತ್ತು. ನಿರ್ಜೀವ ವಸ್ತುಗಳಾಗಿದ್ದರೂ ಸಹ, ಈ ತಾಯಂದಿರಿಗೆ ಹಾಲೂಣಿಸುವ, ಬೆಚ್ಚಗಿಡುವ, ಹಾಗೂ ಉತ್ತೇಜನಕಾರಿ ಶಾರೀರಿಕ ಸ್ಪರ್ಶದಂತಹ ಮೂಲಭೂತ ಕ್ರಿಯೆಗಳನ್ನು ಮಾಡಬಹುದಾದ ಸಾಮರ್ಥ್ಯ ಇತ್ತು.

> *ಹೀಗೆ, ಪ್ರಯೋಗಾಲಯದಲ್ಲಿ ಬೆಳೆಸಿದ ಕೋತಿಗಳು ಅತ್ಯಂತ ಆರೋಗ್ಯಕರವಾಗಿ ಬೆಳೆದವು, ಮತ್ತು ತಾಂತ್ರಿಕ ತರಬೇತಿಯನ್ನು ಬಹು ಸುಲಭವಾಗಿ ಪಡೆಯಬಲ್ಲವಾದವು. ಇದಕ್ಕೆ ವಿರುದ್ಧವಾಗಿ, ಕೇವಲ ತಮ್ಮ ತಾಯಂದಿರಿಂದ ಬೆಳೆಸಲ್ಪಟ್ಟ ಮರಿಗಳು ತರಬೇತಿಗೆ ಒಳಪಡುವುದು ಕಠಿಣವಾಗಿ, ಅಂತಿಮವಾಗಿ ಅವು ಹಾರ್ಲೊ ಕರೆಯುವಂತೆ "ಮನೋವಿಕೃತತೆಗೆ" ಪರಿವರ್ತಿತಗೊಂಡವು. ಅವು ನಿರ್ಲಿಪ್ತವಾಗಿ ಕೂರುತ್ತಿದ್ದವು, ಶೂನ್ಯದೆಡೆಗೆ ದೃಷ್ಟಿಸುತ್ತಿದ್ದವು, ಮತ್ತು ಕೆಲವು ಭೀಕರವಾಗಿ ವರ್ತಿಸುತ್ತಿದ್ದವು: ಅವಕ್ಕೆ ತಿವಿದಾಗ ತಮ್ಮನ್ನು ತಾವೇ ಕಚ್ಚಿಕೊಳ್ಳುತ್ತಿದ್ದವು ಮತ್ತು ರಕ್ತ ಹರಿಯುವ ತನಕ ತಮ್ಮ ಚರ್ಮವನ್ನು ತಾವೇ ಹರಿದುಕೊಳ್ಳುತ್ತಿದ್ದವು.* (ಎರಿಕ್ಸನ್, 1964, ಪುಟ 228-229)

ಈ ಅಧ್ಯಯನವು ಎರಿಕ್ಸನ್ನನಿಗೆ 'ಮತ್ತೊಬ್ಬ', ಮತ್ತು ಹೆಚ್ಚು ನಿರ್ದಿಷ್ಟವಾಗಿ, ನೈಜ್ಯ ತಾಯಿಯ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸಿತು. ಇದು ಪ್ರಾಣಿಗಳ 'ಪಶು ಸ್ವರೂಪ'ದ ಉಗಮದ ಬಗ್ಗೆ ನಮಗಿರುವ ಕಲ್ಪನೆಗಳನ್ನು ಪ್ರಶ್ನಿಸಲು ಸಹಾಯಕವಾಯಿತು.

ಎರಿಕ್ಸನ್ ಕೀನ್ಯಾದ ಆಡಮ್ಸನ್ ಮನೆಯೊಂದರಲ್ಲಿ ಕಾಳಜಿ ಮತ್ತು ಪ್ರೀತಿಯಿಂದ ಬೆಳೆಸಲ್ಪಟ್ಟ ಎಲ್ಸಾ ಎಂಬ ಸಿಂಹಿಣಿಯ ಕಥೆಯೊಂದನ್ನು ಸಹ ಉಲ್ಲೇಖಿಸುತ್ತಾನೆ. ಈ ಸಿಂಹಿಣಿ ಕಾಡಿಗೆ ಹಿಂದುರಿಗಿದ ಬಳಿಕವೂ ಸಹ ತನ್ನ ಮರಿಗಳ ಸಮೇತ ತನ್ನ 'ಸಾಕು' ಪೋಷಕರೊಂದಿಗೆ ಸಂಪರ್ಕವನ್ನು ಹೊಂದಿತ್ತು. ಎರಿಕ್ಸನ್ ಹೀಗೆ ಬರೆಯುತ್ತಾನೆ:

> *ಈ ಮತ್ತು ಇಂತಹ ಕಥೆಗಳು ಸೂಚಿಸುವುದೇನೆಂದರೆ, ಪ್ರಕೃತಿಯಲ್ಲಿರುವ ಮೃಗಗಳು ಎಂದು ನಾವು ಕರೆಯುವ ಮತ್ತು ನಮ್ಮೊಳಗೇ ಇರುವ 'ಮೂಲ ಪ್ರವೃತ್ತಿ' ಅಥವಾ 'ಸಹಜ ಪ್ರೇರಣೆ'ಯ ಮೃಗತ್ವದ ಜೊತೆಗಿನ ನಮ್ಮ ವಾಡಿಕೆಯ ಸಂಬಂಧವು ಸಾವಿರಾರು ವರ್ಷಗಳ ಮೂಢನಂಬಿಕೆಯಿಂದ ವಿಕೃತಗೊಂಡಿರಬಹುದು. ಮತ್ತು ನಾವು ಪ್ರಕೃತಿಯನ್ನು ಪೋಷಿಸಲು ಮತ್ತು ಅದರ ಮೇಲೆ ಮೇಲುಗೈ ಸಾಧಿಸಲು ಕಲಿತವಾದರೆ, ನಮ್ಮ 'ಮೃಗತ್ವ'ದಲ್ಲಿ ಸಹ ಶಾಂತಿಯನ್ನು ಸಾಧಿಸಲು ಸಂಪನ್ಮೂಲಗಳು ದೊರಕಬಹುದು. ನಾವು ಇಂದು, ಬೈಬಲ್ಲಿನಲ್ಲಿ ಪದಶಃ ಉಲ್ಲೇಖಿಸಿರುವಂತೆ, ಕೋತಿಯೊಂದಕ್ಕೆ 'ತನ್ನದೇ ಕೈಯಿನ ಮಾಂಸವನ್ನು ತಿನ್ನು'ವಂತೆ ಕಲಿಸಬಹುದು; ಇದು ಸಕಲ ಮಾನವಕುಲವನ್ನು 'ಬೆಂಕಿಯ ಇಂಧನ'ವನ್ನಾಗಿ ಮಾಡಿಕೊಳ್ಳಲು 'ತಪ್ಪಿತಸ್ಥ ನಾಯಕರಿಗೆ' ನಾವೇ ಅನುಮತಿ ನೀಡಿದಂತೆ. ಆದಾಗ್ಯೂ, ನಾವು ನಮ್ಮ ಮಕ್ಕಳು ಬೆಳೆದು ದೊಡ್ಡವರಾಗಿ 'ಕರು ಹಾಗೂ ಮರಿ ಸಿಂಹ ಮತ್ತು ಚೆನ್ನಾಗಿ ಕೊಬ್ಬಿ(ಸಿ)ದ ಮರಿಗಳನ್ನು ಒಟ್ಟಾಗಿ' ಮುನ್ನಡೆಸುವುದಕ್ಕೆ ಬಿಡಬಹುದಾದ - ಪ್ರಕೃತಿಯಲ್ಲಿ ಮತ್ತು ತಮ್ಮದೇ ಪ್ರಕೃತಿಯಲ್ಲಿ - ಸಮಾನ ಸಾಧ್ಯತೆಗಳು ಕಾಣುತ್ತವೆ.* (ಎರಿಕ್ಸನ್, 1964, ಪುಟ 230)

## ಉಪಸಂಹಾರ

ತನ್ನ ಉಪಶಮನ ಮತ್ತು ಕಲಿಸುವಿಕೆಯಲ್ಲಿನ ತೀವ್ರವಾದ ಆಸಕ್ತಿಯಿಂದ ಗುರುತಿಸಿಕೊಂಡಿದ್ದ ಚಿಂತಕ ಎರಿಕ್ಸನ್ ಭವಿಷ್ಯದ ಮನುಷ್ಯತ್ವ ಮತ್ತು ಜೀವನದ ಬಗ್ಗೆ ಆಶಾದಾಯಕ ದರ್ಶನವನ್ನು ನೀಡುತ್ತಾನೆ. ಎರಿಕ್ಸನ್ 'ಅಸ್ತಿತ್ವದ ಒಳ್ಳೆಯತನ'ದಲ್ಲಿ, ತಮ್ಮನ್ನು, ತಮ್ಮ ಸಂತಾನ, ಹಾಗೂ ಸ್ವಭಾವವನ್ನು ಸಲಹಿಕೊಳ್ಳಬಲ್ಲ ಮನುಷ್ಯನ ಪಾತ್ರಗಳಲ್ಲಿ ನಂಬಿಕೆ ಇಟ್ಟಿದ್ದ. ಆತ ಸಮಾಜದಲ್ಲಿ ತಮ್ಮ ಸ್ಥಾನವನ್ನು ಕಂಡುಕೊಳ್ಳಲು ಮಕ್ಕಳಿಗೆ ಸಹಾಯ ಮಾಡುವುದು ಅವರ ಸುತ್ತಮುತ್ತಲಿನ ಪ್ರಪಂಚದೊಡನೆ ಸಮತೋಲಿತ, ಅರ್ಥಪೂರ್ಣ ಸಂಬಂಧಗಳನ್ನು ರಚಿಸಿಕೊಳ್ಳಲು ಸಹಾಯ ಮಾಡಿದಂತೆ ಎಂದು ನಂಬಿದ್ದ.

ಎರಿಕ್ಸನ್ ವೈಯಕ್ತಿಕ ಮತ್ತು ಸಾಮಾಜಿಕ ಸಂಘರ್ಷಗಳನ್ನು ಪರಿಹರಿಸುವಲ್ಲಿ ಮನುಷ್ಯ ಸ್ವಭಾವದ ಸಾಮರ್ಥ್ಯವನ್ನು ಮನಗಂಡಿದ್ದ. ಆತ ಸಂಬಂಧಗಳ ಪರಸ್ಪರತೆಯು ಈ ಸಾಮರ್ಥ್ಯವನ್ನು ಹುಟ್ಟಿಸುತ್ತದೆ ಎಂದು ನಂಬುತ್ತಾನೆ. ಆತ ಈ ಸಾಮರ್ಥ್ಯವು ಬಾಹ್ಯ ಕೊಡುಗೆಗಳಿಂದ ಪ್ರೇರಿತವಾಗಿಲ್ಲದೆ ಮನುಷ್ಯನ ಆಂತರಿಕ ಶಕ್ತಿಯಿಂದ ಉದ್ಭವಿಸಿದೆ ಎಂದು ನಮಗೆ ನೆನಪಿಸುತ್ತಾನೆ. ಮತ್ತು ಈ ಆಂತರಿಕ ಶಕ್ತಿಯು ಬಾಲ್ಯ, ಹರೆಯ, ಹಾಗೂ ಎಳೆಯ ವಯಸ್ಕತೆಯಲ್ಲಿ ಎದುರಿಸಿದ ಹಂತಗಳ ಅಹಂ ಸಂಯೋಜನೆಯ ಮೇಲೆ ನಿರ್ಭರವಾಗಿದೆ. ಇದು ವೈಯಕ್ತಿಕ ವಿಕಸನ ಮತ್ತು ಸಾಮಾಜಿಕ ಜವಾಬ್ದಾರಿಗಳಿಗೆ ಸೂಕ್ತವಾದ ಆಯ್ಕೆಗಳನ್ನು ಮಾಡಬಲ್ಲ ವ್ಯಕ್ತಿತ್ವದ ವಿಕಾಸದಿಂದ ಸಾಧ್ಯವಾಗುತ್ತದೆ. ಈ ವ್ಯಕ್ತಿತ್ವ ವಿಕಾಸ ಹಂತಗಳ ಸರಣಿಯ ಮೂಲಕ ತೆರೆದುಕೊಳ್ಳುತ್ತದೆ ಮತ್ತು ವ್ಯಕ್ತಿಯೊಬ್ಬ ತನ್ನದಾಗಿಸಿಕೊಳ್ಳಲು ಶ್ರಮಿಸುವ ಸಾಮಾಜಿಕ ವಾಸ್ತವತೆ ಹಾಗೂ ಸಮತೋಲನಗಳ ನಡುವಿನ ಪರಸ್ಪರತೆಯಲ್ಲಿ ಸ್ಪಷ್ಟವಾಗುತ್ತದೆ ಎನ್ನುವುದು ಎರಿಕ್ಸನ್ನನ ತೀವ್ರವಾದ ಸಮರ್ಥನೆ. ಪ್ರತಿಯೊಬ್ಬ ಮನುಷ್ಯನಲ್ಲಿ, ಮತ್ತು ಪ್ರತಿಯೊಂದು ಸಮುದಾಯ ಹಾಗೂ ದೇಶದಲ್ಲಿ, ಸಾಮಾಜಿಕ ವಿನಿಮಯದ ನೈತಿಕತೆಯೊಂದಿಗೆ ಗುರುತಿಸಿಕೊಳ್ಳುವ ಅಗತ್ಯತೆ ಇದೆ. ಎಲ್ಲಿಯವರೆಗೆ ಸಾಮಾಜಿಕ ವಿನಿಮಯದ ಸಮೀಕರಣಗಳು ಮೇಲರಿಮೆಗೆ ಪ್ರತಿಯಾಗಿ ಕೀಳರಿಮೆ, ಗೆದ್ದವರು ಮತ್ತು ಸೋತವರು, ಸಾಧಕರು ಮತ್ತು ಅಸಾಮರ್ಥ್ಯರು - ಇಂತವುಗಳನ್ನು ಉತ್ತೇಜಿಸುವುದಿಲ್ಲವೋ, ಅಲ್ಲಿಯವರೆಗೆ ಮಾನವ ನಾಗರಿಕತೆ ಉಳಿಯುವ ಭರವಸೆ ಇದೆ. ಬೆಳೆಯುತ್ತಿರುವ

ಪ್ರತಿಯೊಂದು ಮಗುವಿನ ಸದ್ಗುಣಗಳನ್ನು ಸಮರ್ಪಕವಾಗಿ ಪೋಷಿಸಿದಲ್ಲಿ, ಅಲ್ಲಿ ರಚನಾತ್ಮಕ ಸಾಮಾಜಿಕ ಸಮೀಕರಣಗಳ ವಿಕಸನದ ಭರವಸೆ ಇದೆ. ಇದನ್ನು ನಾವು ಕಲಿಸುವ, ಸಂವಹಿಸುವ, ಹಾಗೂ ಯುವಜನಾಂಗ ತಮ್ಮದೇ ಮತ್ತು ತಮ್ಮ ಹಿಂದಿನ ತಲೆಮಾರುಗಳ ತಪ್ಪುಗಳಿಂದ ಕಲಿಯಲು ಒದಗಿಸುವ ಅವಕಾಶಗಳಲ್ಲಿ ಪರಿಣಾಮಕಾರಿ ಪರಿವರ್ತನೆಗಳನ್ನು ತರುವ ಮೂಲಕ ಸಾಧ್ಯವಾಗಿಸಬಹುದು. ಇದರ ಅರ್ಥ, ಮಾನವ ಜನಾಂಗದ ಮುಂದಿನ ಪೀಳಿಗೆಗಳ ಜೀವನವನ್ನು ಪೋಷಿಸುವತ್ತ ದಾರಿ ತೋರುವ ಒಂದು ವಿಶ್ವಾಸಾರ್ಹ, ಅಂತರ್ಗತ ಸಮಾಜದ ಸಾಕಾರಕ್ಕಾಗಿ ಕೆಲಸ ಮಾಡುವುದು.

*ಪೋಷಕ ಮತ್ತು ಮಗು, ಪುರುಷ ಮತ್ತು ಸ್ತ್ರೀ, ಹಾಗೂ ವೈದ್ಯ ಮತ್ತು ರೋಗಿಗಳ ಸಂಬಂಧಗಳ ಬಗ್ಗೆ ಏನು ಹೇಳಲ್ಪಟ್ಟಿದೆಯೋ, ಅದು ದೇಶಗಳು ಪರಸ್ಪರ ಹೊಂದಿರುವ ಸಂಬಂಧಗಳಿಗೆ ಅನ್ವಯತೆ ಹೊಂದಿರಬಹುದು... ಹೆಚ್ಚು ವಿಕಾಸಗೊಂಡ ದೇಶಗಳು ಇತರ ದೇಶಗಳು ಸಹ ಪರಸ್ಪರ ಮತ್ತೊಂದರೊಡನೆ ಮೇಲರಿಮೆಯ ವರ್ತನೆಯಿಂದ ವ್ಯವಹರಿಸಬೇಕು ಎಂದು ನಂಬುವುದು ಅತಿ ಸುಲಭ. ಈ ಅಂಶ ಒತ್ತಿ ಹೇಳಲ್ಪಟ್ಟ ಅಸಮತೆಯಲ್ಲ, ಬದಲಾಗಿ ಚಾರಿತ್ರಿಕ ವ್ಯತ್ಯಾಸಗಳಲ್ಲಿನ ಗೌರವಾನ್ವಿತ ವೈಶಿಷ್ಟ್ಯತೆ.*

*ಶಸ್ತ್ರಾಸ್ತ್ರ ಪೈಪೋಟಿಗೆ ಏಕಮಾತ್ರ ಪರ್ಯಾಯವೆಂದರೆ, ದೇಶವೊಂದು ತನ್ನ ಚಾರಿತ್ರಿಕ ಪಾಲುದಾರನಿಗೆ ಸ್ವಯಂ ವಿಕಾಸಕ್ಕೆ ಬೇಕಾದ ಸಶಕ್ತತೆ ಬೆಳೆಸಿಕೊಳ್ಳಲು ಪ್ರೋತ್ಸಾಹಿಸುವುದು ಮತ್ತು ತನ್ಮೂಲಕ ದೇಶಗಳೆರಡೂ ಭವಿಷ್ಯದಲ್ಲಿ ಪರಸ್ಪರ ಸಮಾನ ವ್ಯಕ್ತಿತ್ವ ಹೊಂದುವ ರೀತಿಯಲ್ಲಿ ಸಾಮರ್ಥ್ಯಗಳನ್ನು ಗಳಿಸಿಕೊಳ್ಳುವುದು ಎಂದು ಕಾಣುತ್ತದೆ. ಹೀಗೆ ಮಾಡಿದಲ್ಲಿ ಮಾತ್ರ ನಾವು ಪುರಾತನ ಅವಶೇಷಗಳ ಸ್ವತ್ತಾದ ಗೆಲುವು ಮತ್ತು ಸೋಲು, ನಿಗ್ರಹ ಮತ್ತು ಶೋಷಣೆಗಳಂತಹ ಅಪಾಯಕಾರಿ ಚಿತ್ರಣಗಳನ್ನು ಮೀರಲು ಸಾಮಾನ್ಯ ಗುಣವೊಂದನ್ನು ಹುಡುಕಲು ಸಾಧ್ಯವಾಗಬಹುದು.*

*ಇದು ಆದರ್ಶ ಸ್ಥಿತಿ ಎಂದು ಅನ್ನಿಸುತ್ತಿದೆಯೇ? ಇದಕ್ಕೆ ವಿರುದ್ಧವಾಗಿ, ನಾನು ಹೇಳಿರುವ ಎಲ್ಲವೂ ಈಗಾಗಲೇ ಬಹಳಷ್ಟು ರೀತಿಗಳಲ್ಲಿ ತಿಳಿದುಕೊಳ್ಳಲ್ಪಟ್ಟಿವೆ, ಬಹಳಷ್ಟು ಭಾಷೆಗಳಲ್ಲಿ ವ್ಯಕ್ತಪಟ್ಟಿವೆ, ಮತ್ತು ಬಹಳಷ್ಟು ಹಂತಗಳಲ್ಲಿ ಅನುಷ್ಠಾನಗೊಂಡಿವೆ.*

*ಈ ಹಿಂದಿನ ಶತಮಾನ ಮನುಷ್ಯನ ಪ್ರಾಣಿ ಸಂತತಿ, ವಾಣಿಜ್ಯ ಚರಿತ್ರೆ, ಹಾಗೂ ಅವನ ಆಂತರಿಕ ವಿಮುಖತೆಗಳಿಂದ ಹೊರಹೊಮ್ಮಿದ ಸುಪ್ತ ಪ್ರಚೋದನೆಗಳ ಪ್ರಜ್ಞೆಯನ್ನು ಆಘಾತಕಾರಿಯಾಗಿ ವಿಸ್ತರಿಸಿದೆ. ಇದು ಉತ್ಪನ್ನಕಾರಿ ಸ್ವಯಂ-ವಿಶ್ಲೇಷಣಾ ವಿಧಾನಗಳನ್ನು ಸಹ ಹುಟ್ಟುಹಾಕಿದೆ (ಈ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ). ಇವು ಒಂದು ಕಾಲದಲ್ಲಿ ಉನ್ನತ ಎತ್ತರವನ್ನು ತಲುಪಿದ ಏಷ್ಯನ್ ಸಂಪ್ರದಾಯದಂತೆ ಸ್ವಯಂ-ಶೋಧನೆಯ ಕಡೆಗೆ ಇರುವ ಜಾಗತಿಕ ಒಲವಿನ 'ಪಶ್ಚಿಮ'ದ ವ್ಯಾವಹಾರಿಕ ರೂಪಾಂತರ ಎಂದು ನಾನು ಭಾವಿಸುತ್ತೇನೆ. ಜಾಗತಿಕ ತಾಂತ್ರಿಕ ಕುಶಲತೆಯ ಅತಿಸೂಕ್ಷ್ಮ ವಿವರಗಳ ಜೊತೆಗೆ ಹೊಸ ಮತ್ತು ಹಳೆಯ ಸ್ವಯಂ-ಅರಿವಿನ ವಿಧಾನಗಳನ್ನು ಎಲ್ಲೆಡೆ ಸಂಯೋಜಿಸಲು ಪ್ರಾರಂಭಿಸುವುದು ಮುಂದಿನ ಪೀಳಿಗೆಯ ಕಾರ್ಯ.* (ಎರಿಕ್ಸನ್, 1964, ಪುಟ 242-243)

## ಗಮನಿಸಿ

1. ಉದಾಹರಣೆಗೆ, ದೂರದ ಪ್ರದೇಶಗಳಲ್ಲಿರುವ ಮಾಧ್ಯಮಿಕ ಮತ್ತು ಹಿರಿಯ ತರಗತಿಯ ಮಕ್ಕಳು ಬಹು ಆಯಾಮಗಳುಳ್ಳ ಜೀವನದ ಮುಖಗಳನ್ನು ಒಂದೇ ಕಾಲದಲ್ಲಿ ಶೋಧಿಸಬಲ್ಲರು. ಇದು ಸಾಮಾಜಿಕ ಜಾಲಬಂಧ ತಾಣಗಳು (ಫೇಸ್ ಬುಕ್) ಮತ್ತು ಸಾಂಪ್ರದಾಯಿಕ ಶೈಕ್ಷಣಿಕ ಅಭ್ಯಾಸಗಳಿಂದ ಹಿಡಿದು

ಗ್ರಾಹಕತೆ, ಹರೆಯದ ತಲ್ಲಣ, ಹಾಗೂ ಸ್ವಾಯತ್ತತೆಗಾಗಿ ಅವರದೇ ಆದ ಅಂಕುರಗೊಳ್ಳುತ್ತಿರುವ ಮಹತ್ವಾಕಾಂಕ್ಷೆಗಳವರೆಗೆ ಹಬ್ಬಿರಬಲ್ಲದು.

2. ಎರಿಕ್ ಎರಿಕ್ಸನ್ 1902ರಲ್ಲಿ ಒಬ್ಬ ಡೇನಿಷ್ ಯೆಹೂದಿ ಮಹಿಳೆಯಲ್ಲಿ ಜನ್ಮ ತಾಳಿದ. ಇವನ ಜೈವಿಕ ತಂದೆ ಎರಿಕ್ಸನ್ ಹುಟ್ಟುವ ಮೊದಲೇ ಅವನ ತಾಯಿಯನ್ನು ತೊರೆದು ಹೋಗಿದ್ದ; ತದನಂತರ ಆಕೆ ಶಿಶುವೈದ್ಯನೊಬ್ಬನನ್ನು ಮದುವೆಯಾದಳು. ಎರಿಕ್ಸನ್ನನನ್ನು ಆತನ ತಾಯಿ ಮತ್ತು ದತ್ತು ತಂದೆ ಬೆಳೆಸಿದರು. ಕೆಲ ಕಾಲ ಕಲೆಗಾರ ಮತ್ತು ಶಿಕ್ಷಕನಾಗಿ ಕೆಲಸ ಮಾಡಿದ ಅವನು, ಮನೋವಿಶ್ಲೇಷಣೆಗೆ ಒಳಪಟ್ಟ ನಂತರ ತಾನೂ ವಿಶ್ಲೇಷಕನಾಗಲು ನಿರ್ಧರಿಸಿದ. ಮಕ್ಕಳ ವಿಶ್ಲೇಷಣೆ ಆತನ ಮುಂಚಿನ ಪ್ರವೀಣತ್ವವಾಗಿತ್ತು. ಈತ ಬಹಳಷ್ಟು ವರ್ಷಗಳ ಕಾಲ ಚಿಕಿತ್ಸಕನಾಗಿ ಕೆಲಸ ಮಾಡಿದ. 1933ರಲ್ಲಿ ಅಮೇರಿಕ ಸಂಯುಕ್ತ ಸಂಸ್ಥಾನಕ್ಕೆ ವಲಸೆ ಹೋದ ಅವನು ಹಾರ್ವರ್ಡ್, ಯೇಲ್, ಹಾಗೂ ಬರ್ಕಲಿಗಳಲ್ಲಿ ಕಲಿಸಿದ. ವಿವರವಾದ ಚರಿತ್ರೆಗಾಗಿ ಚಾಪ್ಮನ್ (2006-07) ನೋಡಿ.

3. ಮನೋರೋಗಶಾಸ್ತ್ರ ಮತ್ತು ಮನೋವಿಶ್ಲೇಷಣೆಗಳ ವಿಸ್ತೃತ ಅವಲೋಕನಕ್ಕಾಗಿ ಎರಿಕ್ಸನ್ (1963) ನೋಡಿ.

4. ಈ ಸಮಗ್ರ ವಿಕಾಸಾತ್ಮಕ ದೃಷ್ಟಿಕೋನವು CBSE ತನ್ನ ನಿರಂತರ ಸಮಗ್ರ ಮೌಲ್ಯಮಾಪನದ (CCE) ಅಂಗವಾಗಿ ಪರಿಚಯಿಸಿದ ಸಾಮಾಜಿಕ ಮತ್ತು ಭಾವನಾತ್ಮಕ ವಿಕಾಸದ 'ಬೋಧನೆ ಮತ್ತು ಮೌಲ್ಯಮಾಪನ'ಕ್ಕಿಂತ ನಿಶ್ಚಿತವಾಗಿ ಬೇರೆಯಾದುದು ಎನ್ನುವುದನ್ನು ಗುರುತಿಸುವುದು ಇಲ್ಲಿ ಬಹಳ ಮುಖ್ಯ.

5. ಎರಿಕ್ಸನ್ ಮನೋವಿಶ್ಲೇಷಣೆಗೆ ಒಳಗಾದ ನಂತರ ಒಬ್ಬ ವಿಶ್ಲೇಷಕನಾಗಿ ಕೆಲಸ ಮಾಡಲು ನಿರ್ಧರಿಸಿದ.

6. ಎರಿಕ್ಸನ್ ಆಧುನಿಕ ಸಮಾಜದ ಮೇಲೆ ಗಮನಾರ್ಹ ಪ್ರಭಾವ ಬೀರಿದ್ದ ನಾಯಕರ ವ್ಯಕ್ತಿತ್ವ ವಿಕಾಸದ ಮೇಲೆ ವಿಸ್ತೃತವಾಗಿ ಬರೆದಿದ್ದಾನೆ. ಇವರಲ್ಲಿ ಪ್ರಮುಖರಾದವರು ಮೋಹನದಾಸ ಕರಮಚಂದ ಗಾಂಧಿ, ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, ಹಾಗೂ ಮ್ಯಾಕ್ಸಿಮ್ ಗೋರ್ಕಿ.

7. ಎರಿಕ್ಸನ್ನನ ಆಲೋಚನೆಗಳ ಆಳವಾದ ಓದಿಗಾಗಿ ಗ್ರಂಥಾವಲೋಕನ ವಿಭಾಗದಲ್ಲಿ ಪಟ್ಟಿ ಮಾಡಿರುವ ಆತನ ಮೂಲ ಬರಹಗಳನ್ನು ನೋಡಿ.

8. ನಮ್ಮಲ್ಲಿ ಹೆಚ್ಚಿನವರು ತೀವ್ರ ಭಾವನೆಗಳನ್ನು ಅನುಭವಿಸುವ ಅಗತ್ಯತೆ ಬೀಳದೆ ಜೀವನದ ಹಾದಿಯನ್ನು ಕ್ರಮಿಸಿರುತ್ತೇವೆ.

9. ಪ್ರತಿ ಹಂತಕ್ಕೆ ನೀಡಲಾಗಿರುವ ವಯಸ್ಸಿನ ಶ್ರೇಣಿಗಳಿಗೆ ಹೊರತಾಗಿ, ಹಂತಗಳು ಒಂದರ ಮೇಲೆ ಇನ್ನೊಂದು ಸಾಕಷ್ಟು ವ್ಯಾಪಿಸಿರುತ್ತವೆ, ಅದರಲ್ಲೂ ಮಾನವ ಶಿಶು ಹರೆಯ ಮತ್ತು ಪ್ರೌಢತೆಯ ನಂತರದ ಹಂತಗಳನ್ನು ತಲುಪಿದಾಗ.

10. ಸಾಂಪ್ರದಾಯಿಕ ಕುಟುಂಬವೊಂದರಲ್ಲಿ ಸೊಸೆಯ ವಿರುದ್ಧದ ಪಕ್ಷಪಾತಗಳು, ವರದಕ್ಷಿಣೆಗಾಗಿ ಭಾರೀ ಬೇಡಿಕೆಗಳು, ಮತ್ತು ಹೆಣ್ಣು ಮಗುವಿನ ಜನನ ತಾಯಿ-ಮಗುವಿನ ಸಂಬಂಧದಲ್ಲಿ ಋಣಾತ್ಮಕ ಪರಿಣಾಮವನ್ನು ಬೀರಬಹುದು. ಉತ್ಕಟ ಸ್ಥಿತಿಗಳಲ್ಲಿ, ತಾಯಿ ತನ್ನ ಮೊದಲನೆಯ ಹೆಣ್ಣು ಮಗುವಿಗೆ ಪೋಷಣೆ ಮತ್ತು ಉತ್ತೇಜನೆಯನ್ನು ಕೊಡದೆ ಇರುವ ಪರಿಸ್ಥಿತಿಯಲ್ಲಿ ಇರಬಹುದು. ಈ ತಾರತಮ್ಯಗಳ ಮಟ್ಟ ಅಪ್ಪಟ ಸಾಮಾನ್ಯ ಕುಟುಂಬದ ಸನ್ನಿವೇಶಗಳಲ್ಲಿ ಸಹ ತಾಯಿ-ಮಗುವಿನ ಜೋಡಿಯನ್ನು ವಿಭಿನ್ನ ರೀತಿಗಳಲ್ಲಿ ಕಾಡಬಹುದು.

11. ಭ್ರೂಣದಲ್ಲಿ ನರತಂತುಗಳಿಗೆ 'ಮಯಲಿನ್' ಪದರು (myelin sheath) ರೂಪುಗೊಳ್ಳುವ ಪ್ರಕ್ರಿಯೆ; ನರವೊಂದರ ಸುತ್ತಲಿನ ಮಯಲಿನ್ ಪದರದ ರಚನೆಯು ನರ ಸಂವೇದನೆಗಳನ್ನು ವೇಗವಾಗಿ ಚಲಿಸಲು ಅನುವು ಮಾಡಿಕೊಡುತ್ತದೆ. ಮಯಲೀಕರಣವು ಶಿಶುವಿನಿಂದ ಹಿಡಿದು ವಯಸ್ಕ-ಪೂರ್ವ ಅವಧಿಯವರೆಗೆ ಆಗುತ್ತದೆ.
12. ಇದು ಕೆಲಸದ ಪ್ರಯೋಜನಾತ್ಮಕ ಕಲ್ಪನೆ ಅಲ್ಲ, ಬದಲಾಗಿ ಉದ್ದೇಶ ಮತ್ತು ಅರ್ಥಗಳಿಂದ ಪ್ರೇರೇಪಿಸಲ್ಪಟ್ಟದ್ದು. ಇಲ್ಲಿ ಪ್ರತಿ ಹೊಸ ತಲೆಮಾರಿನ ಎಳೆಯ ಮಕ್ಕಳು ಪ್ರಚಲಿತ ಅಭ್ಯಾಸಗಳನ್ನು ರಚನಾತ್ಮಕವಾಗಿ ಪ್ರಶ್ನಿಸುವ ಮತ್ತು ಹೊಸ ರೀತಿಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕ ವಿನಿಮಯಗಳನ್ನು ಹುಟ್ಟುಹಾಕುವ ಸಾಮರ್ಥ್ಯವನ್ನು ಗಳಿಸಿಕೊಳ್ಳುತ್ತಾರೆ.
13. ದುರದೃಷ್ಟವಶಾತ್, ಉದ್ಯೋಗಶೀಲತೆಯ ನಿರಂತರತೆಯ ಪ್ರಜ್ಞೆಯನ್ನು ಅನುಭವಿಸುವ ಹೆಚ್ಚಿನ ಮಕ್ಕಳ (ಪುನರಾವರ್ತಿತ ವಿಜೇತರು ಮತ್ತು ಉನ್ನತ ಸಾಧಕರ ಹೊರತಾಗಿ) ಅವಕಾಶಗಳು ಕೌಶಲ್ಯಗಳನ್ನು ಗಳಿಸುವಿಕೆಯ ಮೇಲಿನ ಅತಿ ಪ್ರಾಮುಖ್ಯತೆ, ಮೀರಿದ ವರ್ಗ ಗಾತ್ರ, ತೀವ್ರ ಸ್ಪರ್ಧೆ, ಹಾಗೂ ಜೊತೆಗೂಡುವ ಏಕವ್ಯಕ್ತಿ ಪ್ರಾಬಲ್ಯಗಳಿಂದ ಕುಂಠಿತಗೊಳ್ಳುತ್ತವೆ.

## ಗ್ರಂಥಾವಲೋಕನ


Chapman, A. (2006-07). *Erikson's psychosocial development theory.* Retrieved from http://www.businessballs.com/erik_erikson_psychosocial_theory.htm on 16 December 2012.

Erikson, E.H. (1963). *Childhood and society.* New York: W.W. Norton and Company.

---------. (1964). *Insight and responsibility.* New York: W.W. Norton and Company.

---------. (1982). *The life cycle completed: A review.* New York: W.W. Norton and Company.

Kakar, S. (1968). The human life cycle: The traditional Hindu view and the psychology of Erik Erikson. *Philosophy East and West,* 18(3), 127-136. Retrieved from http://www.scribd.com/dic/59955384/Kakar-HumanLifeCycle on 16 Janualry 2013.

Sergiovanni, T.J. (2001). *Leadership: What'sin it for schools?* London: Routledge/Falmer.

Yashpal Committee Report (1993). 'Learning without Burdon', Report of the National Advisory Committee, Ministry of Human Resource Developement, Department of Edication, Government of India, July.